
ಗೌರಿ ಲಂಕೇಶರ


ಲಂಕೇಶ್

ಏಪ್ರಿಲ್ 12, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಕಾರ್ಪೋರೇಟರ್ ಸಮಿಉಲ್ಲಾ ನಾಪತ್ತೆ!

ಚಪ್ಟರ್ ಬಾಬು ಕೈವಾಡ!



ರಾಮಲಿಂಗಾರೆಡ್ಡಿ ಶಿಷ್ಯರಿಂದ ಗುಲ್ಬರ್ಗಾ ಹುಡುಗಿಯ

ಕಿಡ್ನ್ಯಾಪ್ & ರೇಪ್

ಎಂ. ಕ್ಷೇತ್ರದಲ್ಲೇ ಅಕ್ರಮ ಗಣಿಗಾರಿಕೆ



ಾನ್ವಿಯ ಮೂವರು ಮುಠ್ಠಾಳ ಮಾಸ್ತರು

ಶಾಸಕ ಆಂಜನೇಯ:

ಾದಿಗರಿಗೆ ಮೋಸ-ಲಿಂಗಾಯತರಿಗೆ ಸಲಾಮ್!

ಾಜಕಾರಣಿಗಳ ಇಸ್ಪೀಟ್ ಅಡ್ಡೆ

ಗೋಲ್ಡ್‌ಪಿಂಚ್



ಆರ್ಥಿಕ ಸುಧಾರಣಾ ಕ್ರಮಗಳ ಹೆಸರಲ್ಲಿ, ಪ್ರಾರಂಭವಾಗಿರುವ ವಿಶ್ವಬ್ಯಾಂಕ್ ಪ್ರಾಯೋಜಿತ ಆರ್ಥಿಕ ನೀತಿಗಳು ನಿಜಕ್ಕೂ ಬಡತನವನ್ನು ಕಡಿಮೆ ಮಾಡುತ್ತಿವೆಯೇ? ಈ ಕ್ರಮಗಳಿಂದ ನಿಜಕ್ಕೂ ಬಡವರಿಗೆ ಹೆಚ್ಚಿನ ಸಂಪನ್ಮೂಲ ದೊರಕುತ್ತಿದೆಯೇ?

ಅನುಮಾನವಿದ್ದರೆ ಕೆಳಗಿನ ಅಂಕಿ ಅಂಶಗಳನ್ನೇ ಗಮನಿಸಿ. ಇದೇ 90ರ ದಶಕದಲ್ಲಿ ದೇಶದ ಆರ್ಥಿಕ ಅಭಿವೃದ್ಧಿಯ ದರ ಶೇ.5ರಷ್ಟಿತ್ತಂತೆ. ಅದು ಹೊಸ ಶತಮಾನದಲ್ಲಿ ಶೇ.8ರಿಂದ 10ರಷ್ಟಾಗುತ್ತಿದೆಯಂತೆ. ಆದರೆ ಅದೇ ಸರ್ಕಾರದ ಮತ್ತೊಂದು ಅಂಕಿ ಅಂಶದ ಪ್ರಕಾರ ಇದೇ ಅವಧಿಯಲ್ಲಿ ಬಡತನದ ಇಳಿಕೆ ಪ್ರಮಾಣ ಯಾವತ್ತೂ ಶೇ.0.81ನ್ನು ದಾಟಲೇ ಇಲ್ಲವಂತೆ!

ಅಷ್ಟು ಮಾತ್ರವಲ್ಲ, ಕಳೆದ ಬಜೆಟ್ಟನ್ನೇ ಗಮನಿಸಿದರೂ

ಒಂದು ಸತ್ಯ:

ಈ ಅಂಶ ಇನ್ನಷ್ಟು ನಿಚ್ಚಳವಾಗಿ ಅರ್ಥವಾಗುತ್ತದೆ. ಕಳೆದ ಬಾರಿ ದೊಡ್ಡ ದೊಡ್ಡ ಕಂಪನಿಗಳಿಗೆ ಕೊಟ್ಟಿರುವ ತೆರಿಗೆ ರಿಯಾಯಿತಿಯ ಒಟ್ಟು ಮೊತ್ತ 1,58,661 ಕೋಟಿ ರುಪಾಯಿಗಳೆಂದು ಅಂದಾಜಿಸಲಾಗಿದೆ. ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ದೇಶದ ಎಲ್ಲಾ ಕಡುಬಡವರಿಗೆ ಉಚಿತವಾಗಿ ಪಡಿತರ ಕೊಟ್ಟರೂ ತಗಲುತ್ತಿದ್ದ ವೆಚ್ಚ 58,000 ಕೋಟಿಗಳು ಮಾತ್ರವೆಂದು ಅಂದಾಜಿಸಲಾಗಿದೆ.

ಸರ್ಕಾರ ಅಷ್ಟು ಹಣ ಬಿಡುಗಡೆ ಮಾಡುತ್ತದೆಂಬ ನಿರೀಕ್ಷೆ ಯಾವ ಬಡವರಿಗೂ ಇಲ್ಲ. ಆದರೆ ಈವರೆಗೆ ಸರ್ಕಾರ ಈ ಬಾಬತ್ತಿಗೆಂದೇ ಪ್ರತಿ ವರ್ಷ 25,000 ಕೋಟಿಗಳನ್ನು ತೆಗೆದಿಡುತ್ತಿತ್ತು. ಆ ಮೊತ್ತ ಕಡುಬಡವರ ಅರ್ಧ ತಿಂಗಳ ಅಗತ್ಯವನ್ನೂ ಪೂರೈಸುತ್ತಿರಲಿಲ್ಲ ಎಂಬುದು ಬೇರೆ ಮಾತು. ಈಗ ಸರ್ಕಾರ ಅದರಲ್ಲೂ 5,000 ಕೋಟಿ ಕಡಿತ ಮಾಡಿದೆ. ಅದೇ ಕೈಯಲ್ಲಿ ದೊಡ್ಡ ದೊಡ್ಡ ಕಂಪನಿಗಳಿಗೆ 1,50,000 ಕೋಟಿ ಬಹುಮಾನ ನೀಡಿದೆ. ಇದೇ ಯು.ಪಿ.ಎ. ಸರ್ಕಾರದ ಸತ್ಯ

ಈಗ ಇಡೀ ಭಾರತದಲ್ಲಿ ಗೋಧಿಯ ಮಟ್ಟಿಗೆ ಒಳ್ಳೆ ಫಸಲಾಗಿದೆ. ಆದರೆ ಅದು ರೈತರ ಕಷ್ಟವನ್ನು ನಿವಾರಿಸಿಲ್ಲ, ಏಕೆಂದರೆ ರೈತರಿಗೆ ಫಸಲು ಬರಲಿಲ್ಲ ಎಂಬುದು ಒಂದು ಗೋಳಾದರೆ, ಫಸಲು ಬಂದರೂ ಅದಕ್ಕೆ ಸರಿಯಾದ ಬೆಲೆ ಸಿಗಲಿಲ್ಲ ಎಂಬುದು ಮತ್ತೊಂದು ಗೋಳು. ಈ ಗೋಳುಗಳಿಂದಾಗಿ ರೈತರಿಗೆ ಆತ್ಮಹತ್ಯೆಯೇ ಗತಿ ಎಂಬಂತಾಗಿದೆ.

ಒಂದು ಪ್ರಶ್ನೆ:


ಇದರಿಂದ ರೈತರನ್ನು ಬಚಾವು ಮಾಡಲು ಸರ್ಕಾರ ರೈತರಿಂದ ಲಾಭದಾಯಕ ಬೆಲೆಗೆ ಗೋಧಿಯನ್ನು ಖರೀದಿಸಬೇಕಿತ್ತು. ಆದರೆ ಸರ್ಕಾರ ಮಾಡಿದ್ದೇ ಬೇರೆ! ದೇಶದ ರೈತರಿಂದ ಗೋಧಿ ಕೊಳ್ಳುವ ಬದಲು ಆಸ್ಟ್ರೇಲಿಯಾದ ರೈತರಿಂದ ಗೋಧಿ ಕೊಳ್ಳುತ್ತಿದೆ.

ಈಗ ಪ್ರಶ್ನೆಯೇನೆಂದರೆ.. ಸರ್ಕಾರದ ಗೋಡೌನಿನಲ್ಲೇ ಲಕ್ಷ ಲಕ್ಷ ಟನ್ನಿನಷ್ಟು ಗೋಧಿ ಬಿದ್ದಿದ್ದರೂ ಸರ್ಕಾರ ಆಸ್ಟ್ರೇಲಿಯಾದಿಂದ 5 ಲಕ್ಷ ಟನ್ನಿನಷ್ಟು ಗೋಧಿಯನ್ನು ಆಮದು ಮಾಡಿಕೊಂಡಿದ್ದೇಕೆ?

ಈ ದೇಶದ ರೈತರಿಗೆ ಕ್ವಿಂಟಾಲಿಗೆ ಕೇವಲ 650 ರೂ. ಕೊಡುತ್ತಿರುವಾಗ ಆಸ್ಟ್ರೇಲಿಯಾದ ರೈತರಿಗೆ ಕ್ವಿಂಟಾಲಿಗೆ 950ರೂ. ಕೊಡುತ್ತಿರುವುದೇಕೆ?



ಕೋಳಿಗೆ ಜ್ವರವಿಲ್ಲ, ಸರ್ಕಾರಕ್ಕೆ ಮಾನ-ಮರ್ಯಾದೆ ಇಲ್ಲ:



ಕೋಳಿ ಜ್ವರವೆಂಬ ಮೀಡಿಯಾಗಳು ಸೃಷ್ಟಿಸಿದ ಜ್ವರ ಇಳಿದ ಮೇಲೆ ಈಗ ಹಿಂತಿರುಗಿ ನೋಡಿದರೆ ಅರ್ಥವಾಗುವುದಿಷ್ಟು: ಕೋಳಿಜ್ವರವೂ ಇಲ್ಲ, ಸರ್ಕಾರಕ್ಕೆ ಮಾನ-ಮರ್ಯಾದೆಯೂ ಇಲ್ಲ, ಏಕೆಂದರೆ ಈಗ ಸಾಬೀತಾಗಿರುವುದೇನೆಂದರೆ ಕೋಳಿಜ್ವರವೆಂಬುದು ಕೇವಲ ಸರ್ಕಾರ ಹಾಗೂ ಮಾಧ್ಯಮಗಳು ಸ್ವಿಸ್ ಔಷಧಿ ಕಂಪನಿಯೊಂದಕ್ಕೆ ಲಾಭ ಮಾಡಲೆಂದೇ ಸೃಷ್ಟಿಸಿದ ಭಯೋತ್ಪಾದನೆ ಎನ್ನುವುದು.

ವಾಸ್ತವವಾಗಿ ಈವರೆಗೆ ವಿಶ್ವದಲ್ಲೆಲ್ಲೂ ಕೋಳಿಜ್ವರದಿಂದ ಮನುಷ್ಯ ಸತ್ತ ಉದಾಹರಣೆಯಿಲ್ಲ, ಆದರೂ ಸರ್ಕಾರ ಕೋಳಿ ಜ್ವರದಿಂದ ಮನುಷ್ಯರ ಜೀವಕ್ಕೆ ಅಪಾಯವಿದೆ ಎಂಬಂತೆ ಲಕ್ಷ ಲಕ್ಷ ಕೋಳಿಗಳನ್ನು ಕೊಂದುಹಾಕಿ ಕೋಳಿ ಉದ್ಯಮವನ್ನೇ ನಂಬಿಕೊಂಡಿದ್ದವರನ್ನು ಪರೋಕ್ಷವಾಗಿ ಕೊಂದುಹಾಕಿತು.

ಒಂದು ವೇಳೆ ಅದು ಕೋಳಿ ಜ್ವರವೇ ಆಗಿದ್ದರೆ ಅದಕ್ಕೆ ಈವರೆಗೆ ಒಂದು ಔಷಧಿಯನ್ನೂ ಕಂಡುಹಿಡಿಯಲಾಗಿಲ್ಲ. ಆದರೂ ತಾನು ಜನರ ಆರೋಗ್ಯದ ಬ[illegible] ವಿಶೇಷ ಕಾಳಜಿ ವಹಿಸಿರುವ ಸರ್ಕಾರವೆಂಬಂತೆ ನಟಿಸಿತಲ್ಲದೆ, ಕೂಡಲೇ ರೋಷ್ ಎಂಬ ಬಹುರಾಷ್ಟ್ರೀಯ ಸ್ವಿಸ್ ಔಷಧಿ ಕಂಪನಿಯಿಂದ 80 ಕೋಟಿ ರುಪಾ[illegible] ಮೌಲ್ಯದ ಔಷಧಿಗಳನ್ನು ಖರೀದಿಸಿತು.

ಸರ್ಕಾರ ಅದನ್ನು ಖರೀದಿಸಿದ ದರ: ಒಂದು ಕ್ಯಾಪ್ಸೂಲಿಗೆ ಕೇವಲ 12 ಡಾಲರ್ (540 ರೂ.). ಆದರೆ ಅದೇ ಕ್ಯಾಪ್ಸೂಲೊಂದನ್ನು ಇದೇ ದೇಶದ ಸಿಪ್ಲ ಕಂಪ[illegible] ಎರಡೂವರೆ ರೂಪಾಯಿಗೆ ತಯಾರಿಸಲು ಸಿದ್ಧವಿತ್ತು, ಆದರೂ ಸರ್ಕಾರ ಆ ಬಹುರಾಷ್ಟ್ರೀಯ ಕಂಪನಿಯಿಂದಲೇ ಅದನ್ನು ಖರೀದಿಸಿ ಬೊಕ್ಕಸಕ್ಕೆ ತೂತು ಕೊರೆಯಿತ[illegible]

ಇದರಿಂದ ಅರ್ಥವಾಗುತ್ತದೆ. ಅದು ಕೋಳಿಜ್ವರವಲ್ಲ, ಬದಲಾಗಿ ಬಹುರಾಷ್ಟ್ರೀಯ ಕಂಪನಿಗಳು ಮತ್ತು ನಮ್ಮ ದಲ್ಲಾಳಿ ಸರ್ಕಾರಗಳು ಹೆಣೆದ ಕುತಂತ್ರ ಎಂಬುದ[illegible]

ಚಾರ್ವಾಕ

- ಶಿವಸುಂದರ್-

ಮೊಬೈಲ್ ಮೋಸ- ಮುಂದುವರೆದ ಭಾಗ..!

ಇದು ಮೊಬೈಲ್ ಪುರಾಣದ ಮುಂದುವರೆದ ಭಾಗ. ಈಗಾಗಲೇ ಈ ಅಂಕಣದಲ್ಲಿ ಮೊಬೈಲ್ ಕಂಪನಿಗಳು ಲೈಫ್ ಟೈಂ ಯೋಜನೆಯ ಹೆಸರಲ್ಲಿ ಮಾಡುತ್ತಿರುವ ಮೋಸದ ಬಗ್ಗೆ ಬರೆಯಲಾಗಿತ್ತು. ನಂಬಲೇ ಅಸಾಧ್ಯ ಆದರೂ ಸತ್ಯ ಎಂಬಂತೆ ಇದ್ದ ಮೊಬೈಲ್ ಕಂಪನಿಗಳ ಈ ಹಗಲು ದರೋಡೆಗೆ ಸರ್ಕಾರ ಗಾಂಧಾರಿ ಕುರುಡು ಪ್ರದರ್ಶಿಸುವ ಮೂಲಕ ಸಹಕರಿಸಿದ್ದನ್ನು ಈಗಾಗಲೇ ನೋಡಿದ್ದೇವೆ.

ಮೊಬೈಲ್ ಕಂಪನಿಗಳು, ತಮ್ಮ ಮೋಸ ಹೊರಬಂದ ನಂತರ ಲೈಫ್ ಟೈಂ ಎಂದರೆ ಗ್ರಾಹಕರು ಜೀವದಿಂದ ಇರುವವರೆಗೆ ಎಂದರ್ಥವಲ್ಲವೆಂದು ಸ್ಪಷ್ಟಪಡಿಸಿಬಿಟ್ಟವು. ಅಷ್ಟು ಮಾತ್ರವಲ್ಲ ಅದು ತಮ್ಮ ಕಂಪನಿಯ ಲೈಫ್ ಟೈಂ ಕೂಡಾ ಅಲ್ಲ, ಬದಲಿಗೆ ತಾವು ಪಡೆದಿರುವ ಲೈಸೆನ್ಸಿನ ಲೈಫ್ ಟೈಂ ಮಾತ್ರ ಎಂದು ಯಾವುದೇ ಎಗ್ಗುಸಿಗ್ಗಿಲ್ಲದೇ ಘೋಷಿಸಿಬಿಟ್ಟವು. ಸರ್ಕಾರ ಕೂಡಾ ಲೈಫ್ ಟೈಮ್ ಎಂದು ಜನರಿಗೆ ಮೋಸ ಮಾಡಿದ್ದಕ್ಕೆ ಆ ಕಂಪನಿಗಳಿಗೆ ಶಿಕ್ಷೆ ಕೊಡುವುದಿರಲಿ, ಪ್ರಶ್ನೆಯನ್ನೂ ಕೇಳಲಿಲ್ಲ,

ಇರಲಿ. ಈಗ ಈ ಟೆಲಿಕಾಂ ಕ್ಷೇತ್ರದ ನಿಯಂತ್ರಣಕ್ಕೆಂದೇ ಸ್ಥಾಪಿತವಾಗಿರುವ ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯ (TRAI) ಮೊನ್ನೆ ಎಲ್ಲಾ ಮೊಬೈಲ್ ಕಂಪನಿಗಳ ಮೀಟಿಂಗ್ ನಡೆಸಿ "ಲೈಫ್ ಟೈಂ ಎಂದರೆ ಗ್ರಾಹಕರ ಲೈಫ್ ಟೈಂ ಅಲ್ಲ" ಎಂದು ಸ್ಪಷ್ಟವಾಗಿ ತನ್ನ ನಿರ್ಧಾರ ಘೋಷಿಸಿದೆ. ಅಲ್ಲದೆ ಈ ಕಂಪನಿಗಳು ಈ ಕ್ಷೇತ್ರದಲ್ಲಿ ಸೇವೆಯಲ್ಲಿರುವವರೆಗೆ ಲೈಫ್ ಟೈಂ ಅನ್ವಯಿಸುತ್ತದೆ ಎಂದು ಹೇಳಿದೆ. ಇದು ಮೇಲ್ನೋಟಕ್ಕೆ ಗ್ರಾಹಕರ ಪರವಾದ ನಿರ್ಣಯವೆಂದು ಕಂಡರೂ ಇದರಲ್ಲೂ ಒಂದು ಮೋಸವಿದೆ.



ಇದು ಬೇರೆಬೇರೆ ಕಂಪನಿಗಳ ಮರ್ಜರ್‌ಗಳ ಕಾಲ. ಒಂದೇ ಕ್ಷೇತ್ರದಲ್ಲಿರುವ ಎರಡು ಕಂಪನಿಗಳು ವಿಲೀನವಾಗಿಬಿಟ್ಟು "ಹೊಸ" ಕಂಪನಿಗಳು ಉದಯವಾಗುತ್ತಿರುವ ಕಾಲ. ಈಗ ಏರ್‌ಟೆಲ್ ಎಂದು ಕರೆಯಲ್ಪಡುತ್ತಿರುವ ಕಂಪನಿಯು ತನ್ನ ಹಳೆಯ ರೂಪದಲ್ಲಿ ಜೆ.ಟಿ.ಎಂ. ಮತ್ತು ಭಾರತಿ ಟೆಲಿಕಾಮ್ ಎಂದು ಕರೆಸಿಕೊಳ್ಳಲ್ಪಡುತ್ತಿತ್ತು. ಅದು ಏರ್‌ಟೆಲ್ ಎಂದಾದ ಮೇಲೆ ತನ್ನ ಹಳೆಯ ಅವತಾರದಲ್ಲಿ ಏನೇನು ಜವಾಬ್ದಾರಿ ಹೊಂದಿತ್ತೋ ಅದೆಲ್ಲ ಮುಂದುವರೆಯುತ್ತದೆ ಎಂದು ಅರ್ಥವಲ್ಲ, ಈಗ ಟ್ರಾಯ್ ನೀಡಿರುವ ಹೊಸ ನಿರ್ಧಾರ ಸಹ ಈ ಸಾಧ್ಯತೆಯ ಬಗ್ಗೆ ಮೌನವಾಗಿದೆ.

ಅಂದರೆ ಲೈಫ್ ಟೈಮ್ ಎಂಬುದು ಕಂಪನಿಗಳಿಗೆ ಹೊರೆಯಾಗಲು ಪ್ರಾರಂಭಿಸಿದಲ್ಲಿ ಕಂಪನಿಗಳು ತಮ್ಮ ಹಳೆಯ ಲೈಫ್ ಅನ್ನು ಸಾಯಿಸಿ ಹೊಸ ಲೈಫ್‌ನಲ್ಲಿ ಹೊಸ ಕಂಪನಿ ಪ್ರಾರಂಭಿಸಿ ಹಳೆ ಮೋಸ ಮುಂದುವರೆಸಬಹುದು!


No Comments

"ಬಿ.ಜೆ.ಪಿ.ನಾಯಕ ಸಂಜಯ್ ಜೋಷಿಯವ[illegible] ಮೇಲೆ ಮಾಡಲಾಗಿರುವ ಅಸಭ್ಯ ಸಿ.ಡಿ.ಚಿತ್ರಣ[illegible] ಕಿತಾಪತಿಯ ಹಿಂದೆ ಇರುವವರು ಬಿ.ಜೆ.ಪಿ.ಯ[illegible] ನಾಯಕರುಗಳೇ"

-ಪ್ರವೀಣ್ ತೊಗಾಡಿಯ[illegible]

"ವಿಧಾನ ಸಭೆಗೆ ಏನು ಆಟ ಆಡಲು[illegible] ಬಂದಿದ್ದೀರಾ?"

-ಸ್ಪೀಕರ್ ಕೃಷ್ಣ[illegible]



"ಇಂದಿನ ಭಯೋತ್ಪಾದಕರನ್ನು ಮಟ್ಟಹಾಕಲು ಸರ್ಕಾರಗಳು ಅಂದು ಶ್ರೀ ಕೃಷ್ಣ ದುಷ್ಟ ದುರ್ಯೋಧನನ್ನು ಮತ್ತು ಜರಾಸಂಧನನ್ನು ಕೊಲ್ಲಲು ಬಳಸಿದ ತಂತ್ರಗಳನ್ನೇ ಬಳಸಬೇಕು"

-ಪೇಜಾವರ ಸ್ವಾಮೀಜಿಗಳ[illegible]


"ಬಹುಮತ ಪಡೆದ ಯಾವ ಪಕ್ಷಗಳನ್ನೂ[illegible] ದೂರೀಕರಿಸಬಾರದೆಂಬುದನ್ನು ತಿಳಿದುಕೊಳ್ಳಲು ಇದು[illegible] ಸಕಾಲ"

-ಎಂ.ಪಿ.ಪ್ರಕಾಶ್[illegible]

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

"'ಗುಪ್ತ ಮಾರುಕಟ್ಟೆ'ಯನ್ನು ನಾನು ಖರೀದಿ[illegible] ಸುತ್ತಿಲ್ಲ"


-ಕುಮಾರಸ್ವಾಮಿ[illegible]



"ಬಿಜೆಪಿ ಜನಸಂಘದ ಸಿದ್ಧಾಂತವನ್ನು ಗಾಳಿಗೆ ತೂರುತ್ತಿದೆ"

-ಯು. ಆರ್. ಅನಂತಮೂರ್ತಿ

ಇತರ ಪ್ರಾಣಿಗಳಿಗಿಂತ ಮನುಷ್ಯ ಭಿನ್ನವಾಗಿ ಕಾಣುವುದು ಬುದ್ಧಿಶಕ್ತಿಯ ಕಾರಣದಿಂದ. ಈ ವಾರ ಧಾರವಾಡದ ರಾಮಚಂದ್ರ ಕುಲಕರ್ಣಿಯವರು ಕಳಿಸಿದ 'ಬುದ್ಧಿ' ಕುರಿತ ಸೂಕ್ತಿಗಳನ್ನು ಪ್ರಕಟಿಸುತ್ತಿದ್ದೇವೆ. ಇವು ನಿಮ್ಮ ಬುದ್ಧಿಮತ್ತೆಯನ್ನು ಹೆಚ್ಚಿಸಲಿವೆ...



-ಗೌರು

ದಡ್ಡನ ಹೃದಯ ಬಾಯಿಯಲ್ಲಿ; ಬುದ್ಧಿವಂತನ ಬಾಯಿ ಹೃದಯದಲ್ಲಿ -ಫ್ರಾಂಕ್ಲಿನ್

ಸತ್ಯ ಮತ್ತು ಅಹಿಂಸೆಯ ನಡುವಿನ ಆಯ್ಕೆ!

ಪ್ರಜಾಪ್ರಭುತ್ವದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ ಹಕ್ಕು ನ್ಯಾಯಾಲಯಗಳಿಗಿದೆಯೇ ಹೊರತು ಪೋಲೀಸರಿಗಲ್ಲ. ಇಲ್ಲಿ ಪೋಲೀಸರ ಕೆಲಸವೇನಿದ್ದರೂ, ಕ್ರಿಮಿನಲ್‌ಗಳನ್ನು ಪತ್ತೆ ಹಚ್ಚಿ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವುದು. ನಿಜವಾದ ಸಾಕ್ಷ್ಯಾಧಾರಗಳಿದ್ದರೆ ತಪ್ಪಿತಸ್ಥರಿಗೆ ಶಿಕ್ಷೆ ಆಗೇ ಆಗುತ್ತದೆ. ಆಕಸ್ಮಾತ್ ಪೋಲೀಸರು ಸುಳ್ಳು ಸಾಕ್ಷಿಗಳನ್ನು ನೀಡಿದ್ದರೆ, ಆರೋಪಿಗಳು ಖುಲಾಸೆ ಆಗಿ ಆತ ಬಿಡುಗಡೆ ಆಗುತ್ತಾನೆ. ಇದೆಲ್ಲದರ ಬದಲಾಗಿ, ಪೋಲೀಸರೇ ಶಿಕ್ಷೆ ವಿಧಿಸಿದರೆ, ಅದು ಪ್ರಜಾಪ್ರಭುತ್ವದ ಅಣಕ ಮಾತ್ರ ಆಗುವುದಿಲ್ಲ, anarchyಗೆ ದಾರಿ ಮಾಡಿಕೊಟ್ಟಂತಾಗುತ್ತದೆ.

ಇಷ್ಟೆಲ್ಲ ಏಕೆ ಹೇಳಬೇಕಾಯಿತೆಂದರೆ, ಮೊನ್ನೆ ನಕ್ಸಲೈಟ್ ನಾಯಕ ಉಜ್ಜನಿ ಗೌಡರನ್ನು ಹೊಸಪೇಟೆಯ ನ್ಯಾಯಾಲಯ ನಿರಪರಾಧಿ ಎಂದು ಘೋಷಿಸಿ ಬಿಡುಗಡೆ ಮಾಡಿದ್ದನ್ನು ದಿನ ಪತ್ರಿಕೆಗಳಲ್ಲಿ ಓದಿದೆ. ಆಗ ಅವರು ಬಂಧನಕ್ಕೊಳಗಾದ 2004ರ ನವೆಂಬರ್‌ನ ಆ ದಿನಗಳು ನೆನಪಿಗೆ ಬರತೊಡಗಿದವು. ಆ ದಿನಗಳಲ್ಲಿ ಪೋಲೀಸರು ಅವರನ್ನು ಬಂಧಿಸಿದ್ದನ್ನು ಸರಕಾರ ನಿರಾಕರಿಸಿತ್ತಲ್ಲದೇ ಪೋಲೀಸರು ಉಜ್ಜನಿ ಗೌಡರನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದುಹಾಕಲು ಸಜ್ಜಾಗಿದ್ದರು. ಆಗ ನಮ್ಮ 'ಶಾಂತಿಗಾಗಿ ನಾಗರೀಕರ ವೇದಿಕೆ' ಮಧ್ಯ ಪ್ರವೇಶಿಸಿ, ಉಜ್ಜನಿ ಗೌಡರ ವಿರುದ್ಧ ಕಾನೂನು ಪ್ರಕಾರ ಮೊಕದ್ದಮೆಗಳನ್ನು ದಾಖಲಿಸಬೇಕೇ ಹೊರತು ಅವರನ್ನು ನಕಲಿ ಎನ್‌ಕೌಂಟರ್‌ನಲ್ಲಿ ಸಾಯಿಸಕೂಡದು ಎಂದೇ ಹೇಳಿತ್ತು. ಆದರೂ ಸರಕಾರ ಹಾಗು ಪೋಲೀಸರು ತಯಾರಿರಲಿಲ್ಲ. ಉಜ್ಜನಿ ಗೌಡರನ್ನು ಅಕ್ರಮವಾಗಿ ಬಂಧಿಸಿದ ಎರಡು ದಿನಗಳ ನಂತರ ಅವರನ್ನು ಕಾರ್‌ನಲ್ಲಿ ಎನ್ನೆಲ್ಲಿಗೋ ಸಾಗಿಸುತ್ತಿರುವಾಗ, ಬಳ್ಳಾರಿಯ ಗಣಿ ಮಾಲೀಕ ಮತ್ತು ಪೋಲೀಸರ ನಡುವೆ ರಸ್ತೆಯಲ್ಲಿ ಜಗಳ ಪ್ರಾರಂಭವಾಗಿ, ಗುಂಡುಗಳು ಹಾರಿ, ಆ ಪ್ರಕರಣವನ್ನು ಸೂಕ್ತವಾಗಿ ವಿವರಿಸಲಾಗದೆ ಕೊನೆಗೆ ಪೋಲೀಸರು ಉಜ್ಜನಿ ಗೌಡರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದರು.



ಈಗ ಯಾವ ಕಾರಣಕ್ಕೆ ಸರ್ಕಾರ ಹಾಗೂ ಪೋಲೀಸರು ಅವರನ್ನು ಸಾಯಿಸಿಬಿಡಬೇಕೆಂದಿದ್ದರೋ ಆ ಕಾರಣಗಳು ಸುಳ್ಳೆಂದು ನ್ಯಾಯಾಲಯ ಸಾಕ್ಷ್ಯಾಧಾರಗಳ ವಿಚಾರಣೆ ನಡೆಸಿ ಅವರನ್ನು ಬಿಡುಗಡೆ ಮಾಡಿದೆ.

ಇದೇ ರೀತಿ ಹೋದ ತಿಂಗಳು ಮತ್ತೊಬ್ಬ ನಕ್ಸಲೈಟ್ ನಾಯಕ ರಮೇಶ್‌ರ ವಿಚಾರದಲ್ಲೂ ಪೋಲೀಸರು ಹಾಕಿದ್ದ 20ಕ್ಕೂ ಹೆಚ್ಚು ಕೇಸುಗಳನ್ನು ರಾಯಚೂರು ನ್ಯಾಯಾಲಯ ಖುಲಾಸೆಗೊಳಿಸಿ ಒಂದು ಪ್ರಕರಣದಲ್ಲಿ 5 ವರ್ಷ ಸಜೆ ವಿಧಿಸಿದೆ. ರಮೇಶ್ ಈಗ ಗುಲ್ಬರ್ಗಾ ಜೈಲಿನಲ್ಲಿ ಸಜೆ ಅನುಭವಿಸುತ್ತಿದ್ದಾರೆ.

ಈ ಎರಡು ಬೆಳವಣಿಗೆಗಳು ಸ್ವಾಗತಾರ್ಹವೇ. ಏಕೆಂದರೆ ಮೊದಲೇ ಹೇಳಿದಂತೆ ತಪ್ಪು ಯಾರದೆಂದು ಮತ್ತು ಅದಕ್ಕೆ ಶಿಕ್ಷೆ ಎಷ್ಟೆಂದು ನಿರ್ಧಾರ ಮಾಡಬೇಕಿರುವುದು ನ್ಯಾಯಾಲಯಗಳೇ ವಿನಃ ಪೋಲೀಸು ಅಥವಾ ಸರ್ಕಾರಗಳಲ್ಲ. ವಿಚಾರಣೆಗೆ ಮುನ್ನವೇ ಶಿಕ್ಷೆ ಘೋಷಿಸುವುದು ಒಂದು ಪ್ರಜಾತಂತ್ರ ಪದ್ಧತಿ ಅಲ್ಲ. ತಮ್ಮನ್ನು ತಾವು ಪ್ರಜಾತಂತ್ರವಾದಿಗಳೆಂದು ಕರೆದುಕೊಳ್ಳುವವರು ಇದರ ಬಗ್ಗೆ ಕುರುಡಾಗಿದ್ದರೆ ಅವರು ಪ್ರಜಾತಂತ್ರವಾದಿಗಳೇ ಅಲ್ಲ. ನಾವು ನಕ್ಸಲೈಟರ ಸಿದ್ಧಾಂತವನ್ನಾಗಲೀ ಅಥವಾ ಅವರು ಪ್ರತಿಪಾದಿಸುವ ಸಶಸ್ತ್ರ ಹೋರಾಟವನ್ನಾಗಲಿ ಒಪ್ಪುತ್ತೇವೋ, ಬಿಡುತ್ತೇವೋ, ಅದು ಬೇರೆ ಮಾತು. ಆದರೆ ಅಹಿಂಸಾವಾದಿಗಳು ತಿರಸ್ಕರಿಸುವ ನಕ್ಸಲರನ್ನು ಪ್ರಭುತ್ವ ಅತ್ಯಂತ ನಿರಂಕುಶವಾಗಿ ಕೊಂದುಹಾಕುತ್ತಿದ್ದರೆ ಅದು ಕೊಲ್ಲುವುದು ಕೇವಲ ನಕ್ಸಲೈಟರನ್ನಲ್ಲ, ಬದಲಾಗಿ ಪ್ರಜಾಪ್ರಭುತ್ವವನ್ನು. ಪ್ರಭುತ್ವ ಹಿಂಸೆಯನ್ನು ಬಳಸಿ ನಕ್ಸಲ್ ಹಿಂಸೆಯನ್ನು ಮಟ್ಟಹಾಕಿದರೆ ಗೆಲ್ಲುವುದು ಹಿಂಸೆ ಮತ್ತು ನಿರಂಕುಶತೆಯೇ ಹೊರತು ಅಹಿಂಸೆ ಮತ್ತು ಪ್ರಜಾಸತ್ತೆಯಲ್ಲ.

'ಶಾಂತಿಗಾಗಿ ನಾಗರೀಕರ ವೇದಿಕೆ' ಉಜ್ಜನಿ ಗೌಡರ ಪ್ರಕರಣವನ್ನು ಅತಿ ತುರ್ತಾಗಿ ಸರ್ಕಾರದ ಗಮನಕ್ಕೆ ತಂದು ಪೋಲೀಸರಿಂದ ಆಗಬಹು

ಕಂಡಹಾಗೆ



ದಾಗಿದ್ದ ಮತ್ತೊಂದು ಸುಳ್ಳು ಎನ್‌ಕೌಂಟರ್ ಅನ್ನು ತಡೆಯುವ ಪ್ರಯತ್ನ ಮಾಡಿದ್ದು ಇದೇ ಕಾರಣಕ್ಕಾಗಿಯೇ ಹೊರತು ನಕ್ಸಲರ ಮೇಲಿನ ಮಮತೆಯಿಂದಲ್ಲ.

ಅಂದು ಉಜ್ಜನಿಗೌಡರನ್ನು ಆತ ನಕ್ಸಲನೆಂಬ ಕಾರಣಕ್ಕೆ ಸುಳ್ಳು ಎನ್‌ಕೌಂಟರ್‌ನಲ್ಲಿ ಕೊಂದುಹಾಕಿದ್ದರೆ ಈ ರಾಜ್ಯದಲ್ಲಿ ನಕ್ಸಲರು ನಾಮಾವಶೇಷವಾಗುತ್ತಿದ್ದರೆ? ಇತ್ತೀಚೆಗೆ ಸದನದಲ್ಲಿ ಮುಖ್ಯಮಂತ್ರಿಗಳೇ ಕೊಟ್ಟಿರುವ ಉತ್ತರದ ಪ್ರಕಾರ ಕಳೆದ ಒಂದು ವರ್ಷದಲ್ಲಿ ನಕ್ಸಲರ ಬಲ ಕಡಿಮೆ ಆಗುವುದಿರಲಿ ಬದಲಿಗೆ ಹೆಚ್ಚಿದೆ. ಪೋಲೀಸ್ ಇಲಾಖೆಯ ವರದಿಯಂತೆ ಕಳೆದ ಒಂದು ವರ್ಷದಲ್ಲಿ 200ಕ್ಕೂ ಹೆಚ್ಚು ಸ್ಥಳೀಯರು ನಕ್ಸಲರನ್ನು ಸೇರಿದ್ದಾರಂತೆ. ಇದಕ್ಕೆ ಕಾರಣವೇನು? ಖಂಡಿತವಾಗಿಯೂ ನಕ್ಸಲರ ಪ್ರಚಾರಕ್ಕಿಂತ, ಸರಕಾರದ ನಿರ್ಲಕ್ಷ್ಯ ಕಾರಣ ಅಲ್ಲವೆ? ಸರ್ಕಾರದ ಪ್ರಕಾರ ಕಾಡಿನಿಂದ ಎತ್ತಂಗಡಿ ಆಗುವ ಭಯದಿಂದ ಆದಿವಾಸಿಗಳು ಹಾಗೂ ಸ್ಥಳೀಯರು ನಕ್ಸಲರನ್ನು ಸೇರುತ್ತಿದ್ದಾರೆ. ಹಾಗಿದ್ದಲ್ಲಿ ಆ ಮೂಲ ಕಾರಣದತ್ತ ಸರಕಾರ ವಿಚಾರಣೆ ಮಾಡಬೇಕಲ್ಲವೆ? ಅಷ್ಟೇ ಅಲ್ಲ, ನಕ್ಸಲ್ ಹಿಂಸೆಯನ್ನು ಖಂಡಿಸುವ ನಾಗರೀಕರು ಎತ್ತಂಗಡಿ ಆಗುತ್ತಿರುವ ಆದಿವಾಸಿಗಳ ಪರವಾಗಿ ಹೋರಾಡಬೇಕಲ್ಲವೆ? ಆದರೆ ಸರಕಾರ ಮತ್ತು ನಾಗರೀಕ ಸಮಾಜ ಈ ದಿಕ್ಕಿನಲ್ಲಿ ಮಾಡಿರುವುದು ಎಷ್ಟು? ಏನು?

ಸರ್ಕಾರ ಕುದುರೆಮುಖ ನ್ಯಾಷನಲ್ ಪಾರ್ಕ್‌ನಿಂದ ಆದಿವಾಸಿಗಳ ಹಾಗೂ ರೈತರ ಎತ್ತಂಗಡಿಗೆ ಆದೇಶ ಹೊರಡಿಸಿದೆ. ನಕ್ಸಲರ ಪ್ರಾಬಲ್ಯ ಇರುವ ಕಡೆ ಮಾತ್ರ ಎತ್ತಂಗಡಿ ಮಾಡುವುದಿಲ್ಲವೆಂಬ ಬೋರ್ಡ್ ತೂಗು ಹಾಕಿದೆ. ಅಷ್ಟು ಮಾತ್ರವಲ್ಲ ಈ ಸಾರಿ ಬಜೆಟ್ಟನಲ್ಲೂ ನಕ್ಸಲರ ದಮನಕ್ಕೆಂದು ವಿಶೇಷವಾಗಿ 5 ಕೋಟಿ ಎತ್ತಿಡಲಾಗಿದೆ. ಆದರೆ ಆದಿವಾಸಿಗಳ ಹಿತರಕ್ಷಣೆಗೆ ಒಂದು ಪೈಸೆಯೂ ಇಲ್ಲ. ಇದರೊಡನೆ ತಮ್ಮ ಜೀವಿಸುವ ಹಕ್ಕನ್ನು ಕಾಪಾಡಿಕೊಳ್ಳಲು ಎತ್ತಂಗಡಿ ವಿರುದ್ಧ ಹೋರಾಡುತ್ತಿರುವ ಆದಿವಾಸಿಗಳ ಮೇಲೆ ಪೋಲೀಸ್ ದೌರ್ಜನ್ಯ ಹೆಚ್ಚಾಗುತ್ತಿದೆಯಲ್ಲದೆ ಅವರು ನಕ್ಸಲೈಟರ ಬೆಂಬಲಿಗರೆಂದು ಕಿರುಕುಳಗಳೂ ಜಾಸ್ತಿ ಆಗಿವೆ.

ಈಗ ಕಾಡುತ್ಪನ್ನವನ್ನೇ ಆಧರಿಸಿರುವ ಆದಿವಾಸಿಗಳನ್ನು ಹೊರಹಾಕಿ ಲಾಭಕ್ಕಾಗಿ ಅದೇ ಕಾಡುತ್ಪನ್ನದ ಮೇಲೆ ಕಣ್ಣಿಟ್ಟಿರುವ ಬಹುರಾಷ್ಟ್ರೀಯ ಕಂಪನಿಗಳಿಗೆ ಸಕಲ ಅವಕಾಶ ನೀಡುತ್ತಿದೆ ಸರಕಾರ. ಒಂದೆಡೆ ಅದನ್ನು ಪ್ರಶ್ನಿಸುವವರನ್ನು ನಕ್ಸಲರೆಂದು ಕೊಲ್ಲುವ ಪೋಲೀಸರು. ಇನ್ನೊಂದೆಡೆ ಇದು ಅನ್ಯಾಯವೆಂದವರೆನ್ನೆಲ್ಲಾ ನಕ್ಸಲ್ ಬೆಂಬಲಿಗರೆನ್ನುವ ಅಹಿಂಸಾವಾದಿಗಳು. ಈ ವಿಷಚಕ್ರ ಮುರಿಯುವುದು ಎಂದು?

ಕೊನೆಯದಾಗಿ ಗಾಂಧಿ ಹೇಳಿದ ಒಂದು ಮಾತು ಜ್ಞಾಪಕಕ್ಕೆ ಬರುತ್ತಿದೆ : "ಸತ್ಯ ಅಥವಾ ಅಹಿಂಸೆಯ ನಡುವೆ ಯಾವುದಾದರೂ ಒಂದನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವ ಅನಿವಾರ್ಯತೆ ನನಗೆ ಎದುರಾದರೆ ನಾನು ಸತ್ಯವನ್ನು ಆಯ್ಕೆ ಮಾಡಿಕೊಳ್ಳುತ್ತೇನೆ."

-ಗೌರಿ ಲಂಕೇಶ್

ಇಶಾನಿಯ ಚಿನ್ನು.... ಹೆಣ್ಣೆಂಬ ಹೊನ್ನು.....

ಕಬೀರನ ಸ್ನೇಹಿತರಾದ ಕಿಶನ್ ಮತ್ತು ಇಶಾನಿ ಹಲವು ವರ್ಷಗಳಿಂದ ಮಕ್ಕಳಿಗಾಗಿ ಪ್ರಯತ್ನಿಸುತ್ತಿದ್ದರು. ಆದರೆ ಅವರ ಯಾವ ಪ್ರಯತ್ನಗಳೂ ಫಲಿಸಿರಲಿಲ್ಲ. ಶನಿವಾರ ಸಂಜೆ ನಾನು ಮತ್ತು ಕಬೀರ್ ಜೊತೆಗಿದ್ದಾಗ ಫೋನ್ ಮಾಡಿದ ಕಿಶನ್ "ನಮ್ಮ ಸಂಸಾರಕ್ಕೆ ಹೊಸ ಸೇರ್ಪಡೆಯೊಂದಾಗಿದೆ, ಬಂದು ನೋಡು" ಅಂದ.

ಕಿಶನ್‌ನ ಹವ್ಯಾಸಗಳ ಬಗ್ಗೆ ಗೊತ್ತಿದ್ದ ಕಬೀರ್ "ಏನು? ಮತ್ತೊಂದು ಕಾರ್ ಕೊಂಡುಕೊಂಡೆಯಾ? ಅಥವಾ ಹೊಸ ಕಂಪ್ಯೂಟರ್ ಖರೀದಿಸಿದೆಯಾ?" ಎಂದು ಕೇಳಿದ.

"ಅದೆಲ್ಲ ಅಲ್ಲ. ನೀನೇ ಬಂದು ನೋಡು. It is a surprise" ಎಂದ ಕಿಶನ್.

ಹೇಗಿದ್ದರೂ ನಾನು ಮತ್ತು ಕಬೀರ್ ಫ್ರೀ ಇದ್ದಿದ್ದರಿಂದ ಕಿಶನ್ ಮತ್ತು ಇಶಾನಿ ಮನೆಗೆ ಹೋಗಲು ನಿರ್ಧರಿಸಿದೆವು. ಇಂದಿರಾನಗರದಲ್ಲಿರುವ ಅವರ ಮನೆಯ ಬಾಗಿಲು ತಟ್ಟುತ್ತಿದ್ದಂತೆಯೇ ಒಳಗಿಂದ ಮಗುವೊಂದು ನಗುತ್ತಿರುವ ಶಬ್ದ ಕೇಳಿಸಿತು. ನಾನು ಮತ್ತು ಕಬೀರ್ ಒಬ್ಬರ ಮುಖವನ್ನೊಬ್ಬರು ನೋಡಿದೆವು.

ಆಗ ಬಾಗಿಲು ತೆರೆದ ಇಶಾನಿ ಮುಖದಲ್ಲಿ ಸಂತೋಷ, ಸಂಭ್ರಮ ತುಂಬಿ ತುಳುಕುತ್ತಿತ್ತು, "ಬನ್ನಿ, ಬಂದು ನಮ್ಮ ಮಗುವನ್ನು ನೋಡಿ" ಎಂದು ಹೇಳುತ್ತಲೇ ಆಕೆ ಬೆಡ್‌ರೂಮಿಗೆ ಸರಸರ ನಡೆದಳು. ಅಚ್ಚರಿಗೊಂಡ ನಾವಿಬ್ಬರೂ ಆಕೆಯನ್ನು ಹಿಂಬಾಲಿಸಿ ನೋಡಿದರೆ ಹಾಸಿಗೆಯ ಮೇಲೆ ಪುಟ್ಟ ಮಗುವೊಂದು ಮಲಗಿದೆ; ಅದರ ಪಕ್ಕದಲ್ಲೇ ಆಟಿಕೆಗಳಿಂದ ಸುತ್ತುವರಿದು ಕೂತಿರುವ ಕಿಶನ್ ಆ ಕೂಸಿನೊಂದಿಗೆ ಆಟವಾಡುತ್ತಿದ್ದಾನೆ.

"ಇದು ನಿಜವಾಗಲೂ surprise. ಯಾವಾಗಿನಿಂದ ರೆಡಿಮೇಡ್ ಮಗು ಸಿಗಲಾರಂಭಿಸಿತು?" ಎಂದು ಕಬೀರ್ ಕೇಳಿದ.

"ಅದನ್ನೆಲ್ಲ ಹೇಳ್ತೀನಿ. ಮೊದಲು ನಮ್ಮ ಮಗಳು ಹೇಗಿದ್ದಾಳೆ ನೋಡು" ಎಂದ ಕಿಶನ್.

ಎಲ್ಲಾ ಹಸುಳೆಗಳಂತೆ ಆ ಮೂರು ತಿಂಗಳ ಹೆಣ್ಣು ಮಗು ಕೂಡ ಪುಟ್ಟ ಕಣ್ಣುಗಳ ಚೈನೀಸ್ ಮುಗುಳುನಗುತ್ತಿತ್ತು, ಕೈ ಕಾಲುಗಳನ್ನು ಆಡಿಸುತ್ತಾ, ಪಿಳಿಪಿಳಿ ಕಣ್ಣು ಬಿಡುತ್ತಾ, ತನ್ನದೇ ಭಾಷೆಯಲ್ಲಿ ಕೂಗುತ್ತಾ ಇತ್ತು. "She is lovely" ಅಂದೆ ನಾನು ಆ ಮಗುವನ್ನು ಎತ್ತಿಕೊಳ್ಳುತ್ತಾ.

"ಬನ್ನಿ, ಹಾಲ್ ರೂಮಿನಲ್ಲಿ ಕೂತು ಮಾತಾಡೋಣ" ಎಂದಳು ಇಶಾನಿ. ಅಲ್ಲಿ ತಮ್ಮ ಜೀವನದಲ್ಲಿ ಹೊಸದಾಗಿ ಸೇರ್ಪಡೆಯಾಗಿದ್ದ ಮಗುವಿನ ಬಗ್ಗೆ ಅವರಿಬ್ಬರೂ ಹೇಳಿದರು. ಹಲವಾರು ವರ್ಷಗಳಿಂದ ಮಗುವಿಗಾಗಿ ಪ್ರಯತ್ನಿಸಿದ್ದರೂ ಸಫಲರಾಗದಿದ್ದಾಗ, ಯಾರಿಗೂ ಹೇಳದೆ ಅನಾಥ ಮಗುವನ್ನು ದತ್ತು ತೆಗೆದುಕೊಳ್ಳಲು ತೀರ್ಮಾನಿಸಿದ್ದರು. ಅದರಂತೆ ಅನಾಥ ಮಕ್ಕಳ ಆಶ್ರಮವನ್ನು ಸಂಪರ್ಕಿಸಿ ತಮ್ಮ ಹೆಸರನ್ನು ದಾಖಲಿಸಿದ್ದರು. ಎಲ್ಲಾ ರೀತಿಯ ವಿಚಾರಣೆಗಳು ನಡೆದ ನಂತರ ಅವರು ಈ ಮಗುವನ್ನು ದತ್ತು ಪಡೆದು ಮನೆಗೆ ತಂದಿದ್ದರು. "ನನ್ನ ಜೀವನದಲ್ಲೇ ಇದು ಸಂತೋಷದ ದಿನ" ಎಂದಳು ಇಶಾನಿ. ನನ್ನ ತೊಡೆಯಲ್ಲಿ ಮಲಗಿದ್ದ ಪಾಪುವಿನ ಗಲ್ಲ ಸವರುತ್ತಾ,


"ಇಶಾನಿ, ನಾನು ಒಂದು ಪ್ರಶ್ನೆ ಕೇಳಲಾ? ನೀವಿಬ್ಬರೂ ಗಂಡು ಮಗುವಿನ ಬದಲಾಗಿ ಹೆಣ್ಣುಮಗುವನ್ನೇಕೆ ದತ್ತು ಪಡೆದಿರಿ?" ಎಂದೆ.



"ಹೌದು, ಯಾಕೆ ಗಂಡು ಮಗುವನ್ನು ಪಡೆಯಲಿಲ್ಲ? ಹೆಣ್ಣು ಮಕ್ಕಳಿಗಿಂತ ಗಂಡು ಮಕ್ಕಳನ್ನು ಸಾಕೋದು ಸುಲಭ ಅಲ್ವಾ?" ಎಂದು ಕಬೀರ್ ಕೂಡ ದನಿಗೂಡಿಸಿದ.

"ಇದರ ಬಗ್ಗೆ ನಾನು ಮತ್ತು ಇಶಾನಿ ತುಂಬಾ ಚರ್ಚಿಸಿದೆವು. ಅಷ್ಟೇ ಅಲ್ಲ, adoption ಬಗ್ಗೆ ಹಲವಾರು ಲೇಖನಗಳನ್ನು, ಪುಸ್ತಕಗಳನ್ನು ಓದಿದೆವು. ಅದಾದ ನಂತರವೇ ಹೆಣ್ಣು ಮಗುವನ್ನು ಪಡೆಯಲು ನಿರ್ಧರಿಸಿದೆವು" ಎಂದು ಕಿಶನ್ ಉತ್ತರಿಸಿದ.

"ಈ ನಿರ್ಧಾರಕ್ಕೆ ಮುಖ್ಯ ಕಾರಣ ಏನು ಗೊತ್ತಾ? ನಾನು ಗರ್ಭಿಣಿಯಾಗ್ತಿದ್ರೆ ಆಯ್ಕೆ ನನ್ನ ಕೈಯಲ್ಲಿರಲಿಲ್ಲ. ಆದರೆ ದತ್ತು ಪಡೆಯುತ್ತಿದ್ದರಿಂದ ನಮಗೆ ಆಯ್ಕೆ ಮಾಡುವ ಸ್ವಾತಂತ್ರ್ಯವಿತ್ತು. ಇವತ್ತು ಗರ್ಭದಲ್ಲಿರುವ ಹೆಣ್ಣು ಭ್ರೂಣಗಳನ್ನು ಸಾಯಿಸುತ್ತಾರೆ. ಆದರೆ ನಾವು ಹೆಣ್ಣು ಮಗುವೇ ಬೇಕು ಎಂದೆವು. ಯಾಕೆಂದರೆ ಹುಡುಗಿಯರು ಭಾವುಕರು. ಆದ್ದರಿಂದ ಈ ಮಗು ನಾವು ಹೆತ್ತ ಮಗು ಅಲ್ಲದಿದ್ದರೂ ಆಕೆ ನಮ್ಮೊಂದಿಗೆ ಭಾವುಕ ಸಂಬಂಧ ಬೆಳೆಸಿಕೊಳ್ಳುತ್ತಾಳೆ. ಮುಂದೊಂದು ದಿನ ನಾವಿಬ್ಬರೂ ಅವಳ ನಿಜವಾದ ಅಪ್ಪ ಅಮ್ಮ ಅಲ್ಲ ಅಂತ ಗೊತ್ತಾದರೂ ನಮ್ಮ ಮತ್ತು ಅವಳ ನಡುವಿನ ಪ್ರೀತಿ ಯಾವ ರೀತಿಯಲ್ಲೂ ಕಡಿಮೆ ಆಗುವುದಿಲ್ಲ" ಎಂದು ಇಶಾನಿ ಸೇರಿಸಿದಳು.



"ನಿಮ್ಮ ಮಾತಿನ ಅರ್ಥ ಏನು? ಹುಡುಗನಾಗಿದ್ದರೆ ಅಂಥ ಪ್ರೀತಿ ಸಾಧ್ಯವಾಗುತ್ತಿರಲಿಲ್ಲ ಅಂತಾನಾ?" ಎಂದು ಕಬೀರ್ ಕೇಳಿದ.

"ಪುರುಷ ಸಮುದಾಯಕ್ಕೆ ಅವಮಾನ ಮಾಡಬೇಕು ಅಂತ ನಮಗೇನು ಆಸೆ ಇಲ್ಲ ಕಬೀರ್" ಎಂದು ನಕ್ಕ ಕಿಶನ್ ತನ್ನ ಮಾತು ಮುಂದುವರೆಸಿ "ನೀನೇ ನೋಡಿದ್ದೀಯಾ. ಹೆಣ್ಣು ಮಕ್ಕಳು ತಮ್ಮ ತಂದೆ, ತಾಯಿಯನ್ನು ಎಷ್ಟು ಹಚ್ಚಿಕೊಂಡಿರುತ್ತಾರೆ ಅಂತ. ಹಾಗೆನೇ ಗಂಡು ಮಕ್ಕಳಲ್ಲಿ ಅಂತಹ ಆಪ್ತತೆ ಇರುವುದಿಲ್ಲ ಎಂಬುದನ್ನೂ ಕೂಡ. ನಾನು ಓದಿದ ಹಲವಾರು ಲೇಖನಗಳಲ್ಲಿ ದತ್ತು ತೆಗೆದುಕೊಂಡಿರುವ ಗಂಡು [illegible] ಸ್ವಂತ ಮಕ್ಕಳಲ್ಲ ಎಂದು ತಿಳಿದ ನಂತರ ಎರಡಾಯ ಏಳುವುದು, ದಾರಿ ತಪ್ಪುವುದು, ಬೇಕಂತಲೇ ತಂದೆ ತಾಯಿಯ ಮೇಲೆ ಒತ್ತಡ ಹೇರುವುದು.... ಇಂತಹದ್ದೇ ಹಲವಾರು ಉದಾಹರಣೆಗಳಿದ್ದವು. ಆದರೆ ಹೆಣ್ಣು ಮಕ್ಕಳು ಹಾಗಲ್ಲ, ಅವರಿಗೆ ಪ್ರೀತಿ ಮತ್ತು ವಿಶ್ವಾಸ ಎಲ್ಲಕ್ಕಿಂತ ಮುಖ್ಯವಾಗಿರುತ್ತೆ. ಆದ್ದರಿಂದ ಅವರನ್ನು ದತ್ತು ಪಡೆದದ್ದು ಎಂದು ಗೊತ್ತಾದ ನಂತರವೂ ಅವರಿಗೆ ನಿಜವಾದ ಅಪ್ಪ ಅಮ್ಮನಿಗಿಂತ ನಿಜವಾದ ಪ್ರೀತಿ ಮುಖ್ಯ ಆಗುತ್ತೆ. ಈ ಎಲ್ಲ ಕಾರಣದಿಂದಲೇ ನಾವು ಗಂಡು ಮಗುವಿನ ಬದಲಾಗಿ, ಹೆಣ್ಣು ಮಗುವನ್ನು ಪಡೆಯುವುದೆಂದು ನಿರ್ಧರಿಸಿದೆವು" ಎಂದು ಮುಗಿಸಿದ.

"ನೀನೇನಂತೀಯಾ ಶಾರದೆ?" ಎಂದು ಇಶಾನಿ ಕೇಳಿದಾಗ "ಕಿಶನ್ ಹೇಳಿದ್ದು ಸರಿ. ಈಗ ಎಷ್ಟೋ ಹೆಣ್ಣುಮಕ್ಕಳೇ ತಮ್ಮ ತಂದೆ-ತಾಯಿಯ ಜವಾಬ್ದಾರಿ ಹೊತ್ತಿರುವುದನ್ನು ನೋಡುತ್ತಿದ್ದೇವೆ. ಹಾಗೆಯೇ ತಮ್ಮ ಇಳಿವಯಸ್ಸಿನಲ್ಲಿ ತಮ್ಮನ್ನು ನೋಡಿಕೊಳ್ಳಲು ಗಂಡು ಮಗನಿರಲಿ ಎಂದು ಆಶಿಸಿ ಗಂಡು ಮಕ್ಕಳಿಗೇ ಎಲ್ಲವನ್ನೂ ಧಾರೆ ಎರೆದ ತಂದೆ ತಾಯಿಯನ್ನು ಅದೇ ಗಂಡು ಮಕ್ಕಳು ದೂರ ಮಾಡಿರುವುದನ್ನೂ ನೋಡಿದ್ದೇವೆ. ಆದ್ದರಿಂದ ಕಿಶನ್ ಮತ್ತು ಇಶಾನಿ ನಿರ್ಧಾರ ಸರಿ ಅನ್ನಿಸುತ್ತೆ" ಎಂದೆ ನಾನು.

ಅಷ್ಟರಲ್ಲಿ ನನ್ನ ತೊಡೆಯಲ್ಲಿದ್ದ ಮಗು ಅಳಲಾರಂಭಿಸಿತು. ಆವಾಗ ಅವಳನ್ನು ನನ್ನಿಂದ ಪಡೆದ ಇಶಾನಿ ತನ್ನ ಮುದ್ದಿನ ಕೂಸನ್ನು ಎದೆಗೆ ಅಪ್ಪಿ ಹಣೆಗೆ ಮುತ್ತಿಟ್ಟಳು. ಮಗು ಸಂತೃಪ್ತಗೊಂಡಂತೆ ಸುಮ್ಮನಾಯಿತು.

"ನೋಡು, ಅಮ್ಮನ ಸ್ಪರ್ಶ ಅವಳಿಗಾಗಲೇ ಗೊತ್ತಾಗಿರುವಂತಿದೆ" ಎಂದ ಕಬೀರ್.

ನಾವು ಅಲ್ಲಿಂದ ಹೊರಟಾಗ ಕಿಶನ್, ಇಶಾನಿ ಮತ್ತು ಹೊಸ ಕೂಸು... ಸಂತೋಷ ತುಂಬಿರುವ ಸಂಸಾರದಂತೆ ಕಂಡಿತು....

-ಶಾರದೆ

ಬುದ್ಧಿವಂತಿಕೆ ಮನುಷ್ಯನ ಆಧೀನ; ಮನುಷ್ಯ ಪ್ರತಿಭೆಯ ಆಧೀನ -ಜೆ.ಆರ್.ಲೋವೆ


ಸಿ.ಎಂ. ಕ್ಷೇತ್ರದಲ್ಲೇ ಅಕ್ರಮ ಗಣಿಗಾರಿಕೆ

ನಿಸರ್ಗದ ಮೇಲೆ ನಿತ್ಯ ಗ್ಯಾಂಗ್‌ರೇಪ್!

ಬೆಂಗಳೂರು ಎಂಬ ಸುಂದರಿಯ ಫ್ಲೈಓವರ್, ರಿಂಗ್‌ರೋಡ್‌ಗಳೆಲ್ಲ ನಿಂತಿರುವುದು ಬೆಂಗಳೂರು ಗ್ರಾಮಾಂತರ ಹಳ್ಳಿಗಳ ಹೆಣಗಳ ಮೇಲೆಯೇ. ಸಿಲಿಕಾನ್ ವ್ಯಾಲಿಗೆ ಬೇಕಾಗುವ ಜಲ್ಲಿ, ಮರಳು ಪೂರೈಸಲು ಸುತ್ತಲಿನ ಹಳ್ಳಿಗಳೆಲ್ಲ ನಾಶವಾಗಬೇಕೆ? ಜನರೆಲ್ಲ ಸಿಲಿಕೋಸಿಸ್‌ಗೆ ತುತ್ತಾಗಬೇಕೆ? ಸಿ.ಎಂ. ಕುಮಾರಸ್ವಾಮಿ ಕ್ಷೇತ್ರದಲ್ಲಿ ಅಕ್ರಮ ಗಣಿಗಾರಿಕೆಯಿಂದಾಗುತ್ತಿರುವ ಅನಾಹುತಗಳ ವಿವರಗಳಿರುವ ವರದಿ ಇಲ್ಲಿದೆ.

"ಬೆಳ್ಳಾರಿಯಷ್ಟೇ ಅಲ್ಲ, ರಾಜ್ಯದ ಎಲ್ಲೆಡೆ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ನಿಲ್ಲಿಸುತ್ತೇನೆ" ಎಂದು ಮುಖ್ಯಮಂತ್ರಿ ವಿಧಾನಸೌಧದ ಒಳಗಡೆ ಪತ್ರಕರ್ತರರಂತೆ ಮಾತಾಡುತ್ತಿದ್ದಾಗಲೇ ಅವರದೇ ತಾಲ್ಲೂಕಿನ ಸೀಬಕಟ್ಟೆ ಗ್ರಾಮದ ಬಳಿ ರೊಬೊ ಸಿಲಿಕಾನ್ ಎಂಬ ಕಂಪನಿ ಢಮಾರ್ ಎಂದು ಕಿವಿಕಿತ್ತು ಹೋಗುವಂತೆ ಗುಡ್ಡವನ್ನೇ blast ಮಾಡುತ್ತಿತ್ತು!

ಅದಕ್ಕೂ ವಾರ ಮುಂಚೆ ಮಾರ್ಚ್ 22 ರಂದು ಸರ್ಜಾಪುರ ರಸ್ತೆಯಲ್ಲಿನ ಕಸವನಹಳ್ಳಿಯ ಬೋವಿ ಕಾಲನಿಯ ಕ್ವಾರಿಯಲ್ಲಿ ಭೀಕರ ಸ್ಫೋಟಕ್ಕೆ ಗೌರಮ್ಮ (38), ಲೋಕನಾಥ್ (45) ಎಂಬ ಅಮಾಯಕರು ಗಾಯಗೊಂಡು ಪ್ರಾಣಾಪಾಯದಲ್ಲಿದ್ದಾರೆ.



ಪ್ರಸಾದ್. ಕೆ.ಪಿ.

ಆದರೆ ಕ್ವಾರಿಯ ಮಾಲಿಕ ರಾಮರೆಡ್ಡಿಗೆ ಇದೆಲ್ಲ ಮಾಮೂಲು. ಏಕೆಂದರೆ ಈ ಹಿಂದೆ ಹಲವಾರು ಜೀವಗಳನ್ನೇ ಬಲಿ ತೆಗೆದುಕೊಂಡ 'ಹಿರಿಮೆ' ಈ ರೆಡ್ಡಿಯದು.

ಇಡೀ ಬೆಂಗಳೂರು ಗ್ರಾಮಾಂತರ ಪ್ರದೇಶ ಇವತ್ತು ಕಲ್ಲುಗಳ್ಳರ ಕಾರಸ್ಥಾನವಾದದ್ದರ ಹಿಂದೆ ಎಲ್ಲ ಪಾರ್ಟಿಗಳ ನಾಯಕರ 'ಕೊಡುಗೆ' ಕಡಿಮೆಯೇನಿಲ್ಲ, ಪರಿಸರ ಇಲಾಖೆಯ ಎಲ್ಲ ನಿಯಮಗಳನ್ನೂ ಗಾಳಿಗೆ ತೂರಲಾಗಿದೆ. ಮುಖ್ಯಮಂತ್ರಿ ಕುಮಾರಸ್ವಾಮಿಯ ರಾಮನಗರ ತಾಲೂಕು ಒಂದರಲ್ಲೇ ಇನ್ನೂರಕ್ಕೂ ಹೆಚ್ಚು ಕ್ವಾರಿಗಳು ಅರ್ಭಟಿಸುತ್ತಲೇ ಇವೆ.



ಸುಂದರ ತಾಣವೀಗ ಗಣಿಗಾರಿಕೆಯ ತವರೂರು

ಬೆಂಗಳೂರು ಗ್ರಾಮಾಂತರದುದ್ದಕ್ಕೂ ಹರಡಿಕೊಂಡಿರುವ ಬೆಟ್ಟಗಳ ಸಾಲು ಈಗ ಬೋಳು ಬೋಳು! ಚಿಕ್ಕಬಳ್ಳಾಪುರ, ಅರ್ಕಾವತಿ, ಕುಮುದ್ವತಿ ನದಿ ಪ್ರದೇಶ, ಹೆಸರುಘಟ್ಟ, ಮಂಚನಬೆಲೆ, ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶ, ನಂದಿಬೆಟ್ಟ, ರಾಮನಗರ, ಕನಕಪುರ, ದೇವನಹಳ್ಳಿ, ದೊಡ್ಡಬಳ್ಳಾಪುರ ಈ ಎಲ್ಲ ಪ್ರದೇಶಗಳಲ್ಲೂ ಕಲ್ಲು ಗಣಿಯ ಭೀಕರ ಸ್ಫೋಟಗಳಿಗೆ ಮನೆಗಳು ಕುಸಿಯುತ್ತಿವೆ, ಸಿಲಿಕಾನ್ ಧೂಳಿನ ಉಚ್ಛ್ವಾಸದಿಂದ ಜನರ ಶ್ವಾಸಕೋಶಗಳು ಜೀವ ಕಳೆದುಕೊಳ್ಳುತ್ತಿವೆ, ಟಿಪ್ಪರ್‌ಗಳ ಭರಾಟೆಗೆ ರಸ್ತೆಗಳೆಲ್ಲ ಕಿತ್ತುಕೊಂಡು ಹೋಗಿವೆ, ಕಾಡೆಲ್ಲ ನಾಶವಾಗಿ ಜಾನುವಾರುಗಳು ಅಳಿವಿನಂಚಿಗೆ ಬಂದು ನಿಂತಿವೆ, ನೂರಾರು ಕೆರೆಗಳು ಬತ್ತಿ ಹೋಗಿವೆ..... ವಿಧಾನಸೌಧದಲ್ಲಿ ಸಿ.ಎಂ. ಸಾಹೇಬರು ಅಕ್ರಮ ಗಣಿಕಾರಿಕೆ ನಿಲ್ಲಿಸುವ ಮಾತಾಡುತ್ತಿದ್ದಾರೆ. ಆದರೆ ಅವರ ತಾಟನಲ್ಲೇ ಕತ್ತೆ ಬಿದ್ದಿದ್ದು ಗೊತ್ತಿದ್ದೂ ಕಲ್ಲುಗಳ್ಳರೆಂಬ ಹೇಸರಗತ್ತೆಗಳ ಹಿಂದೆ ಸಿ.ಎಂ. ಸಾಹೇಬರ ನೆರಳೇ ಗೋಚರಿಸುತ್ತಿರುವಾಗ ಬೆಂಗಳೂರು ಗ್ರಾಮಾಂತರ ಜನತೆಗೆ ಉಳಿದಿರುವ ಏಕೈಕ ದಾರಿ ಎಂದರೆ ಬೀದಿಗಿಳಿದು ಹೋರಾಡುವುದು, ಸುಪ್ರೀಂಕೋರ್ಟಿಗೆ ದೂರು ಸಲ್ಲಿಸುವುದು ಮಾತ್ರ.

ಬೆಟ್ಟ ಕರಗುತಿದೆ ಸಿಲಕೋಸಿಸ್ ಹಬ್ಬುತಿದೆ...


ಬೆಂಗಳೂರು ಗ್ರಾಮಾಂತರದಲ್ಲಿ ಒಂದು ಕಡೆ ಬೆಟ್ಟಗಳೆಲ್ಲ ಜಲ್ಲಿ ಕಲ್ಲುಗಳಾಗುತ್ತ ಕೃತಕ ಮರಳು ಆಗುತ್ತಾ ಕರಗಿ ಹೋಗುತ್ತಿದ್ದರೆ, ಇನ್ನೊಂದು ಕಡೆ ಸಿಲಿಕೋಸಿಸ್, ಸಿಲಿಕೊ-ಟ್ಯುಬರ್‌ಕ್ಯುಲೋಸಿಸ್ ರೋಗಗಳು ವೇಗದಲ್ಲಿ ಹಬ್ಬ ತೊಡಗಿವೆ. ಬೆಂಗಳೂರು ಸುತ್ತಲಿನ ಹಳ್ಳಿಗಳಲ್ಲಿ ಪರಿಸರ ನಾಶ, ರಸ್ತೆ ನಾಶ, ಮನೆ ಬಿರುಕು, ಅರಣ್ಯ ನಾಶಗಳಿಗೆ ಈ ಕಲ್ಲು ಕ್ವಾರಿಗಳೇ ಕಾರಣ ಎಂಬುದು ನೂರಕ್ಕೆ ನೂರು ಸತ್ಯ. ಆದರೆ ಅದಕ್ಕಿಂತಲೂ ಅಪಾಯಕಾರಿ ಅನಾಹುತವೊಂದು ಇಲ್ಲಿ ಜರುಗುತ್ತಿದೆ. ಅದು ಜನರ



ಬೆಟ್ಟವೇ ಚೂರಾಗಿರುವುದು

ಜೀವಗಳಿಗೆ ಬಂದಿರುವ ಕುತ್ತು! ಸಿಲಿಕಾನ್ ಧೂಳಿನ ದುಷ್ಪರಿಣಾಮಕ್ಕೆ ಜನರಿಗೆ ಉಸಿರಾಡುವುದು ಕಷ್ಟಕರವಾಗುತ್ತಿದೆ. ಈಗಾಗಲೇ ನೂರಕ್ಕಿಂತ ಹೆಚ್ಚು ಜನರಿಗೆ ಸಿಲಿಕೊಸಿಸ್ ರೋಗ ಬಂದಿದ್ದು, ಶ್ವಾಸಕೋಶಗಳಲ್ಲಿ ಸಿಲಿಕಾನ್ ಪದರಗಳಿರುವುದು ಪತ್ತೆಯಾಗಿದೆ. ಇದು ಅಧಿಕೃತ ಅಂಕಿಅಂಶ. ಆದರೆ ಸಾವಿರಾರು ಜನ ಈ ಸಿಲಿಕೊಸಿಸ್‌ನಿಂದ ನರಳುತ್ತಿದ್ದು, ಅದು ಅಸ್ತಮಾ ಎಂದು ತಪ್ಪಾಗಿ ತಿಳಿದು, ಅಪಾಯದ ಅರಿವಿಲ್ಲದೇ ಬದುಕುತ್ತಿದ್ದಾರೆ. 2001 ರಲ್ಲಿ 'ಪೂರ್' ಎನ್ನುವ NGO ದೆಹಲಿ ಸುತ್ತಮುತ್ತ ನಡೆಸಿದ ಪರೀಕ್ಷೆಗಳಿಂದ ಕಲ್ಲು ಗಣಿಗಾರಿಕೆಯಿಂದ ಸಿಲಿಕೊಸಿಸ್ ಹಬ್ಬುತ್ತಿರುವುದು ಪತ್ತೆಯಾಗಿತ್ತು. ಆಗ ಸುಪ್ರೀಂಕೋರ್ಟ್ ಆ ಗಣಿಗಳನ್ನು ಬಂದ್ ಮಾಡಿಸಿತ್ತು. ಮೊನ್ನೆ ಮಾರ್ಚ್ 27 ರಂದು ಇದೇ ವಿಷಯದಲ್ಲಿ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರದ ಪರಿಸರ, ಗಣಿ, ಜಲ ಸಂಪನ್ಮೂಲ ಇಲಾಖೆಗಳಿಗೆ ನೋಟೀಸ್ ಜಾರಿ ಮಾಡಿದೆ.

ಆದರೆ ಇಲ್ಲಿ ಬೆಂಗಳೂರು ಗ್ರಾಮಾಂತರದಲ್ಲಿ ನಿಸರ್ಗದ ಮೇಲೆ ನಿತ್ಯ ಗ್ಯಾಂಗ್ ರೇಪ್ ನಡೆದೇ ಇದೆ.




ಕಲ್ಲು ಸಿಡಿಸುವ ಸಿಡಿಮದ್ದಿಗೆ ಮನೆ ಗೋಡೆ ಸೀಳು ಬಿಟ್ಟಿರುವುದು

ಕಲ್ಲುಗಳ್ಳ ರಾಜಕಾರಣಿಗಳು

ಬೆಂಗಳೂರು ಗ್ರಾಮಾಂತರದಲ್ಲಿ 900 ಕ್ಕೂ ಹೆಚ್ಚಿರುವ ಕ್ವಾರಿಗಳ ಪೈಕಿ ಬಹುತೇಕ ರಾಜಕಾರಣಿಗಳು, ಅವರ ಸಂಬಂಧಿಕರು, ಚೇಲಾಗಳ ಹೆಸರಲ್ಲೇ ಇವೆ. ಮಾಜಿ ಪ್ರಧಾನಿ ದೇವೇಗೌಡ, ಹಾಲಿ ಸಿ.ಎಂ. ಕುಮಾರಸ್ವಾಮಿಗಳ ಸಂಬಂಧಿಕರು, ಚೇಲಾಗಳೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಸಿ.ಎಂ. ಲಿಂಗಪ್ಪ ಎಂಬ ಪುರಾತನ ಕೊಳಟೆ ರಾಜಕಾರಣಿಯ ಮಗನೊಬ್ಬ ಅಕ್ರಮ ಗಣಿಗಾರಿಕೆಯಿಂದ ರಾಮನಗರ ತಾಲೂಕಿನ ಹತ್ತಾರು ಹಳ್ಳಿಗಳಿಗೆ ಕಂಟಕನಾಗಿದ್ದಾನೆ.

ರಾಮನಗರ ತಾಲೂಕಿನ ಬಿಡದಿ ಹೋಬಳಿಯ ಗೋಪಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಯ ಸೀಬಕಟ್ಟೆ, ಮಂಚೆಗೌಡನ ಪಾಳ್ಯ, ಮೇಗಳದೊಡ್ಡಿ, ಪುಟ್ಟೀರಮ್ಮನ ದೊಡ್ಡಿ ಹಾಗೂ ಚಿಕ್ಕ ಅರಸಹಳ್ಳಿಗಳ ಸುತ್ತಲಿನ ಕಾಡು ಎಂದೋ ಕಲ್ಲು ಧಣಿಗಳಿಂದ ನಾಶವಾಗಿ ಹೋಗಿದೆ. ಈ ಎಲ್ಲ ಹಳ್ಳಿಗಳ ಸುತ್ತ ಹಬ್ಬಿರುವ ಐತಿಹಾಸಿಕ ಸುಂಕದ ಕಲ್ಲು ಸರಣಿಬೆಟ್ಟ ಈ 8-10 ವರ್ಷಗಳಲ್ಲಿ ಸವೆಸವೆದು ಹೋಗಿದೆ. ಸೀಬಕಟ್ಟೆಯಿಂದ 100 ಅಡಿಗಳ ಅಂತರದಲ್ಲೇ ರೊಬೊ ಸಿಲಿಕಾನ್ ಪ್ರೈ.ಲಿ. ಎಂಬ ಆಂಧ್ರದ ಕಲ್ಲುಗಳ್ಳರ ಕಂಪನಿ ಸರ್ಕಾರದ ಯಾವ ಕಾನೂನನ್ನು ಪಾಲಿಸದೇ, ದಿನಕ್ಕೆ ನೂರಾರು ಟನ್ ಜಲ್ಲಿ, 20 ಟ್ರಕ್ ರೊಬೊ ಸ್ಯಾಂಡ್ ತಯಾರಿಸುತ್ತಿದೆ. ರಾತ್ರಿಯಿಡೀ ಸ್ಫೋಟಿಸುವ ಶಕ್ತಿಶಾಲಿ ಗ್ರೈನೈಡ್‌ಗಳಿಂದ 5 ಹಳ್ಳಿಗಳ ಶೇ. 95 ರಷ್ಟು ಮನೆಗಳು ಬಿರುಕುಬಿಟ್ಟಿವೆ.

ರಾಗಿ ಬೆಳೆಯುವ ಇಲ್ಲಿನ ಬಡ ಜನ ಹಿಂದೆಲ್ಲ ಜಾನುವಾರು ಸಾಕಾಣಿಕೆಯಿಂದ ಜೀವನ ಸಾಗಿಸುತ್ತಿದ್ದರು. ಈಗ ಸುತ್ತ ಹಸಿರು ಪ್ರದೇಶವಿಲ್ಲ, ಕೆರೆಗಳಂತೂ ಇಲ್ಲವೇ ಇಲ್ಲ, ಈ ಅಕ್ರಮ ಗಣಿಗಾರಿಕೆಯ ಹೊಡೆತದಿಂದ ಜಾನುವಾರುಗಳನ್ನು ಸಾಕುವುದೇ ಕಷ್ಟಕರವಾಗಿ ಹೋಗಿದೆ. ಹೈದರಾಬಾದ್



ಪರಿಸರ ಇಲಾಖೆ ಅಧಿಕಾರಿಗಳ ಸಮೀಕ್ಷೆಯ ನಾಟಕ

ಮೂಲದ ಈ ರೊಬೊ ಸಿಲಿಕಾನ್ ಕಂಪನಿಗೆ ಜಿ. ರಮೇಶ್, ಸಿ.ವಿ. ಸುಬ್ಬರಾವ್ ಎಂಬ ಆಂಧ್ರವಾಲಾಗಳೇ ಬಾಸ್‌ಗಳು. ಇಲ್ಲಿ ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿನ ಕಚೇರಿಯಲ್ಲಿ ಸಿ. ಚಂದ್ರಶೇಖರ್‌ರಾವ್ ಎಂಬ ಬದ್ಮಾಶ್‌ನೊಬ್ಬ ಕುಳಿತಿರುತ್ತಾನೆ. ಸಕಲ ಲೋಕಲ್ ಪುಡಾರಿಗಳಿಗೆಲ್ಲ ಮಂತ್ಲಿ ಮಾಮೂಲು ನೀಡುವ ಈ ಚಂದ್ರಶೇಖರ್ ರಾವ್, ಡಿ.ಸಿ., ಎ.ಸಿಗಳನ್ನು, ಕೆಪಿಟಿಸಿಎಲ್, ಪರಿಸರ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆಗಳನ್ನೆಲ್ಲ ಖರೀದಿಸಿದವನಂತೆ ಮಾತಾಡುತ್ತಾನೆ. ಅದು ನಿಜವೂ ಹೌದು.

ಕಳೆದ ವರ್ಷ ಜನ ಹೋರಾಟ ಮಾಡಿ 48 ದಿನಗಳ ಕಾಲ ಈ ಕಂಪನಿ ಬಂದ್ ಮಾಡಿಸಿದ್ದರು. ಆಗ ಬರೀ ಶಾಸಕನಾಗಿದ್ದ ಕುಮಾರಸ್ವಾಮಿ ...ಹಳ್ಳಿಗೆ ಬಂದು ಕುಸಿದ, ಬಿರುಕುಬಿಟ್ಟ ಮನೆಗಳನ್ನು ನೋಡಿ ಪರಿಹಾರ ಕೊಡಿಸುವ ಭರವಸೆ ನೀಡಿ ಹೋದವರು ತಿರುಗಿ ಇತ್ತ ಹಾಯಲೇ ಇಲ್ಲ, ಅಧಿಕಾರಿಗಳನ್ನು ಕಿಸೆಯಲ್ಲಿಟ್ಟುಕೊಂಡ ರೊಬೊ ಸಿಲಿಕಾನ್ ಮತ್ತೆ ಆರಂಭಗೊಂಡು ಭಯಂಕರ ಸ್ಫೋಟಗಳನ್ನು ನಡೆಸುತ್ತಲೇ ಇದೆ. ಬಿಡದಿ ಸುತ್ತಲಿನ ಬೆಟ್ಟಗಳಲ್ಲಿನ 20 ಕೆರೆಗಳಾಗಲೇ ಮುಚ್ಚಿ ಹೋಗಿವೆ. ಅಂತರ್ಜಲ ಮಟ್ಟ ಕುಸಿದು ಕೃಷಿ ಮಾಡುವುದೇ ಕಷ್ಟವಾಗಿದೆ. ಎಲ್ಲದಕ್ಕಿಂತ ಮುಖ್ಯವಾಗಿ ನಿಧಾನಕ್ಕೆ ಸಿಲಿಕೋಸಿಸ್ TB ಹಬ್ಬತೊಡಗಿ, ಜನರಿಗೆ ಉಸಿರಾಡುವುದೇ ಕಷ್ಟವಾಗುತ್ತಿದೆ.

ಸೀಬಕಟ್ಟೆ, ಉರಗಹಳ್ಳಿ ಸುಂಕದಕಲ್ಲು ಬೆಟ್ಟದಲ್ಲಿ 23.08.2004 ರಂದು ಸೈಟ್ ನಂ. 196 ರಲ್ಲಿ ಕ್ರಷಿಂಗ್ ಪ್ಲಾಂಟ್ ನಡೆಸಲು ಗ್ರಾಮ ಪಂಚಾಯ್ತಿ ಅನುಮತಿ ಗಿಟ್ಟಿಸಿದ ರೊಬೊ ಸಿಲಿಕಾನ್ ಈಗ ಇಡೀ ಬೆಟ್ಟದ ಸಾಲಿಗೇ ಕೈ ಹಾಕಿಬಿಟ್ಟಿದೆ.

ಪಿ.ಕೆ. ಮಲ್ಲನಗೌಡರ್

ಇಲ್ಲೇ ಪಕ್ಕದಲ್ಲೇ ಜಾಫರ್ ಶರೀಫ್ ಸಂಬಂಧಿಕ ನಾಸಿರ್ ಎನ್ನುವವನು ಅಕ್ರಮ ಗಣಿಗಾರಿಕೆ ನಡೆಸುತ್ತಲೇ ಇದ್ದಾನೆ. ಮುಂದಕ್ಕೆ ಸಾಗಿದರೆ ಕೆಂಚನಗುಪ್ಪೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲೂ ಕ್ವಾರಿಗಳದ್ದೇ ಕಾರುಬಾರು. ಸಿ.ಎಂ. ಲಿಂಗಪ್ಪನ ಮಗನ ಕ್ವಾರಿಗಳಿಗಂತೂ ಯಾವುದೇ ನೀತಿ ನಿಯಮಗಳೇ ಇಲ್ಲ.

ಬೆಂಗಳೂರು-ಮೈಸೂರು ರಸ್ತೆಯಲ್ಲಿ ಸಂಜೆ ನಿಂತು ಸುತ್ತಲೂ ಕಣ್ಣಾಡಿಸಿದರೆ ಗಾಳಿಯಲ್ಲಿ ಬಿಳಿ ಸಿಲಿಕಾನ್ ಪುಡಿ ದಟ್ಟವಾಗಿ ಹರಡಿ ಲೇಯರ್‌ಗಳನ್ನು ಸೃಷ್ಟಿಸುವುದನ್ನು ಕಾಣಬಹುದು.


ಬಿಡದಿ ಹೋಬಳಿಯ ದಳದ ಲೀಡರುಗಳಿಗೆಲ್ಲ ತಿಂಗಳಿಗೆ 6 ರಿಂದ 10 ಸಾವಿರ ಮಾಮೂಲು ಸಿಕ್ಕರೆ, ಪ್ರಭಾವಿ ಪುಡಾರಿಗಳಿಗೆ ಟಿಪ್ಪರ್‌ಗಳನ್ನೇ ಗಿಫ್ಟ್ ಎಂದು ನೀಡುತ್ತಿವೆ ಈ ಅಕ್ರಮ ಕ್ವಾರಿಗಳು. ಕುಮಾರಸ್ವಾಮಿ, ಸಿಂಧ್ಯಾ, ಸಿ.ಎಂ. ಲಿಂಗಪ್ಪ ಉದ್ಘಾಟಿಸಿದ ಮುತ್ತುರಾಯಸ್ವಾಮಿ ದೇವಾಲಯವೇ ಬಿರುಕುಬಿಟ್ಟು ಈಗ ಕುಸಿಯುವ ಸ್ಥಿತಿಗೆ ಬಂದಿದೆ.

ಇದೇ ಏಪ್ರಿಲ್‌ನಲ್ಲಿ ರಾಮನಗರದ ತಾಲೂಕು ರೈತಸಂಘ ಮಲ್ಲಯ್ಯ, ಕೆ.ಪಿ. ಪ್ರಸಾದ್, ಸೀಬಕಟ್ಟೆ ಕೃಷ್ಣಪ್ಪರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಲು ತಯಾರಾಗಿದೆ. ತಮ್ಮ ಸಂಬಂಧಿಕರು, ಚೇಲಾಗಳ ಮಾಲೀಕತ್ವದ ಕ್ವಾರಿಗಳನ್ನು ಸಿ.ಎಂ. ಕುಮಾರಸ್ವಾಮಿಗೆ ಮುಟ್ಟುವ ಧೈರ್ಯವಿದೆಯೇ?

ಈ ಸರ್ಕಾರವೆಂಬುದೇ ಒಂದು ಅಕ್ರಮ ಕೂಡಾವಳಿ ಆಗಿರುವಾಗ, ಸಿ.ಎಂ. ಸುತ್ತ ಅಕ್ರಮ ಸಂಪತ್ತಿನ ವ್ಯಾಪಾರೋದ್ಯಮಿಗಳೇ ನೆರೆದಿರುವಾಗ, ಜನರಿಗೆ ಉಳಿದಿದ್ದು ಹೋರಾಟದ ಹಾದಿ ಒಂದೇ. ಬೆಂಗಳೂರು ಎಂಬ ಸುಂದರಿಯ ಫ್ಲೈಓವರ್, ರಿಂಗ್‌ರೋಡ್‌ಗಳೆಲ್ಲ ನಿಂತಿರುವುದು ಬೆಂಗಳೂರು ಗ್ರಾಮಾಂತರ ಹಳ್ಳಿಗಳ ಹೆಣಗಳ ಮೇಲೆಯೇ. ಸಿಲಿಕಾನ್ ವ್ಯಾಲಿಗೆ ಬೇಕಾಗುವ ಜಲ್ಲಿ, ಮರಳು ಪೂರೈಸಲು ಸುತ್ತಲಿನ ಹಳ್ಳಿಗಳೆಲ್ಲ ನಾಶವಾಗಬೇಕೆ? ಜನರೆಲ್ಲ ಸಿಲಿಕೋಸಿಸ್‌ಗೆ ತುತ್ತಾಗಬೇಕೆ?

ಆಗಲೇಬೇಕು ಎನ್ನುತ್ತದೆ ಜಾಗತೀಕರಣ, ಖಾಸಗೀಕರಣದ ಮಾಯೆ!

ರಾಜ್ಯಸಭಾ ಚುನಾವಣೆಯಲ್ಲಿ ಮೂರೂ ರಾಜಕೀಯ ಪಕ್ಷಗಳ ಅಧಿಕೃತ ಅಭ್ಯರ್ಥಿಗಳಿಗಿಂತಲೂ ಹೆಚ್ಚಿನ ಓಟುಗಳನ್ನು "ಸಂಪಾದಿಸಿ" ಗಿನ್ನಿಸ್ ದಾಖಲೆಯ ಗೆಲುವು ಸಾಧಿಸಿದ ಪಕ್ಷೇತರ (ಸರ್ವ ಪಕ್ಷೀಯ?!) ಅಭ್ಯರ್ಥಿ ರಾಜೀವ್ ಚಂದ್ರಶೇಖರ್ ಕಡೆಗೂ ನಮ್ಮ ವೃತ್ತಿ ರಾಜಕಾರಣದ ನೀತಿ-ನಿಯತ್ತುಗಳನ್ನು ಅನುಮಾನಕ್ಕೆ ಆಸ್ಪದವಿಲ್ಲದಂತೆ ಜಾಹೀರು ಗೊಳಿಸಿದ್ದಾನೆ.



ನಿರೀಕ್ಷೆಗೂ ಮೀರಿ 53 ಶಾಸಕರ ಮತಗಳನ್ನು ಬುಟ್ಟಿಗೆ ಹಾಕಿಕೊಂಡ ಈ ಬಿಪಿಎಲ್-ಓನರ್ ರಾಜೀವ್ ಫಲಿತಾಂಶ ಪ್ರಕಟಗೊಂಡ ನಂತರ ನೇರವಾಗಿ ಧಾವಿಸಿದ್ದು ಪದ್ಮನಾಭನಗರದಲ್ಲಿನ ದೇವೇಗೌಡರ ಆಸ್ಥಾನಕ್ಕೆ.... ಆಶೀರ್ವಾದ ಕೋರಲು ಬಂದ ರಾಜೀವರ ನೆರಳನ್ನು ಕಂಡರೂ ಕೆರಳುತ್ತಿದ್ದ ಗೌಡರಿಗೆ ಆತನ ವಿಜಯೋತ್ಸವದ ಸಂಭ್ರಮವೂ ಅಸಹನೀಯವೆನಿಸಿತ್ತು....

ಹೈಕಮಾಂಡಿನ ಆಶೀರ್ವಾದ ಪಡೆದೇ ರಾಜ್ಯಸಭೆಗೆ ಸ್ಪರ್ಧಿಸುವ ದುಸ್ಸಾಹಸಕ್ಕಿಳಿದದ್ದಲ್ಲವೆ?!

ವಾಸ್ತವಿಕರಾಗಿ ಜೆಡಿಎಸ್‌ನ ದಂಡನಾಯಕ ದೇವೇಗೌಡರ ಪ್ರಾಮಿಸ್ ಪಡೆದಿದ್ದ ಮತ್ತೊಬ್ಬ ಕೈಗಾರಿಕೋದ್ಯಮಿ ಜಿಂದಾಲ್ ಕಂಪನಿಯ ಯಜಮಾನ ಸಜ್ಜನ್ ಜಿಂದಾಲ್‌ಗೆ ಈ ವಿಷಯವನ್ನು ಬಿಜೆಪಿಯಲ್ಲಿನ ಅನಂತ್-ವಿರೋಧಿ ನಾಯಕರುಗಳಾದ ಪ್ರಮೋದ್ ಮಹಾಜನ್ ಮತ್ತು ಅರುಣ್ ಜೇಟ್ಲಿಗಳೇ ಅರುಹಿದ್ದಾಗಿತ್ತು....

ಹೇಗಾದರೂ ಮಾಡಿ ದೇವೇಗೌಡರನ್ನೂ ವಶೀಕರಣ ಮಾಡಿಕೊಳ್ಳಲೇಬೇಕೆಂಬ ಹಠಕ್ಕೆ ಬಿದ್ದ ಅನಂತಕುಮಾರ್ ನೇರವಾಗಿ ಆರ್.ಟಿ. ನಗರದ ಜೋತಿಷ್ಯ ಮಾರ್ತಾಂಡ ರವಿನಾರಾಯಣರ ಸನ್ನಿಧಿಗೆ ಧಾವಿಸಿ ಬಂದರು. ಕೋಟ್ಯಾಧಿಪತಿ ಬಿಸಿನೆಸ್ ಮ್ಯಾನ್ ರಾಜೀವರನ್ನು ಆತನ ಕಾಲಿಗೆ ಬೀಳಿಸಿ ದೇವೇಗೌಡರ ಮನವೊಲಿಕೆಯ

ಚುರುಕಾಗಿಬಿಡುವ ಜನತಾ-ದಳ ಪರಿವಾರದ ರಾಷ್ಟ್ರನಾಯಕರುಗಳು ಈ ಸಾರಿಯೂ ಸುಮ್ಮನೆ ಕೂರ್‍ಲಿಲ್ಲ...

ಬಹುತೇಕ ಸಕ್ರಿಯ ರಾಜಕಾರಣದಿಂದ ನೇಪಥ್ಯಕ್ಕೆ ಸರಿದಿರುವ ಮಾಜಿ ಪ್ರಧಾನಿದ್ವಯರಾದ ವಿ.ಪಿ. ಸಿಂಗ್ ಮತ್ತು ಚಂದ್ರಶೇಖರ್‌ಗಳಿಬ್ಬರೂ ಸಡನ್ನಾಗಿ ಜಾಗೃತಗೊಂಡು ದೇವೇಗೌಡರಿಗೆ ಪ್ರತ್ಯೇಕವಾಗಿಯೆ ಫೋನಾಯಿಸಿದರು...

"ಗೌಡಾಜೀ ನಮ್ಮ ದಳ ಪರಿವಾರದ ಸುದೀರ್ಘ ಕಾಲದ ಹಿತೈಷಿ ಕಮಲ್ ಮೊರಾರ್ಕಾಜೀಯವರಿಗೆ ಈ ಸಲವಾದ್ರೂ ಒಂದ ಚಾನ್ಸ್ ಕೊಡಿಸಿ. ಅವರಿಗೂ ಇನ್ನೇನು ವಯಸ್ಸಾಗ್ತಾ ಬಂತು.... ನಾವುಗಳು ಕಾಂಗ್ರೆಸ್ ವಿರುದ್ಧ ಹೋರಾಡ್ತಾ ಬಂದಾಗಿನಿಂದಲೂ ನಮ್ಮ ಕೈ ಹಿಡೀತಾ ಬಂದವರಲ್ಲವೆ?... ದಯವಿಟ್ಟು ಗಂಭೀರವಾಗಿ ಯೋಚನೆ ಮಾಡಿ ನೋಡಿ" ಎಂದು ದೇವೇಗೌಡಾಜೀಯವರಲ್ಲಿ ಅರಿಕೆ ಮಾಡಿಕೊಂಡರು.


ಒಂದು ಕಾಲದಲ್ಲಿ ಪರಸ್ಪರ ಶತೃತ್ವ ಬೆಳೆಸಿಕೊಂಡಿದ್ದ ಈ ಮಾಜಿ ಪ್ರಧಾನಿಗಳಿಬ್ಬರೂ ಹೀಗೆ ಈ ಕರೋಡ್‌ಪತಿ ಉದ್ಯಮಿ ಕಮಲ್ ಮೊರಾರ್ಕಾ ವಿಷಯದಲ್ಲಾದರೂ ಸಹಮನಸ್ಕರಾದರಲ್ಲ ಎಂದು ಖುಷಿಗೊಂಡರಾದರೂ, ಗೌಡರು ಆ ಕ್ಷಣದಲ್ಲಿ ಏನನ್ನೂ ಖಚಿತವಾಗಿ ಹೇಳುವ ಸ್ಥಿತಿಯಲ್ಲಿರಲಿಲ್ಲ.

"ಸಾರ್.... ಮೈ ಹ್ಯಾಂಡ್ಸ್ ಆರ್ ಟೈಡ್ ಯು ನೋ... ಈ ಬಿಜೆಪಿ ಮೈತ್ರಿ ಕೂಟದ ಬಗ್ಗೆ ನನಗೆ ಮೊದಲೇ ಯಾವುದೇ ರೀತಿಯ ಆಸಕ್ತಿಯೂ ಇಲ್ಲ, ಪ್ರೀತಿಯೂ ಇಲ್ಲ.... ಆದ್ರೂನೂ ತಾವಿಬ್ರೂ ನನಗೆ ಅಪ್ಪಣೆ ಕೊಟ್ಟಿರೋದ್ರಿಂದ ಟ್ರೈ ಮಾಡೋಣವಂತೆ" ಎಂದು ಅಸ್ಪಷ್ಟವಾದ ಪ್ರತಿಕ್ರಿಯೆಯನ್ನೇ ನೀಡಿದ್ದರು.

ಅವರು ಉದ್ದಕ್ಕೂ ಕಾಂಗ್ರೆಸ್ ವಿರೋಧಿ ರಾಜಕಾರಣದ ಜತೆಗೆ ಸಕ್ರಿಯವಾಗಿ ಗುರುತಿಸಿಕೊಂಡೇ ಬಂದವರು. ಆದ್ದರಿಂದ ಅವ್ರೇ ನಿಮಗೂ ಒಪ್ಪಿಗೆಯಾಗಬಹುದು ಅಂದ್ಕೊಂಡಿದೀನಿ" ಎಂದು ವಿವರಿಸಿ ಆ ಕ್ಷಣಕ್ಕೆ ಬಚಾವಾದರು!

ದೇವೇಗೌಡರು ಸಿಟ್ಟು ಈಗ ಕಂದಾಯ ಸಚಿವ ಹಾಗೂ ಬಿಜೆಪಿಯಲ್ಲಿ ಅನಂತ್ ಬಣದ ಅನುಯಾಯಿ ಜಗದೀಶ್ ಶೆಟ್ಟರ್‌ರತ್ತ ತಿರುಗಿತು. "ರೀ ಶೆಟ್ರೆ ಇದೇನ್ರೀ ಯಾವೂರ ಸೀಮೆ ದೊಣ್ಣೆ ನಾಯಕ ಅಂತ ಇವನ್ನ ನಿಲ್ಲಿಸೋಕೆ ಹೊರಟೀದೀರ್ರೀ?" ಎಂದು ಗದರಿದರು...

ಶಾಕ್ ಅನುಭವಿಸಿದ ಜಗದೀಶ್ ಶೆಟ್ಟರ್ "ಛೆ, ಛೇ, ಅಂತಾಹದ್ದೇನೂ ಇಲ್ರೀ ಗೌಡ್ರೆ... ನಮ್ಮ ಹೈಕಮಾಂಡಿನ ಜತೆ ಅನಂತಕುಮಾರ್ ಸಾಹೇಬ್ರೂ ಮತ್ತೆ ವೆಂಕಯ್ಯ ನಾಯ್ಡುರವರೂ ಒಟ್ಟಿಗೆ ಸೇರ್‍ಕೊಂಡು ನ್ಯಾಷನಲ್ ಪ್ರೆಸಿಡೆಂಟು ರಾಜನಾಥ್ ಸಿಂಗರನ್ನು ಒಪ್ಪಿಸಿಬಿಟ್ಟಾರ್ರೀ.... ಅದ್ರಿಂದಾಗಿ ಲಾಲ್ ಕೃಷ್ಣ ಅದ್ವಾಣಿಜೀಯವರೂ ಓಕೆ ಆಗಿ ನಮಗೆಲ್ಲ ರಾಜೀವ್‌ರನ್ನೇ ನಿಲ್ಲಿಸಿ ಅಂತ ಡೈರೆಕ್ಷನ್ ಕೊಟ್ಟಾರ್ರಿ.... ಈಗ ನಾವು ಹೆಂಗ ಹಿಂದೇಟು ಹಾಕಲಿಕ್ಕಾಗತ್ತ ನೀವs ಹೇಳ್ರಿ ಗೌಡ್ರ" ಎಂದೆನ್ನುತ್ತ ತಮ್ಮ ಅಸಹಾಯಕತೆ ತೋಡಿಕೊಂಡ್ರು.....




ಆಗ ಗೌಡ್ರು "ಆಯ್ತು ಬಿಡಿ. ಈಗೆಲ್ಲ ಮುಗಿದುಹೋದ ಕತೆ... ಆದ್ರೆ ಒಂದು ಕಂಡೀಷನ್ನು... ಆ ರಾಜೀವ್‌ನನ್ನು ಪಕ್ಷೇತರ ಅಂತ ನಿಲ್ಸಿದ್ರೆ ಮಾತ್ರ ನಾವು ಒಪ್ತೇವೆ... ನಮ್ಮ ಕಡೆಯಿಂದ ಒಂದು ಸೆಟ್ಟು, ನಿಮ್ಮಗಳ ಕಡೆಯಿಂದ ಒಂದು ಸೆಟ್ಟು ಹೀಗೆ ಪ್ರತ್ಯೇಕವಾಗಿ ನಾಮಿನೇಷನ್ಸ್ ಫೈಲ್ ಮಾಡಿದ್ರೆ ಮಾತ್ರ ನಾವು ನಿಮ್ಜೊತೆ ಮುಂದುವರೀತೇವೆ... ಇಲ್ದೆ ಹೋದ್ರೆ ನಾಳೇನೆ ನಿಮ್ಮ ಸರ್ಕಾರಕ್ಕೆ ಕೊಟ್ಟೀರೋ ಸಪೋರ್ಟ್‌ನ ವಾಪಸ್ ತಕ್ಕೋಬೇಕಾಗುತ್ತೆ ಹುಷಾರ್..." ಎಂದು ದಬಾಯಿಸಿಬಿಡೋದೆ...!!

ರಾಜೀವ್ ಗೆಲುವಿಗೆ ರವಿನಾರಾಯಣ ಕಟಾಕ್ಷ

ರಾಜೀವ್ ಚಂದ್ರಶೇಖರ್ ಎಂಬ ಈ ಕುಬೇರನ ವಿಚಾರದಲ್ಲಿ ಆರಂಭದಿಂದಲೂ ಅಲರ್ಜಿ ಪ್ರಕಟಿಸುತ್ತ ಬಂದಿದ್ದ ಗೌಡರು ಕಡೆಗೂ ಆತನ ಹುರಿಯಾಳುತನವನ್ನು ಅನುಮೋದಿಸಿದ್ದು ಬಿಜೆಪಿ ಮುಖಂಡರ ಆಗ್ರಹದಿಂದಾಗಲೀ ಅಥವಾ ತಮ್ಮ ಸುಪುತ್ರ ಕುಮಾರ ಸ್ವಾಮಿಯ ದಾಕ್ಷಿಣ್ಯಕ್ಕಾಗಲೀ ಅಲ್ಲವೇ ಅಲ್ಲ. ಬದಲಿಗೆ ಗೌಡರು ಒಪ್ಪಿಕೊಂಡಿದ್ದು ತಮ್ಮ ಆಸ್ಥಾನದ ಜೋತಿಷಿ ಹಾಗೂ ಆಧ್ಯಾತ್ಮಿಕ ಗುರು ಆರ್.ಟಿ. ನಗರದ ಅಸ್ಟ್ರಾಲಜರ್ ರವಿನಾರಾಯಣರ ಮರ್ಜಿ-ಮುಲಾಜಿನಿಂದ!!

ರವೀಂದ್ರ ರೇಶ್ಮೆ

ರಾಜೀವರ ಸಾಷ್ಟಾಂಗ ನಮಸ್ಕಾರವನ್ನು ದಿವ್ಯ ಅಸಡ್ಡೆಯಿಂದಲೇ ಸ್ವೀಕರಿಸಿದ ದೇವೇಗೌಡರು "ಆಯ್ತಲ್ಲ... ಚುನಾವಣೆಯಲ್ಲಿ ಗೆದ್ದಿದ್ದಾಯ್ತಲ್ಲ... ಇನ್ನು ದಯಮಾಡ್ಸಿ..." ಎಂದು ತತ್‌ಕ್ಷಣವೇ ಬಾಗಿಲಿನತ್ತ ಕೈಸನ್ನೆ ಮಾಡುತ್ತ ಸಾಗಹಾಕಿಬಿಟ್ಟರು!




ರಾಜೀವ್ ಚಂದ್ರಶೇಖರ್ ಎಂಬ ಈ ಕುಬೇರನ ವಿಚಾರದಲ್ಲಿ ಆರಂಭದಿಂದಲೂ ಅಲರ್ಜಿ ಪ್ರಕಟಿಸುತ್ತ ಬಂದಿದ್ದ ಗೌಡರು ಕಡೆಗೂ ಆತನ ಹುರಿಯಾಳುತನವನ್ನು ಅನುಮೋದಿಸಿದ್ದು ಬಿಜೆಪಿ ಮುಖಂಡರ ಆಗ್ರಹದಿಂದಾಗಲೀ ಅಥವಾ ತಮ್ಮ ಸುಪುತ್ರ ಕುಮಾರ ಸ್ವಾಮಿಯ ದಾಕ್ಷಿಣ್ಯಕ್ಕಾಗಲೀ ಅಲ್ಲವೇ ಅಲ್ಲ.

ರಾಜ್ಯಸಭಾ ಚುನಾವಣೆಯ ಹೆಚ್ಚುವರಿ ಮತಗಳನ್ನು ಬೇಟೆಯಾಡಲೆಂದೇ ಕಣಕ್ಕಿಳಿದ ಈ ರಾಜೀವ್‌ರನ್ನು ಒಲ್ಲದ ಮನಸ್ಸಿನಿಂದಲೇ ಗೌಡರು ಒಪ್ಪಿಕೊಂಡಿದ್ದು ತಮ್ಮ ಆಸ್ಥಾನದ ಜೋತಿಷಿ ಹಾಗೂ ಆಧ್ಯಾತ್ಮಿಕ ಗುರು ಆರ್.ಟಿ. ನಗರದ ಅಸ್ಟ್ರಾಲಜರ್ ರವಿನಾರಾಯಣರ ಮರ್ಜಿ-ಮುಲಾಜಿನಿಂದ!!

ಅನಂತ್‌ಕುಮಾರ್ ಅಸ್ತ್ರ: ರಾಜಗುರು ರವಿನಾರಾಯಣ

ಹಾಲಿ ಆಡಳಿತಾರೂಢ ಪಕ್ಷ ಬಿಜೆಪಿಯ ರಾಷ್ಟ್ರೀಯ ಕಾರ್ಯದರ್ಶಿ ಮತ್ತು ಬೆಂಗಳೂರಿನ ಸಂಸದ ಅನಂತ್ ಕುಮಾರ್ ಹಾಗೂ ಮಾಜಿ ಕಾಂಗ್ರೆಸ್ ಮುಖ್ಯಮಂತ್ರಿ, ಹಾಲಿ ಮಹಾರಾಷ್ಟ್ರದ ಗವರ್ನರ್ ಎಸ್.ಎಂ. ಕೃಷ್ಣರ ನಡುವಿನ ದೀರ್ಘಕಾಲೀನ ಒಳಸಂಧಾನದ ಶಿಶುವಾಗಿದ್ದ ಈ ರಾಜೀವ್ ಚಂದ್ರಶೇಖರ್ ಅಸಲಿಗೆ ಕಾಂಗ್ರೆಸ್ ಉಸಾಬರಿಯನ್ನು ರವಿನಾರಾಯಣರ ಉಡಿಗೆ ಹಾಕಿ 'ಹರಕೆ' ಒಪ್ಪಿಸಿ ಬಂದರು....

ರವಿನಾರಾಯಣ ಭವಿಷ್ಯವಾಣಿಯಲ್ಲಿ ಹಲವಾರು ವರ್ಷಗಳಿಂದ ಅಖಂಡವಾದ ನಂಬಿಕೆ, ಭಕ್ತಿ ತೋರುತ್ತ ಬಂದಿರುವ ಗೌಡರಿಗೆ ಈ ಕಣಿಶಾಸ್ತ್ರಜ್ಞನ ರಾಜಕೀಯ ಸಲಹೆ ಮಾತ್ರ ಅಷ್ಟಾಗಿ ರುಚಿಸಲೇ ಇಲ್ಲ... ಮೂಲತಃ ಈ ರಾಜೀವ್ ಚಂದ್ರಶೇಖರ್ ತಮ್ಮ ನಂ. 1. ಶತ್ರು ಎಸ್.ಎಂ. ಕೃಷ್ಣರ ಅಳಿಯ ಸಿದ್ದಾರ್ಥನ ಚೇಲನೆಂಬ ಒಂದೇ ಒಂದು ಅಂಶವೇ ಗೌಡರಿಗೆ ಆತನ ಹೆಸರನ್ನು ತಿರಸ್ಕರಿಸಲು ಸಾಕಾಗಿತ್ತು, ಅಂತಹದ್ದರಲ್ಲಿ ಹಿಂದೆ ಎನ್‌ಡಿಎ ಸರ್ಕಾರದಲ್ಲಿ ಸಚಿವರಾಗಿದ್ದುಕೊಂಡೇ ಇಲ್ಲಿ ಕೃಷ್ಣರೊಂದಿಗೆ ಹಲವಾರು ದುಬಾರಿ ಟರ್ನ್-ಓವರ್ ವಹಿವಾಟುಗಳಲ್ಲಿ "ಸಹಭಾಗಿತ್ವ"ದ ಆಸಕ್ತಿ ತೋರಿದ್ದ ಅನಂತಕುಮಾರರಿಗೂ ಈತ ಬೇಕಾದವನು ಎಂಬುದು ತಿಳಿದ ಮೇಲಂತೂ ಗೌಡರ ಪಿತ್ತ ನೆತ್ತಿಗೇರಿಬಿಟ್ಟಿತು....



ಆದರೂ ತಮ್ಮ ಭವಿಷ್ಯಸೂಚಕ ರಾಜಗುರು ರವಿನಾರಾಯಣರ ಮಾತಿಗೆ ಇಲ್ಲವೆನ್ನಲಿಕ್ಕಾಗದೆಯೇ ಚಡಪಡಿಸಿದ ಗೌಡರು ತದನಂತರ "ಆಗಲಿ ನೋಡೋಣವಂತೆ... ಆದರೆ ಈತ ನನ್ನದೇ ಟರ್ಮ್ಸ್ ಅಂಡ್ ಕಂಡೀಷನ್ಸ್ ಮೇಲೆ ನಿಂತ್ರೆ ಮಾತ್ರ ಬೆಂಬಲಿಸಬಹುದು" ಎಂದು ಶರತ್ತು ವಿಧಿಸಿದರು!

ವಿ.ಪಿ. ಸಿಂಗ್, ಚಂದ್ರಶೇಖರ್ ಸೂಚಿಸಿದ್ದ ಮೊರಾರ್ಕಾ

ಕರ್ನಾಟಕದ ಅಸೆಂಬ್ಲಿಯಿಂದ ರಾಜ್ಯಸಭೆಗೆ ಚುನಾವಣೆಗಳು ಬಂದಾಗಲೆಲ್ಲ ಪ್ರತಿಸಾರಿಯೂ

ಹೊಸಪೇಟೆಯ ಸಾಲಾರ್‌ಜಂಗ್ ಶುಗರ್ ಫ್ಯಾಕ್ಟರಿಯನ್ನು ಟೇಕ್ ಓವರ್ ಮಾಡಿದಾಗಿನಿಂದಲೂ ಕರ್ನಾಟಕದ ಬಾಂಧವ್ಯ ಬೆಳೆಸಿಕೊಂಡು ಬಂದಿರುವ ಮೊರಾರ್ಕಾ ಸಾಮ್ರಾಜ್ಯದ ಅಧಿಪತಿ ಕಮಲ್ ಪರ ಇಬ್ಬರು ಮಾಜಿ ಪ್ರಧಾನಿಗಳೇ ಮತ್ತೊಬ್ಬ ಮಾಜಿ ಪ್ರಧಾನಿಯ ಬಳಿ ಲಾಬಿ ಮಾಡಿದ್ದೂ ಪ್ರಯೋಜನವಾಗಲಿಲ್ಲ.....



ಪ್ರಮೋದ್ ಮಹಾಜನ್, ಜೇಟ್ಲಿ ಸೂಚಿಸಿದ್ದ ಪ್ರಭು ಚಾವ್ಲಾ

ರಾಜೀವ್ ಚಂದ್ರಶೇಖರ್ ಹೆಸರು ಕೇಳಿಯೆ ಸಿಡಿಮಿಡಿಗೊಂಡಿದ್ದ ಗೌಡರು ಉಪ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಫೋನಿನಲ್ಲಿ ಸಂಪರ್ಕಿಸಿ "ಏನ್ರೀ ಇದೆಲ್ಲ, ಯಾವೊನ್ರೀ ಈ ರಾಜೀವು?" ಎಂದೆಲ್ಲಾ ರೇಗಾಡಿದ್ದರು.



ತಬ್ಬಿಬ್ಬಾದ ಯೆಡ್ಡಿ, ಕೊಂಚ ಸಾವರಿಸಿಕೊಂಡು "ಸಿಟ್ಟಾಗಬೇಡಿ ಗೌಡ್ರೆ... ಇದೆಲ್ಲ ನಮ್ಮ ಫ್ರೆಂಡು ಅನಂತಕುಮಾರ್ ಸಾಹೇಬರ ರಾಜಕೀಯ... ನಿಜವಾಗಿಯೂ ನಮ್ಮ ಪಕ್ಷದ ವತಿಯಿಂದ ನಮ್ಮ ನಾಯಕರುಗಳಾದ ಪ್ರಮೋದ್ ಮಹಾಜನ್ ಹಾಗೂ ಅರುಣ್ ಜೇಟ್ಲಿಯವರುಗಳು ಸೂಚಿಸಿದ್ದು ಇಂಡಿಯಾ ಟುಡೆ ಇಂಗ್ಲಿಷ್ ವಾರ ಪತ್ರಿಕೆಯ ಪ್ರಧಾನ ಸಂಪಾದಕ ಪ್ರಭು ಚಾವ್ಲಾರ ಹೆಸರನ್ನು...

ನಾಮಪತ್ರ ಸಲ್ಲಿಕೆಯ ಗಳಿಗೆ ಮುಕ್ತಾಯಗೊಳ್ಳಲು ಕೇವಲ ಹದಿನೈದು ನಿಮಿಷಗಳು ಬಾಕಿಯಿರುವಾಗಲಷ್ಟೇ ಬಿಜೆಪಿ ರಾಜ್ಯ ನಾಯಕರುಗಳ ಆಂತರಿಕ ದ್ವಂದ್ವ, ತಳಮಳಗಳು ಅಂತ್ಯಗೊಂಡು ಎಚ್.ಡಿ. ರೇವಣ್ಣ ನೇತೃತ್ವದಲ್ಲೊಂದು ಸೆಟ್ ನಾಮಪತ್ರ ಹಾಗೂ ಯೆಡ್ಡಿ ನೇತೃತ್ವದಲ್ಲೊಂದು ಸೆಟ್ ನಾಮಪತ್ರಗಳು ದಾಖಲಿಸಲ್ಪಟ್ಟವು ಈ ರಾಜೀವ್ ಚಂದ್ರಶೇಖರ್ ಎಂಬ "ಇಂಡಿಪೆಂಡೆಂಟ್" ಅಭ್ಯರ್ಥಿಯ ಪರವಾಗಿ!!

ಅಂದರೆ ಚುನಾವಣೆಯಲ್ಲಿ ರಾಜೀವ್ ಗೆದ್ದರೂ ರಾಜ್ಯಸಭೆಯಲ್ಲಿ ಬಿಜೆಪಿಯ ಹಾಲಿ ಸದಸ್ಯ ಬಲದಲ್ಲಿ ಒಂದೇ ಒಂದು ಸೀಟು ಜಾಸ್ತಿಯಾಗುವುದಿಲ್ಲ. ಕಾಂಗ್ರೆಸ್‌ನ ಅಗೋಚರ ಬೆಂಬಲ ಹಾಗೂ ಜೆಡಿಎಸ್-ಬಿಜೆಪಿಗಳ ನೇರ ಬೆಂಬಲ ಗಿಟ್ಟಿಸಿದ ರಾಜೀವ್ ಚಂದ್ರಶೇಖರ್ ಸಂಸತ್ತಿನ ಮೇಲ್ಮನೆಯಲ್ಲಿ ಮುಂದಿನ ಆರು ವರ್ಷಗಳವರೆಗೂ ಪಕ್ಷೇತರ ಸದಸ್ಯನೇ! ಇದೇ ದೇವೇಗೌಡರ ಪಾಲಿಟಿಕ್ಸು... ಇದೇ ಮಾಜಿ ಪ್ರಧಾನಿಯ ಚಾಣಾಕ್ಷ ತಂತ್ರಗಾರಿಕೆಯ ಪ್ರಚಂಡ ಟ್ರಿಕ್ಕು!!

ಎಂಎಲ್‌ಎಗಳ ಮತ ಗಿಟ್ಟಿಸಲು ರಾಜೀವ್ ಸುರಿದಿರಬಹುದಾದ ಬಿಲಿಯ ಪಾಲಿಕ್ಕೆ ಕೇವಲ ಅಸಲು ಗಿಟ್ಟಬಹುದೇ ಹೊರತು ಒಂದೇ ಒಂದು ರೂಪಾಯಿ ಬಡ್ಡಿಯೂ ದಕ್ಕದಂತಹ ಬಿಗ್ಗುಳಿಸುವುದು—ಈ ಪಕ್ಷೇತರ ಎಂ.ಪಿ.ಗಿರಿ.

ಯಲ್ಲಾ ಈಶ್ವರನಿಚ್ಚೆಯಂಗೇ ನ್ಯಡದದಂತೆ ಕಣೊ!

ಚಿಕ್ಕಣ್ಣ ಒಂದು ಮಂಕರಿ ಮರಳು ತಂದು ಸುರಿದು, ಬಾನಿ ಮಾಡಿ, ನೀರು ತಕ್ಮಳಿಸಿ, ಅದರ ಮದ್ಯಕ್ಕೆ ಮಡಕೆ ಮಡಗಿ, ಅದರ ತುಂಬ ನೀರೂದು, ನಿಂಬೆ ಕುಸುರುಗಳನ್ನು ಹಿಂಡಿ ಸಕ್ಕರೆ ಹಾಕಿ, ತಣ್ಣಗಿನ ಶರಬತ್ತು ಮಾಡಿದ್ದ. ಯುಗಾದಿ ವಬ್ಬಟ್ಟು ತಿಂದು ಆದಿನಂತೆ ಸೆಕೆಯುತ್ತಿದ್ದವರು ಕಾಫಿ, ಟಿ ಬದಲು ಶರಬತ್ತನೇ ಕುಡಿಯತೊಡಗಿದ್ದರು. ತರಾ ತುರಿಯಿಂದ ಬಂದ ವಾಟಿಸ್ಸೆ,

"ಚಿಕ್ಕಣ್ಣ ಕೂಲ್ ಡ್ರಿಂಕ್ಸಿದ್ದತೆ?" ಎಂದ.

"ಅಹಹ, ಕೂಲ್ ಡ್ರಿಂಕ್ಸಂತೆ ಕೊಡ್ರಿಂಕು. ಶರಬತ್ತದೆ. ತಿಗ ಅದಿಮಿಕಂಡು ಕುಡಿಯಲೆ."

"ನೋಡು ಚಿಕ್ಕಣ್ಣ ಈ ಕಾಂಪಿಟೇಶನ್ ಕಾಲ್ದಲ್ಲಿ ನೀನು ಸರ್ವೈ ಆಗಬೇಕಾದ್ರೆ ಕಾಲಕ್ಕೆ ತಕ್ಕಂಗೆ ಹೊಟ್ಟೊನು ಬದಲಾಯಿಸಿಕೊಬೇಕು."

"ಏನು ಬದ್ಲಾಸಬೇಕಪ್ಪ?"

"ಈ ರಣಬಿಸಲ ತಡಾಯಬೇಕಾದ್ರೆ, ನೀನು ಕಲ್ಲಂಗಡಿ ಜೂಸು, ಕ್ಯಕ್ಯರಕೆ ಹಣ್ಣು ಈತರ ಕೂಲ್ಯೆಟಂಮ್ಮನ್ನಲ್ಲ ಇಟಗಬೇಕು."

"ಬಂಡವಾಳ ಕೊಡು ಮತ್ತೆ?"

"ಬಂಡವಾಳ ಯಾಕಪ್ಪಬೇಕು? ಅದ್ಕೆ ಮಾರ್ನಿಂಗ್ ಟೈಮಲ್ಲಿ ಅಂಗೇ ವಾಕೋದ್ರೆ ಬೋರೇಗೌಡನ ವಲದಲ್ಲಿ ಕಲ್ಲಂಗಡಿ ಹಣ್ಣು ಸಿಗತವೆ, ಈಸ್ಕಂಬಾ. ಜವರೇಗೌಡನ ವಲದಲ್ಲಿ ಕ್ಯಕ್ಯರಕೆ ಹಣ್ಣವೆ, ತಗಂಬಾ. ಅಂಗೆ ನಮ್ಮ ಕಾಳ ದ್ವಡಪ್ಪನ ತ್ವಾಟಕೋದ್ರೆ ನಿಂಬೆಹಣ್ಣು ಬಿದ್ದು ಚೆಲ್ಲಾಡತವೆ. ಸೊಸೈಟಿ ತಮ್ಮಣ್ಣನತ್ರಕೋದ್ರೆ ಸಕ್ಕರೆ ಕೊಡತನೆ. ಈ ಮಾಲು ಬಿಕರಿ ಆದಮ್ಯಾಲೆ ದುಡ್ಡು ಕೊಡು. ಇಡೀ ದೇಸದ ವ್ಯಾಪಾರ ನ್ಯಡಿತಾಯಿರದೇ ಹಿಂಗೆ ಕಣೋ. ನೀನು ಬಂಡವಾಳನೆ ಒದಗಿಸಬೇಕು ಅಂದ್ರೆ ಯಾವ ಬಿಜಿನೆಸ್ಸೂ ಮಾಡಕ್ಯಾಗದಿಲ್ಲ."

"ಸರಿಯಪ್ಪ ನೀನೇಳದಂಗೆ ಮಾಡನ. ಕುಡದೋರು ದುಡ್ಡು ಕೊಡಲಿಲ್ಲ ಅಂದ್ರೆ ನಾನವುರಿಗೆ ಮಕ ತೋರದ್ಯಂಗೇ?"

"ವಸೂಲು ಮಾಡಬೇಕು."

"ಆಯ್ತಪ್ಪ, ಈಗ ಮಾಡಿರೊ ಶರಬತ್ತು ಕೊಡ್ತಿನಿ. ಕುಡಿಯದಕೂ ಮದ್ಲೆ ಕಾಸು ಕೊಡು, ನೋಡನ" ಎಂದ ಚಿಕ್ಕಣ್ಣ.

"ಮಾತಾಡ್ಯ ಈಗ" ಎಂದಳು ಜುಮ್ಮಿ.

"ವಾಟಿಸ್ಸೆ ಮಾತಾಡದ ಕೇಳಿದ್ರೆ, ಕನ್ನಡ ಸಾಯಿತಿಗಳ ಮಾತ ಕೇಳಿ ಅನಂತಮೂರ್ತಿ ಹಳ್ಳಹಿಡಿದರಲ್ಲ ಅಂಗಾಯ್ತು ಕಣೆ" ಎಂದ ಉಗ್ರಿ.

"ಅನಂತಮೂರ್ತಿ ಯಾರ್ಲ?" ಎಂದ ಕಾಳಮಾವ.


"ಅಹ, ನಮ್ಮ ಕಾಳ ದ್ವಡಪ್ಪನ ಬಾಯಿಲಿ ಬಂದ ಮಾತು, ಆ ಕುಮಾರಸ್ವಾಮಿ ಬಾಯಿಲಿ ಬಂದ ಮಾತು ಒಂದೇ ತರ ಅದೆ ನೋಡೊ ಉಗ್ರಿ" ಎಂದ ವಾಟಿಸ್ಸೆ.

"ಅನಂತಮೂರ್ತಿ ಮಾವ, ಕನ್ನಡದಲ್ಲಿ ಈಗ ಬದುಕಿಕೋರಲ್ಲೇ ದ್ವಡ್ಡ ಸಾಯಿತಿ. ಈ ಸಿದ್ಧರಾಮಯ್ಯನ ಕಡೆ ಯಮ್ಮೆಲ್ಲೆಗಳು, ಸಾಯಿತಿಗಳ್ನೆಲ್ಲ ಸೇರಿ ರಾಜ್ಯಸಭೆ ಯಲಕ್ಸನ್ನಿಗೆ ನಿಲ್ಲಿಸಿಬುಟ್ರು. ಪಾಪ ಇಪ್ಪತ್ತನಾಕು ಓಟು ತಗಂಡು ಸೋತೋದ."

"ಯಾರೆದ್ರಿಗೆ ನಿಂತಿದ್ದಾ?"

"ಅವುನ್ಯಾರೊ ಚಂದ್ರಶೇಖರ ಅಂತ. ಆಂಧ್ರದಿಂದ ಬಂದು ಇಲ್ಲೇ ದುಡುದು ಇಲ್ಲಿ ಯಮ್ಮೆಲ್ಲೆಗಳನ್ನೆಲ್ಲ ಕೊಳ್ಳಂಗಾಗ್ಯವುನೆ."

"ಯಮ್ಮೆಲ್ಲೆನೆ ಕೊಂಡನೇನ್ಲ?" ಎಂದಳು ಜುಮ್ಮಿ.



"ಊ ಕಣೆ. ಒಂದು ಓಟಿನ ಬ್ಯಲೆ ಏಟುಗೊತ್ತೆ, ಇಪ್ಪತ್ತೈದು ಲಕ್ಷದಿಂದ ಐವತ್ತು ಲಕ್ಷ. ಅವುನು ಐವತ್ತು ಮೂರೋಟು ತಗಂಡ ಅಂದ್ರೆ ಲ್ಯಕ್ಕ ಹಾಕು."

"ಅನಂತಮೂರುತಿ ಏಟು ತಗಂಡ?"


"ಬರಿ ಇಪ್ಪತ್ತನಾಕು."

"ಅವುನೇಟು ಕೊಟ್ಟ?"

"ಒಂದು ಲೋಟ ಕಾಫಿನೂ ಕೊಡಲಿಲ್ಲವಂತೆ. ಈ ಯಲಕ್ಸನ್ನಿಗೆ ಅಂತ ಮಾಡಿರೊ ಐದು ಸವುರ ಯಂಗೆ ತೀರುಸ್ಲಿ ಅಂತ ಕುಂತವುನೆ. ಇದಕೇನೇಳ್ತೀ?"

"ಅಂಗಾದ್ರೆ ಅವುನೆ ಗೆದ್ದವನೆ ಬುಡ್ಯ" ಎಂದ ಕಾಳಮಾವ.

"ಅನಂತಮೂರ್ತಿ ಐದು ಸವುರ ಖರ್ಚು ಮಾಡ್ಯವುನೆ ಅಂದ್ರೆ, ಅವುನು ಗೋಪಾಲಗೌಡ್ರ ಶಿಷ್ಯ ಆಗಿದ್ದುಕೂ ಸಾರ್ಥಕಾಯ್ತು ಬುಡೊ ಉಗ್ರಿ" ಎಂದ ವಾಟಿಸ್ಸೆ.



"ಅದ್ಯಂಗೋ?"

"ಶಾಂತವೇರಿ ಗೋಪಾಲ ಗೌಡ್ರು, ಯಮ್ಮೆಲ್ಲೆ ಯಲಕ್ಸನ್ನಿಗೆ ಆಗಿನ ಕಾಲಕೆ ಐದು ಸವುರ ಖರ್ಚು ಮಾಡೋರಂತೆ. ಈ ಅನಂತಮೂರ್ತಿ ಯಮ್ಮೆಲ್ಲೆಗಳಿಂದ ಓಟಾಕಿಸಿಗಳಕ್ಕೆ ಐದು ಸವುರ ಖರ್ಚು ಮಾಡ್ಯವುನೆ ಅಂದ್ರೆ, ರಿಯಲಿ ಗ್ರೇಟ್. ಚಂದ್ರಶೇಖರ ಖರ್ಚು ಮಾಡಿರೊ 15 ಕೋಟಿ ಅನಂತಮೂರ್ತಿ ಮಾಡಿರೊ ಐದು ಸವುರಕ್ಕೆ ಸಮ ಕಣೊ ಉಗ್ರಿ."

"ಆದ್ರು ದ್ಯಾವೇಗೌಡ ಮನಸು ಮಾಡಿದ್ರೆ ಗೆಲ್ಲುಸಬವುದಿತ್ತು."

"ಯಮ್ಮೆಲ್ಲೆಗಳು ಅವುನ ಮಾತ ಕೇಳಿದ್ರೆ ಗೆಲ್ಲಸತಿದ್ನಂತೆ" ಎಂದು ವಾಟಿಸ್ಸೆ ನಗಾಡಿದ.

"ಆದ್ಯಾಕ್ಲ ಅಂಗೆ ನಗತಿ?" ಎಂದಳು ಜುಮ್ಮಿ.

"ಅಲ್ಲಾ ಕಣಕ್ಕ, ದ್ಯಾವೇಗೌಡನ ಮಾತ ಯಾರ ನಂಬತರಕ್ಕ? ಹೋಗ್ಲಿ ತಾನು ಸಸ್‌ಪೆಂಡ್ ಮಾಡಿರೊ ಯಮ್ಮೆಲ್ಲೆಗಳ ಬುಟ್ಟು ತನ್ನತ್ರ ಇದ್ರಲ್ಲ, ಅವುರ ಓಟ ಹಾಕಸಬವುದಿತ್ತಲ್ಲಾ? ಅದ್ನೂ ಮಾಡದೆ ಡ್ರಾಮ ಮಾಡಿಬುಟ್ನಲ್ಲಾ ಇದಕೇನೇಳ್ತಿ?"

"ಚುಂಚನಗಿರಿಗೆ ಬಂದೋದನಂತೆ?" ಎಂದ ಸೀರ.

"ಬರದೇನು, ಇನ್ನುಮ್ಯಾಲೆ ಬತ್ತಾಯಿರತನೆ ಚಿಗಪ್ಪ, ಇನ್ನ ಉಳಿದಿರೋದೆ ಮಠದ ದಾರಿ ಅವುನಿಗೆ."

"ಅಂಗಂತಿಯಾ?"

"ಊ ಮತ್ತೆ, ಅವುನು ಅನ್ನಕಂಡಿದ್ದನ್ನೆಲ್ಲ ಮಾಡಿದ. ಎಲ್ಲೂ ಮಕ ತೋರದಂಗಾದ. ಈಗ ಉಳದಿರದೇನಪ್ಪ ಅಂದ್ರೇ, ಚುಂಚನಗಿರಿ ಸ್ವಾಮಿ ಎದ್ರಿಗೆ ಕುಂತಗಂಡು ಪುರಾಣ ಕೇಳದೆ ಅವನ ಕಾಯಕ."

"ಸ್ವಾಮಿಗೂ, ಅವುನಿಗೂ ವಾದಕ್ಕೆ ಬೆಯ್ತಿರಲಿಲ್ಲ, ಅದ್ಯಂಗೆ ಒಂದಾದ್ರೂ?" ಎಂದ ಸೀರ.

"ಚಿಗಪ್ಪ, ಕೆಲವರ ಜಗಳವ ಸೀರಿಯಸ್ಸಾಗಿ ತಗಳಕ್ಕೋಗಬ್ಯಾಡ ನೀನು. ಚುಂಚನಗಿರಿ ಸ್ವಾಮಿನೂ, ದ್ಯಾವೇಗೌಡ್ರುವೆ ಒಂದೇ ದೇಹ ಯರಡು ಜೀವ, ಒಂದು ವೇಳೆ ಅಕಸ್ಮಾತ್ ನಮ್ಮ ಚುಂಚನಗಿರಿ ಅಯ್ನೋರು ಕಾವಿನೆ ಹಾಕದೆಯಿದ್ರೆ ರಾಮನಗರದ ಎಮ್ಮೆಲ್ಲೆ ಆಗಿ ಮಂತ್ರಿಯಾಗಿ ಇದೇ ದ್ಯಾವೇಗೌಡ್ರ ಸ್ಯೆಡ್ಡಡಿತಿದ್ರು ಗೊತ್ತಾ?"

"ದ್ಯಾವೇಗೌಡ ಯಾರಿಗೂ ಬಗ್ಗತಿರಲಿಲ್ಲ ಬುಡ್ಯ" ಎಂದ ಕಾಳಮಾವ.

"ನಿಜ ದ್ವಡಪ್ಪ, ದ್ಯಾವೇಗೌಡನ ಪ್ಲಾನು ಅವುನ ಮಮ್ಮಕ್ಕಳಗಂಟ ಕ್ಯಲಸ ಮಾಡಂಗಿರತವೆ. ಅವುನೆದ್ರಿಗೆ ಈ ಸ್ವಾಮಿ ಆಟ ನ್ಯಡಿತಿರಲಿಲ್ಲ, ಇವುನು ಯಾವತ್ತೂ ವೈ.ಕೆ. ರಾಮಯ್ಯ, ನಾಗೇಗೌಡ, ಬೈರೇಗೌಡನಂಗಾಗನು. ಆಗ ದ್ಯಾವೇಗೌಡ ಯಲ್ಲಾ ಆ ಈಶ್ವರನಿಚ್ಚೆಯಂಗೆ ನ್ಯಡದರೆ ನಾವೇನು ಮಾಡಕ್ಯಾಗಲ್ಲ ಅಂತ ಹೇಳಿಬುಡನು."

"ಅಂಗಾದ್ರೆ ಈಸ್ಪುರನ್ನಿಡಕಂಡವುನೆ ಅನ್ನು?" ಎಂದ ಸೀರ.

"ಊ ಚಿಗಪ್ಪ, ದ್ಯಾವೇಗೌಡನ ಪ್ರಕಾರ ಎಂ.ಪಿ. ಪ್ರಕಾಶ ತಬ್ಬಲಿ ಮಗಿನಂಗಾದುದ್ದು ಈಶ್ವರನಿಚ್ಚೆ ಕುಮಾರಣ್ಣ ಮುಖ್ಯಮಂತ್ರಿಯಾದುದ್ದು ಈಶ್ವರನಿಚ್ಚೆ, ಅನಂತಮೂರ್ತಿ ಸೋತಿದ್ದು ಆ ಈಶ್ವರನಿಚ್ಚೆ, ಏನೇ ಕೇಳಿದ್ರು ಈಶ್ವರನಿಚ್ಚೆ ಅಂತ ಕುಂತಿದ್ದನಂತೆ" ಎಂದ ವಾಟಿಸ್ಸೆ.

"ಅಂಗಾದ್ರೆ ಇವುನು ಶಹಜಹಾನ್ ಚಕ್ರವರ್ತಿಯಂಗಾದುದ್ದು ಈಶ್ವರನಿಚ್ಚೆ ಅನ್ನು?" ಎಂದ ಉಗ್ರಿ.

"ಶಾಜಾನು ಅಂದ್ರೆ ಅವುನ್ಯಾರ್ಲ?" ಎಂದಳು ಜುಮ್ಮಿ.

"ಅವುನು ತಾಜಮಾಲ್ ಕಟ್ಟಿದ ದ್ವರೆ ಕಣೆ. ಅವುನ ಮಗ ಔರಂಗಜೇಬ ಅಣ್ಣನ್ನೆ ಸಾಯಿಸಿ, ಅಪ್ಪನ್ನ ಜೈಲಿಗಾಗಿ ಜೈಲಿನ ಕಿಟಕಿಯಿಂದ ತಾಜ್‌ಮಹಲ್ ಕಾಣಂಗೆ ಮಾಡಿಬುಟ್ಟು, ಕಡೆವರಿಗೂ ಅಪ್ಪ ಅಲ್ಲೇ ಸಾಯಂಗೆ ಮಾಡಿದ್ದನಂತೆ. ಈಗ ಕುಮಾರಸ್ವಾಮಿ ದ್ಯಾವೇಗೌಡನಿಗೆ ಮಾಡಿರದೂ ಅಂಗೇ ಕಾಣ್ತದೆ."

"ನಿಜ ಕಣೊ ಉಗ್ರಿ. ಈಗ ದ್ಯಾವೇಗೌಡನ ಮನೆತ ಯಾರೂ ಇಲ್ಲದ್ದು ನೋಡಿದ್ರೆ, ಗೌಡ್ರಿಗೆ ಶಾಜಹಾನ್ ಸ್ಥಿತಿ ಬತ್ತಾ ಅದೆ. ರಿಯಲಿ ಈಶ್ವರನಿಚ್ಚೆ ಗ್ರೇಟ್."

"ನೋಡು ಮತ್ತೆ?"

"ಲ್ಯಕ್ಕ ಹಾಕು."

"ಹೇಳ್ತಿ ನೀನು."

-ಬಿ. ಚಂದ್ರೇಗೌಡ

ಕೇಶಪಾಶ, ಮನ್ಮಥ ವಿಜಯ

ಸಾಗರ ಪ್ರಾಂತ್ಯದಿಂದ ಎರಡು ನಾಟಕಗಳು ಈಚೆ ಹೊರಟವೆ. ಒಂದು ನೀನಾಸಂ ತಿರುಗಾಟದ 'ಕೇಶಪಾಶ ಪ್ರಪಂಚ'. ಮತ್ತೊಂದು ಪ್ರಖ್ಯಾತ ರಂಗ ನಿರ್ದೇಶಕ ಪ್ರಸನ್ನ ನಿರ್ದೇಶಿಸಿರುವ "ಮನ್ಮಥ ವಿಜಯ". ಈ 'ಕೇಶಪಾಶ ಪ್ರಪಂಚ' ಆಪ್ತ ರಂಗಾಸಕ್ತರಿಗೆ ಸೀಮಿತವಾದ ನಾಟಕ. ಅಂದರೆ ಪಾಠ ಹೇಳುವ ಮೇಷ್ಟ್ರು, ಪಂಡಿತರು, ಇಂತವರೇ ಪ್ರೇಕ್ಷಕರಾಗಿ ಬಂದು ನೋಡಬಯಸುವ ನಾಟಕ. ಶಿವಮೊಗ್ಗದ ಮತ್ತೂರು ಹೊಸಳ್ಳಿ ಪ್ರಾಂತ್ಯದಲ್ಲಿ ಈ ನಾಟಕ ಚೆನ್ನಾಗಿ ನಡೆಯುತ್ತಿದೆ. ಏಕೆಂದರೆ ಗದುಗಿನ 'ಕುಮಾರವ್ಯಾಸ' ಶಿವಮೊಗ್ಗ ಜಿಲ್ಲೆಯ ಮತ್ತೂರಿನ ಗಮಕಿಗಳಿಗೆ ಆಪ್ಯಾಯಮಾನವಾಗುವಂತೆ, ಈ 'ಕೇಶಪಾಶ ಪ್ರಪಂಚ'ವೂ ಕೆಲವು ಪ್ರಾಂತ್ಯದ ಪ್ರೇಕ್ಷಕರನ್ನಷ್ಟೇ ಆಹ್ವಾನಿಸುತ್ತದೆ.

ಬರುಬರುತ್ತ ಸಾಮಾನ್ಯ ಪ್ರೇಕ್ಷಕರಿಂದ ದೂರ ಸರಿಯುತ್ತ ಆಪ್ತ ರಂಗಭೂಮಿಯಾಗುತ್ತಿರುವ ನೀನಾಸಂ ನಾಟಕಗಳ ಪೈಕಿ 'ಕೇಶಪಾಶ' ಸಶಕ್ತನಾಗಿದೆ. ದ್ರೌಪದಿಯ ಸಿರಿಮುಡಿ ವಿಚ್ಛೇದಂದಿನಿಂದ ಕಟ್ಟುವವರೆಗೆ ಹರಡಿಕೊಂಡಿರುವ ಈ ನಾಟಕದ ದೃಶ್ಯಾವಳಿಯ ನಿರ್ಮಾತೃಗಳು ರನ್ನ, ಪಂಪ, ಕುಮಾರವ್ಯಾಸ, ಬಿ.ಎಂ.ಶ್ರೀಯವರು. ಈ ಮಹಾನ್ ಲೇಖಕರ ಅದ್ಭುತ ಪ್ರಸಂಗಗಳನ್ನು ತೆಗೆದು ಜೋಡಿಸಿರುವ ನಿರ್ದೇಶಕರಾದ ಕೆ.ಜಿ. ಮಹಾಬಲೇಶ್ವರರು ಸದರಿ ಲೇಖಕರ ರೂಪಗಳನ್ನು ಕೂರಿಸಿ ಅದರಿಂದಲೂ ಅವರ ಸಾಲುಗಳನ್ನು ಹೇಳಿಸಿದ್ದರೆ ಇನ್ನೂ ಪರಿಣಾಮಕಾರಿಯಾಗಿರುತ್ತಿತ್ತು ಎಂಬುದು ಹಲವು ಕನ್ನಡ ಪಂಡಿತರ ಅಭಿಪ್ರಾಯ.

'ಕೇಶಪಾಶ'ಕ್ಕೆ ನಟರು ಸರಿಯಾಗಿಯೇ ಸಾಮು ತೆಗೆದಿದ್ದಾರೆ. ಕಿಂಚಿತ್ತೂ ತಡವರಿಸದೆ ಹಳಗನ್ನಡದ ಸಂಭಾಷಣೆಯನ್ನು ಹೇಳಿದ ಪರಿ ನೋಡಿದರೆ ಅವರು ಉರುಹಚ್ಚಿರುವ ರೀತಿ ಅಚ್ಚರಿ ಹುಟ್ಟಿಸುವಂತದು. ಮಹಾಭಾರತದ ಬಗ್ಗೆ ಇಷ್ಟೆಲ್ಲಾ ನಾಟಕಗಳು ಬಂದರೂ ಬಿ. ಪುಟ್ಟಸ್ವಾಮಯ್ಯನವರು ರಚಿಸಿದ 'ಕುರುಕ್ಷೇತ್ರ'ವನ್ನು ಮೀರಿಸುವ ನಾಟಕ ಇನ್ನು ಬಂದಿಲ್ಲದಿರುವುದು ಆಶ್ಚರ್ಯ. ಸಾಮಾನ್ಯ ಪ್ರೇಕ್ಷಕನಿಂದ ಹಿಡಿದು ಪಂಡಿತ ಪಾಮರರನ್ನು ಹಿಡಿದು ಅಲ್ಲಾಡಿಸುತ್ತಿದ್ದ ಆ ನಾಟಕ ಸಾವಿರಾರು ಜನರನ್ನು ಸಾಕಿ, ಹಲವು ಕಂಪನಿಗಳನ್ನು ಸಲಹಿದೆ.

ಇನ್ನು ಪ್ರಸನ್ನರ 'ಮನ್ಮಥ ವಿಜಯ' ನಾಟಕ ಶೇಕ್ಸ್‌ಪಿಯರ್‌ನ 'ಮಿಡ್ ಸಮ್ಮರ್ಸ್ ನೈಟ್ ಡ್ರೀಮ್' ಆಧರಿಸಿದ್ದು, ನಾಟಕದ ಶುರುವಿನಲ್ಲಿ ಸೂತ್ರಧಾರಿಗಳು ಶೇಕ್ಸ್‌ಪಿಯರ್‌ನ ಇಂಗ್ಲಿಷ್ ಸಂಭಾಷಣೆಗೆ ನಮಿಸಿ ನಿರ್ಗಮಿಸುತ್ತಾರೆ. ಆದರೆ ನಾಟಕ ನೋಡುತ್ತಿದ್ದಂತೆ ಪ್ರಸನ್ನರ ಕನ್ನಡ ಸಂಭಾಷಣೆಗೆ ನಾವು ನಮಿಸಬೇಕಾಗುತ್ತದೆ. ಈ ಹಿಂದೆ ಪ್ರಸನ್ನ ನಿರ್ದೇಶಿಸಿದ್ದ 'ಹ್ಯಾಮ್ಲೆಟ್' ನಾಟಕದ ಪರಿಣಾಮಕಾರಿ ಸಂಭಾಷಣೆ ಕೇಳಿದಾಗಲೇ ನಾಟಕದ ಭಾಷೆಯ ಬಗ್ಗೆ ಪ್ರಸನ್ನರಿಗಿರುವ ವ್ಯೆಯ್ಯಾರದ ಪರಿಚಯವಾಗಿತ್ತು, 'ಮನ್ಮಥ ವಿಜಯ'ದಲ್ಲೂ ಪರಿಣಾಮಕಾರಿ ಸಂಭಾಷಣೆ ವ್ಯಕ್ತವಾಗಿದೆ.



ಸಾಗರದ ಉದಯ ಕಲಾತಂಡಕ್ಕೆ ಅರ್ಧ ಶತಮಾನದ ಇತಿಹಾಸವಿದೆ. ಆದರೆ 'ಮನ್ಮಥ ವಿಜಯ'ದಲ್ಲಿ ಒಬ್ಬರನ್ನು ಬಿಟ್ಟರೆ ಇನ್ನುಳಿದವರೆಲ್ಲಾ ಹೊಸ ತಲೆಮಾರಿನ ಹುಡುಗರು. ಆದರೂ ಎಲ್ಲರೂ ಉತ್ತಮವಾಗಿ ಅಭಿನಯಿಸಿದ್ದಾರೆ. ಬಹಳ ವರ್ಷಗಳ ನಂತರ ರಂಗಗೀತೆಗಳನ್ನು ಅಳವಡಿಸಿಕೊಂಡಿರುವ 'ಮನ್ಮಥ ವಿಜಯ'ದ ಪಾತ್ರಧಾರಿಗಳು ಒಂದಿಷ್ಟು ಗಂಟಲು ಎತ್ತರಿಸಿ ಹಾಡುವುದನ್ನು ಕಲಿತರೆ ನಾಟಕ ಇನ್ನು ಪರಿಣಾಮಕಾರಿಯಾಗಬಲ್ಲದು. ಈ ಹಿಂದೆ ಪ್ರಸನ್ನ ನಿರ್ದೇಶಿಸಿದ 'ಪುಗಳೇಂದಿ'ಯನ್ನು ನೆನಪಿಗೆ ತರುವ 'ಮನ್ಮಥ ವಿಜಯ' ಆ ನಾಟಕವನ್ನೂ ಕಾಮಿಡಿಯಲ್ಲಿ ಮೀರಿಸಿದೆ. ನೀನಾಸಂನ ಸೀಮಿತ ರಂಗಾಸಕ್ತ ಭೂಮಿಕೆ ಮತ್ತು ಪ್ರಸನ್ನರ ಅಥವಾ ಉದಯ ಕಲಾವಿದರ ಸೀಮಾತೀತ ಪ್ರೇಕ್ಷಕರ ಈ ನಾಟಕ ಜನರಲ್ಲಿ ಎರಡು ವಿಭಿನ್ನ ಅಭಿಪ್ರಾಯಗಳನ್ನು ಹೊರಹಾಕುತ್ತಿರುವ, ಸಮಯದಲ್ಲೇ, ಸಾಗರದ ಉತ್ತರ ದಿಕ್ಕಿಗಿರುವ ಕಾಗೋಡು ತಿಮ್ಮಪ್ಪ ರಂಗಮಂದಿರದಿಂದ ಯಾವ ಪ್ರತಿಕ್ರಿಯೆ ಇನ್ನೂ ಬಂದಿಲ್ಲ.

-ವರದಿಗಾರ

ಎಷ್ಟು ದೂರ?

ಚೆಲುವು ಉಕ್ಕುವ ಹುಡುಗಿ.

ಅವೇನೇನೋ ಮಾತಾಡುತ್ತಿದ್ದಳು. ನನ್ನ ಮನಸ್ಸು ಅವಳ ರೂಪದ ಮೇಲಾಗಲಿ, ಮಾತಿನ ಮೇಲಾಗಲಿ ಇರಲಿಲ್ಲ. ನಿಂಬೆಯ ಗಿಡದ ಬಗ್ಗೆ ಯೋಚಿಸುತ್ತಿದ್ದೆ. ಮಧ್ಯಾಹ್ನ ಮುಟ್ಟಿದ ಚಿಗುರು ಇನ್ನೂ ಕೈಯಿಂದ ವಾಸನೆ ಹೊಡೆಯುತ್ತಲೇ ಇದೆ. ನಾನು ನೆಟ್ಟ ನಿಂಬೆಗಿಡಗಳು ಸುಮಾರು ಹತ್ತು ತಿಂಗಳು ಎಲೆ ಮುರುಟಿಕೊಳ್ಳುತ್ತಾ, ಬಡವಾಗುತ್ತಾ, ಅಲ್ಲಲ್ಲಿ ಚಿಗುರುತ್ತ ಸೊಣಕಲಾಗಿಯೇ ಇದ್ದವು. ನಾಲ್ಕು ತಿಂಗಳ ಹಿಂದೆ ಗೆಳೆಯನೊಬ್ಬನಿಗೆ ತೋರಿಸಿದೆ. ಪ್ರತಿವಾರ ಔಷಧಿ ಸಿಂಪಡಿಸಲು ಹೇಳಿದ. ಕೇವಲ ನಾಲ್ಕು ತಿಂಗಳಲ್ಲಿ ಚಿಗುರಿ ಹಂಬುಗಳನ್ನ ಬಿಡತೊಡಗಿದವು. ಮಾರಗಲ ಹೊಮ್ಮಿದ,



ಹೊಳೆವ ಎಲೆಗಳ ನಿಂಬೆ. "ಮಜ್ಜಿಗೆಗೆ ನಾಲ್ಕು ನಿಂಬೆಯ ಚಿಗುರೆಲೆ ಹಾಕಿಕೊಂಡು ಕುಡಿಯಿರಿ. ಅದೇನು ಸ್ವಾದ ಇರುತ್ತೆ ನೋಡಿ" ಅಂದಿದ್ದ ಮಿತ್ರ. ಮೂಗು, ನಾಲಗೆಗೆ ಅದೆಂಥ ಸಂಬಂಧ!

"ನಾಲ್ಕು ಹಾಡಿನಷ್ಟು ದೂರ" ಅಂದಳು.

ಅವಳ ಮೋಹಕ ಮೂಗು ನೋಡುತ್ತ ಚಕಿತಗೊಂಡೆ.

"ಏನಂದೆ?" ಅಂದೆ.

"ನಮ್ಮ ಕಾಲೇಜಿಗೆ ಕೇವಲ ನಾಲ್ಕು ಹಾಡುಗಳ ದೂರ. ಜಯನಗರದ ಕಾಂಪ್ಲೆಕ್ಸ್‌ಗೆ ಐದು ಹಾಡು, ನಂದಾ ಟಾಕೀಸಿನ ಗುಲಾಬಿ ರಸ್ತೆ ಎಷ್ಟು ಉದ್ದ ಗೊತ್ತ? ಎರಡೂವರೆ ಪುರಂದರ ದಾಸರು...."

ಗಹಗಹಿಸಿ ನಕ್ಕೆ. ಆಕೆ ಹಾಡುವ ಹುಡುಗಿ ಕೂಡ. ತನ್ನ ಲೂನಾ ಹತ್ತಿ ಹೊರಟಳೆಂದರೆ ಅವಳ ಕಂಠ ಹಾಡುಗಳನ್ನು ಸ್ಫುರಿಸುತ್ತದೆ. ಇನ್ನೊಬ್ಬರಿಗೆ ಕೇಳಿಸದಂತೆ, ಆದರೆ ದಾರಿ ಸುಖವಾಗಿ ಸವೆಯುವಂತೆ ಹಾಡುತ್ತಾಳೆ. ನಮ್ಮೂರ ಕಡೆ ಒಂದು ಊರಿಂದ ಇನ್ನೊಂದೂರಿಗೆ 'ಕೂಗಳತೆ'ಯ ಬಗ್ಗೆ ಹೇಳುವುದು ಕೇಳಿದ್ದೆ. ಈಕೆ ಹಾಡುಗಳಿಂದ ರಸ್ತೆಗಳ ದೂರ ಅಳೆಯುತ್ತಿದ್ದಾಳೆ....

"ಕಿಲೋಮೀಟರ್ ಕಲ್ಲುಗಳಿಗೆ ಬದಲು ನಿನ್ನ ಹಾಡು ರಸ್ತೆ ಅಳೆಯೋದು ಎಷ್ಟು ಸಂತೋಷಕರ! ನಿನ್ನ ಹಾಡು ಇನ್ನೂ ಒಳ್ಳೆಯ ಕೆಲಸ ಮಾಡಬಲ್ಲದು" ಅಂದೆ.

"ಯಾವ ಕೆಲಸ?" ಎಂದು ಕುತೂಹಲಗೊಂಡಳು.

"You will get your boy for a song" ಅಂದೆ.

"ಅಂದ್ರೆ?"

"ಅದು ಇಂಗ್ಲಿಷ್ ನುಡಿಗಟ್ಟು. ಅಗ್ಗವಾಗಿ, ಸುಲಭವಾಗಿ ಸಿಕ್ಕರೆ ಅದಕ್ಕೆ got it for a song ಅಂತಾರೆ. ನಿನ್ನ ವರ ಪರೀಕ್ಷೆಯಲ್ಲಿ ಒಂದೇ ಒಂದು ಹಾಡಿನಿಂದ ನಿನ್ನ ಹುಡುಗ ನಿನ್ನ ಬಲೆಗೆ ಬೀಳ್ತಾನೆ! You will get him for a song!"

ಆಕೆ ನಗತೊಡಗಿದಳು.


ಈ ರಸ್ತೆಗಳು, ಈಕೆಯ ಹಾಡು....

ಇವಳಂಥ ಮೋಹಕ, ಆತ್ಮಗೌರವದ, ಜಾಣೆಯಾದ ಹುಡುಗಿಗೆ ಅರ್ಹವಾದ ರಸ್ತೆಗಳೇ ಬೆಂಗಳೂರಲ್ಲಿ ಉಳಿದಿಲ್ಲ.

ಈ ನಗರಸಭೆಯ ಲೋಫರ್‌ಗಳಾದ ಜನರನ್ನು ಅಂಥ ರಸ್ತೆಗಳಿಗೆ ಕರೆದೊಯ್ದು ಉರುಳಿಸಬೇಕು, ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೆ.

"ಸರಿಯಮ್ಮ, ಸ್ನಾನದ ಮನೆ ಎಷ್ಟು ಹಾಡುಗಳಷ್ಟು...." ಎಂದು ತಮಾಷೆ ಮಾಡಿದೆ. ಆಕೆ ನಗುತ್ತ ಯೋಚಿಸತೊಡಗಿದಳು. ಅದು ದೂರವಲ್ಲ, ವೇಳೆ. ತಮ್ಮ ಸ್ನಾನಕ್ಕೆ ಎಷ್ಟು ವೇಳೆ ಎಂದು ಕೇಳಿದ್ದೆ.

ಮನಸ್ಸು ಹಾಡು ಮತ್ತು ರಸ್ತೆಗಳನ್ನು ಚಿಂತಿಸುತ್ತಿತ್ತು.



ಹೇಗೆ ಪರಿಪೂರ್ಣ?

ಹೋದವಾರ ಈ ಚೆಗೆವೆರಾ ಬಗ್ಗೆ ಬರೆದು ಅಚ್ಚಾದ ಮೇಲೆ ಮತ್ತೆ ಕಣ್ಣಾಡಿಸಿದಾಗ... ನಾನು ಕೇಳಿಕೊಂಡೆ. ಸಾರ್ತರ್ ಈತನನ್ನು 'ಪರಿಪೂರ್ಣ ವ್ಯಕ್ತಿ' ಎಂದು ಏಕೆ ಕರೆದ? ಚೆಗೆವೆರಾ ನಿಜಕ್ಕೂ ಪರಿಪೂರ್ಣನೆ? ಯಾವ ಅರ್ಥದಲ್ಲಿ?

ನನಗೆ ಈಗ ಹೊಳೆದ ಒಂದೆರಡು ವಿಚಾರ ಹೇಳುತ್ತೇನೆ. ಚೆಗೆವೆರಾ ಒಂದು ರೀತಿಯಲ್ಲಿ ಪುಸ್ತಕ ಕೀಟ. ಆದರೆ ಈ 'ಕೀಟ' ತನ್ನ ಮಿತಿಯನ್ನು ಮೀರಲು ಕ್ರಿಯೆಯನ್ನು ನೆಚ್ಚಿತು. ಚೆಗೆವೆರಾ ತನ್ನ ಅಂತರಾಳದ ತಿಳವಳಿಕೆಯನ್ನು ಬಾಹ್ಯದಲ್ಲಿ ಪರೀಕ್ಷಿಸತೊಡಗಿದ. ಈತ ತನ್ನ ಜನರ ಬದುಕನ್ನು ಕಂಡು ನೊಂದುಕೊಂಡ. ಈ ನೋವನ್ನು ನಿವಾರಿಸಲು ವೈಯಕ್ತಿಕ ಮಟ್ಟದಲ್ಲಿ ಪ್ರಯತ್ನಿಸಿದ, ಆದರೆ ಅದು ಕ್ಷುಲ್ಲಕ ಪರಿಹಾರವೆನ್ನಿಸಿತು. ಜನರನ್ನು ಸಂಘಟಿಸತೊಡಗಿದ. ಕೇವಲ ಸಂಘಟನೆಯಿಂದ ಸಾಧ್ಯವಿಲ್ಲ ಎಂದು ಯುದ್ಧದ ಕಲೆ ಕಲಿತ. ವಿಶ್ವವಿದ್ಯಾನಿಲಯದ ಪುಸ್ತಕ ಭಂಡಾರದಲ್ಲಿ, ಶಾಂತಿಯಲ್ಲಿ ಶುರುವಾದ ಈತನ ಬದುಕು ರಕ್ತಪಾತದ ಹಂತ ತಲುಪಿತು. ಭ್ರಷ್ಟ ಸರ್ಕಾರಗಳ ವಿರುದ್ಧ ಹೋರಾಡಿ ಜಯಶಾಲಿಯಾದ. ಹೊಸ ವ್ಯವಸ್ಥೆಗೆ ಕಾರಣನಾದ. ಆದರೆ ಈ ಹೊಸ ವ್ಯವಸ್ಥೆ ಕೂಡ ಎಷ್ಟು ಸೀಮಿತ, ಕ್ಷುಲ್ಲಕ ಅನ್ನಿಸಿತು. ವೈಯಕ್ತಿಕ ಸಾಂತ್ವನದಿಂದ ದೇಶದ ಉದ್ಧಾರಕ್ಕಾಗಿ ಹೊರದಂತೆಯೇ ಈತ ಜಾಗತಿಕ ಕ್ರಾಂತಿಗೆ ಪ್ರಯತ್ನಿಸಿದ. ಇದೆಲ್ಲದರ ನಡುವೆ ಈತ ತನ್ನ ಆಳದ ದಾಹ ಮರೆತಿರಲಿಲ್ಲ, ಪ್ರೀತಿಸಿದ, ಮದುವೆಯಾದ, ಸಂಸಾರಿಯಾದ. ಖಾಸಗಿ ಬದುಕಿನ ಸಂತೋಷ ಮತ್ತು ಮಿತಿ, ಸಾರ್ವಜನಿಕ ಸಾಧನೆಯ ಸಾರ್ಥಕ್ಯ ಮತ್ತು ದ್ವಂದ್ವ ಅವನಿಗೆ ಗೊತ್ತಾದವು.



ಹೇಗೆ ಗೊತ್ತಾದವು? ಕ್ರಿಯೆಯಲ್ಲಿ, ಸಾವಿನಲ್ಲಿ.

ಹೆಣ್ಣು: ರಾಜಕೀಯದಲ್ಲಿ

ನಮ್ಮ ಪುಂಡಲೀಕಶೇಟ್ ಸ್ವಲ್ಪ ಒರಟ. ಈತನ ಹಾಸ್ಯ ಮೃದು ನಗೆಯದಲ್ಲ, ಘೊಳ್ಳೆಂದು ನಗಿಸುವಂಥದು. ಕೆಲವು ಸಲ ಚುಚ್ಚುವಂಥದು. ಈತ ಮೊದಲ ಬಾರಿಗೆ ತನ್ನ ಅಂಕಣದಲ್ಲಿ ಪ್ರೇಮವನ್ನು, ಅಂದರೆ ಮಜಾವನ್ನು, ಅಂದರೆ ಪೋಲಿತನವನ್ನು, ಅಂದರೆ ಗಂಡು ಹೆಣ್ಣಿನ ಅವಾಂತರವನ್ನು ಕುರಿತು 'ಡಿಂಗ್‌ಡಾಂಗ್ ನಡೀತಂತೆ' ಎಂದು ಬರೆದಾಗ ನಾನು ಪಕ್ಕೆ ಹಿಡಿದುಕೊಂಡು ನಕ್ಕಿದ್ದೆ. ನಮ್ಮ ಓದುಗರೂ ಅಷ್ಟೆ. ಅದು ಕನ್ನಡ ನುಡಿಗಟ್ಟಲ್ಲಿ ಸೇರಿಹೋಗಿದೆ. ಅಷ್ಟು ಚೆನ್ನಾಗಿದೆ. ಈಚೆಗೆ ಈತ ಅದೇ ರೀತಿಯೆಂದು ತಾನು ತಿಳಿದ ಘಟನೆಯೊಂದನ್ನು ಬೇರೆ ಮಾತಲ್ಲಿ ತಮಾಷೆ ಮಾಡಿದ. ಸಾಗರದ ಪ್ರವಾಸಿ ಮಂದಿರದಲ್ಲಿ....

ಈ ಸಲ ಇಲ್ಲಿ ಪ್ರಫುಲ್ಲ ಎಂಬ ನಾನು ಬಲ್ಲ ಹೆಣ್ಣು ಮಗಳು ಪುಂಡಲೀಕ ಶೇಟ್‌ರ ಹಾಸ್ಯಕ್ಕೆ ದಂಗಾಗಿದ್ದಳು. ಈಕೆ ಗಟ್ಟಿ ಹೆಂಗಸು. ಸೋಷಲಿಸ್ಟರ ಜೊತೆಗೆ ಓಡಾಡಿದವಳು. ಒಬ್ಬ ಮೂರ್ಖ ಜನತಾ 'ಭೀರ್ಮಣ್ಣ'ನ ಪ್ರೀತಿ, ಅಸೂಯೆ, ಭಂಡತನಕ್ಕೆ ತುತ್ತಾದ ಈಕೆ ಅಷ್ಟಿಷ್ಟು ತಪ್ಪು ಮಾಡಿರಬಹುದು. ಆದರೆ ಹೆಂಗಸೊಬ್ಬಳು ರಾಜಕೀಯದಲ್ಲಿದ್ದರೆ ಜನ ಆಕೆಯ ವಿಷಯದಲ್ಲಿ ಹೇಗೆ ವರ್ತಿಸುತ್ತಾರೆ, ಏನೆಲ್ಲ ಕತೆ ಹಬ್ಬಿಸುತ್ತಾರೆ ಎಂಬುದನ್ನು ಎಲ್ಲರೂ ಬಲ್ಲರು. ವಿದ್ಯಾ ಎಂಬ ಅಂಕೋಲಾದ ಮಹಿಳೆ ಗಂಡಸರ ಜೊತೆಗೆ ಓಡಾಡಿದ್ದಕ್ಕೇ ಆಕೆಗೆ ತೊಂದರೆಯಾಯಿತು, ಆಕೆಯೊಂದಿಗೆ ಓಡಾಡಿದವರೆಲ್ಲ ಶಾಸಕರು, ಮಂತ್ರಿಗಳು, ಮುಖ್ಯಮಂತ್ರಿ ಆದರು. ಆದರೆ ವಿದ್ಯಾ ಮಾತ್ರ ಅಂಕೋಲದಲ್ಲೇ ಉಳಿದರು.

ಆದ್ದರಿಂದ ನಾನು ಪ್ರಫುಲ್ಲಗೆ ಸಮಾಧಾನ ಹೇಳಿದೆ. ಸಾರ್ವಜನಿಕ ಜೀವನದಲ್ಲಿ ಸ್ವಲ್ಪ ಹುಷಾರಾಗಿರಲು ಸೂಚಿಸಿದೆ. ಪ್ರಫುಲ್ಲಾ ತಣ್ಣಗಾದರೂ ಒಳಗೆ ಅತೃಪ್ತಿ ಉಳಿದ ಹಾಗೇ ಇತ್ತು. ಕಾಫಿ ಕೊಡಿಸಿ ಮಾತಾಡಿದೆ. "ಹೇಗಿದೆ ಜನತಾ ಸರ್ಕಾರ?" ಅಂದೆ.

"ನಿಮಗೆ ನಾನು ಹೇಳಬೇಕೆ? ನಮಗೆಲ್ಲ ಒಂದು ಥರ ಕಾಣಿಸುತ್ತೆ, ನಿಮಗೆ ಇನ್ನೊಂದು ಥರ ಕಾಣಿಸುತ್ತೆ" ಅಂದರು.

"ಅದು ಸರಿ. ಸತ್ಯ ಅಷ್ಟೊಂದು ತರಹಗಳಾಗಿ ಇರಲಿಕ್ಕಿಲ್ಲ ಅಲ್ಲವೆ?" ಅಂದೆ.

"ಸತ್ಯ"ಕ್ಕೆ ಹರಿಶ್ಚಂದ್ರ ಉದಾಹರಣೆ, ಸುಳ್ಳಿಗೆ?



ಕೆ.ವಿ. ರಾಘವೇಂದ್ರ, ಮೈಸೂರು
ಸಾಹಿತ್ಯ ಕ್ಷೇತ್ರಕ್ಕೂ, ರಾಜಕೀಯ ಕ್ಷೇತ್ರಕ್ಕೂ ಇರುವ ವ್ಯತ್ಯಾಸವೇನು?
* ಇಲ್ಲಿನ ಜ್ಞಾನಕ್ಕೆ ಅಲ್ಲಿ ಪೀಠ ಇರಲ್ಲ ಅಂತ ಇತ್ತೀಚೆಗೆ ಜಗಜಾಹೀರಾಗಿದೆಯಲ್ಲ.

ರಾಗಿಣಿ, ದೇವದುರ್ಗ
ಬುದ್ಧಿಜೀವಿಗಳು ಗೋಸುಂಬೆಗಳೆ?
* ಇಲ್ಲ, ಚೇಳು, ಸರ್ಪ ಕೊಳಕುಮಂಡಲಗಳು ಅಂತ ಸ್ವಯಂ ಘೋಷಣೆ ಮಾಡಿದ್ದಾರಲ್ಲಾ.

ಕವಿತಾ ಮಧುಸೂದನ್, ದಾವಣಗೆರೆ
ಇನ್ಫೋಸಿಸ್‌ಗೆ ಕುಮಾರಸ್ವಾಮಿ ನೂರಾರು ಎಕರೆ ಜಮೀನು ಕೊಟ್ಟರೂ ದೇವೇಗೌಡರಿಂದ ತಕರಾರಿಲ್ಲ ವೇಕೆ?
* ಅದೀಗ ಗೌಡರ ಖಜಾನೆಗೆ 'In-flow-sys' ಆಗಿ ಪರಿವರ್ತನೆಗೊಂಡಿದೆಯಂತೆ!

ಎಂ. ನಿಸರ್ಗ, ದಾವಣಗೆರೆ
ಪ್ರಕಾಶ್‌ಗೆ ಉಪಮುಖ್ಯಮಂತ್ರಿ ಸ್ಥಾನ ಬಯಸದೇ ಬಂದ ಭಾಗ್ಯವಾದರೆ ಈಗಿನ ಅಧ್ಯಕ್ಷಗಿರಿ?
* ಮುಳ್ಳಿನ ಕಿರೀಟ

ಕೆ. ಶ್ರೀನಿವಾಸ್, ಮಂಡ್ಯ
'ಮೂರ್ಖರ ದಿನ'ದಂದು ದೇವೇಗೌಡರು ಮತ್ತೆ ಯಾರನ್ನು ಮೂರ್ಖರನ್ನಾಗಿ ಮಾಡಬಹುದು?
* ಅವರ ದುರಾದೃಷ್ಟ ಕರ್ನಾಟಕದಲ್ಲಿ ಬಲಿಗಳಾಗಲು ಯಾರೂ ಉಳಿದಿಲ್ಲ.

ಆರ್. ಸಿರಿತರ್ಲಗಟ್ಟಿ, ಹುಬ್ಬಳ್ಳಿ
'ಗೌಡ್ರು ಒಪ್ಪಿದ್ರೆ ಸಂಪುಟ ಸೇರ್ತೇನೆ' ಎಂದು ಪ್ರಕಾಶ್ ಹೇಳ್ತಿದ್ದಾರಲ್ಲ?
* ಅಧ್ಯಕ್ಷ ಸ್ಥಾನ ಕೊಟ್ಟು ತೆಪ್ಪಗಿರು ಅಂದಾಗಿದೆಯಲ್ಲಾ.

ಅ. ರೆಡ್ಡಿ, ಬೆಂಗಳೂರು
ಅಡ್ವಾಣಿ ವಿರೋಧ ಪಕ್ಷದಲ್ಲಿದ್ದಾಗಲೇ ರಥಯಾತ್ರೆ ನಡೆಸುವುದೇತಕ್ಕೆ?
* ತೀರ್ಥಯಾತ್ರೆಗೆ ತಯಾರಿ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
ಸೋನಿಯಾ ಗಾಂಧಿ ಮಾಡಿದ್ರೆ ತ್ಯಾಗ ಬೇರೆಯವರು ಮಾಡಿದ್ರೆ ತ್ಯಾಜ್ಯನಾ?
* ಇಲ್ಲ, ವ್ಯಾಜ್ಯ!

ಓದುಸಿದ್ದೇಗೌಡ ಕೆಬ್ಬೇಹಳ್ಳಿ, ಕನಕಪುರ
'ಗಣಿ'ಗಾರಿಕೆಗೂ, 'ಕಾಮ'ಗಾರಿಗೂ ಇರುವ ವ್ಯತ್ಯಾಸವೇನು?
* ಡಿ.ಕೆ. ಬ್ರದರ್ಸ್ ಎರಡರಲ್ಲೂ ವ್ಯತ್ಯಾಸವಿಲ್ಲದಂತೆ ಕದಿಯುತ್ತಿದ್ದಾರಲ್ಲಾ ಮಾರಾಯ್ರೆ!

ದಿ.ಎಸ್. ಪ್ರವೀಣ್, ದುಮ್ಮೇನಹಳ್ಳಿ
ಹುಡುಗರು ಕ್ರಿಕೆಟ್ ಆಡುವಾಗ ಹುಡುಗಿಯರು ಎದುರಿಗೆ ಬಂದರೆ ಬೋಲ್ಡ್ ಆಗುತ್ತಾರೆ, ಏಕೆ?
* ಸೋತರೂ ಗೆಲ್ಲುವ ತಂತ್ರ.



ಕೆ. ರವೀಶ್, ಗಂಗಾನಗರ
'ವಾರಕ್ಕೆರಡು' ಅಂತಿದ್ದವರು ಇಷ್ಟು ಬೇಗ ಸುಸ್ತಾದರಲ್ಲಾ?
* ದೀಪ ಆರುವ ಮೊದಲು ಜೋರಾಗಿ ಉರಿಯುತ್ತಂತೆ, ಗೊತ್ತಾ?

ವಿಜಯಕುಮಾರ್, ಕನಕಪುರ
'ತಂದೆಗೆ ತಕ್ಕ ಮಗ' ಕೂಡ ತಂದಾ ಹೊಡೀತಿದೆಯಂತಲ್ಲಾ?
* ಪ್ರೇಕ್ಷಕನಿಗೆ ತಕ್ಕ ಸಿನಿಮಾ ಆಗದಿದ್ದರೆ ಇನ್ನೇನು ಬಿಸಿ ಆಗುತ್ತಾ?

ರಮ್ಯ ಕುಮಾರಿ, ಮಂಡ್ಯ
'ಲಂಕೇಶ್ 71' ಕಾರ್ಯಕ್ರಮ ನೋಡಿ ಲಂಕೇಶ್ ಏನಂದಿರಬಹುದು?
* 'ಮಿಯಾಂವ್!'

ಹೇಮಲತಾ ಮಹಾದೇವ್, ಬೆಂಗಳೂರು
"ಸತ್ಯ"ಕ್ಕೆ ಹರಿಶ್ಚಂದ್ರ ಉದಾಹರಣೆ, ಸುಳ್ಳಿಗೆ?
* ಸಾಟಿ ಇಲ್ಲದ ಪೊಲಿಟಿಕಲ್ ಕಿಂಗ್ ದೇವೇಗೌಡ.

ದಿ. ವೆಂಕಟೇಶ್, ದೇವದುರ್ಗ
ಸೌಂದರ್ಯ ನೋಡಲು, ನೂರು ಕಣ್ಣು ಸಾಲದು ಎಂದು ಕವಿಗಳು ಹೇಳುತ್ತಾರಲ್ಲ?
* 'ಶೀಲು' (ಪಿ. ಲಂಕೇಶ್)ಗೆ ಒಂದೇ ಕಣ್ಣು ಸಾಕಿತ್ತು!

ಬಹುಮಾನಿತ ಪ್ರಶ್ನೆಗಳು

ಛೀ ತುಂಟಿ!

ಖ್ಯಾತ ಚಿತ್ರನಟಿಯ ಎದುರು ಕುಳಿತ ನಿರ್ದೇಶಕನೊಬ್ಬ ಆಕೆಯ ಮಾದಕ ಅಂಗಾಂಗಗಳಿಗೆ ಮಾರುಹೋಗಿ ಆಕೆಯನ್ನು ಇನ್ನಿಲ್ಲದಂತೆ ವರ್ಣಿಸುತ್ತಿದ್ದ.




ಸಿಕ್ಕಾಪಟ್ಟೆ ಉಬ್ಬಿ ಹೋದ ನಟಿ ಸಾವರಿಸಿಕೊಂಡು, "ಫೋಟೋಜನಿಕಲಿ ನನ್ನ ಯಾವ ಅಂಗ ಅತ್ಯಂತ ಆಕರ್ಷಕ?" ಎಂದು ಉಸಿರಿದಳು.

ನಿರ್ದೇಶಕ, "ಹೇಳಬಹುದು, ಆದರೆ ಅದರ ಮೇಲೆಯೇ ಕುಳಿತುಬಿಟ್ಟಿದ್ದಿಯಲ್ಲಾ" ಎಂದ.

ಇಸ್ಪೀಟಾಡಲು ಬಂದವನಿಗೆ ಬ್ಯಾಂಡ್ ಹುಡುಗಿಯರು ಫ್ರೀ

ಗೋಲ್ಡ್‌ಫಿಂಚ್ ಎಂಬ ಜುಗಾರಿ ಕ್ರಾಸ

ವಿಶಾಲವಾದ ಟೇಬಲ್. ರಾತ್ರಿ ಒಂದೂವರೆಯಾಗಿದೆ. ರೌಂಡ್ ಟೇಬಲ್ಲಿನ ಸುತ್ತ ಕುಂತು ಎಲೆ ತಟ್ಟುತ್ತಿರುವವರ ಮಧ್ಯೆ ಮಾಜಿ ಮಂತ್ರಿ ಅಲ್ಲಂ ವೀರಭದ್ರಪ್ಪ ಗಟಗಟನೇ ವಿಸ್ಕಿ ಗ್ಲಾಸೆತ್ತಿದ್ದೇ 'ಅವನಪ್ಪನ್' ಎಂದು ಹಣೆ ಚಚ್ಚಿಕೊಳ್ಳುತ್ತಿದ್ದಾರೆ. ಅವರ ಪಕ್ಕದಲ್ಲಿ ಮಾಜಿ ಪೌರಾಡಳಿತ ಸಚಿವ ಮಲ್ಲಿಕಾರ್ಜುನ ನಾಗಪ್ಪ ದೀರ್ಘ ಧಮ್ಮೆಳೆದು ಹೊಗೆ ಸುರುಳಿ ಬಿಡುತ್ತಾ ಆಕಾಶ ದಿಟ್ಟಿಸುತ್ತಿದ್ದಾರೆ. ಅದು ಅವತ್ತಿನ ಕೊನೆಯ ಸುತ್ತಿನ ರಮ್ಮಿ. ಮಾಜಿ ಮಂತ್ರಿಗಳಿಬ್ಬರಿಗೂ ತಲಾ ಐದು ಲಕ್ಷ ಕೈ ಬಿಟ್ಟಿದೆ!



ಮಲ್ಲಿಕಾರ್ಜುನ ನಾಗಪ್ಪ

ಅದು ಕುಬೇರರಿಗೆಂದೇ ಸೃಷ್ಟಿಯಾದ ಇಸ್ಪೀಟು ಲೋಕ. ಇಬ್ಬರು ಮಾಜಿ ಮಂತ್ರಿಗಳಷ್ಟೇ ಅಲ್ಲ, 'ವಿಷ್ಣು ಸೇನಾ' ಚಿತ್ರದ ಪ್ರೊಡ್ಯೂಸರ್ ದಿಲಕ್ಸ್ ಗೋವಿಂದು, ಗಾಂಧಿನಗರದ ಮತ್ತೊಬ್ಬ ಸಿನಿಮಾ ನಿರ್ಮಾಪಕ ಬಾಲಮುತ್ತಯ್ಯ, ಬೆಂಗಳೂರಿನ ಕುಖ್ಯಾತ ಕ್ರಿಕೆಟ್ ಬೆಟ್ಟಿಂಗ್ ಖದೀಮ ನರಹರಿ, ಮಂಗಳೂರಿನ ಲಿಕ್ಕರ್ ದೊರೆ ಎ.ಜೆ. ಶೆಟ್ಟಿ, ಮುಂಬಯಿಯ

ರಾ. ಸೋಮನಾಥ್

ಹೋಟೆಲಿಯರ್ ಸಂಜಯ್, ಬೆಂಗಳೂರಿನ ನಟೋರಿಯಸ್ ಕ್ರಿಕೆಟ್ ಮತ್ತು ರೇಸ್ ಬುಕ್ಕಿ ಅಮ್ಮುಬಾಯಿ, ಪ್ರಖ್ಯಾತ ಸೌಂದರ್ಯ ವರ್ಧಕ ಚಿಕಿತ್ಸಾಲಯವಾದ ಬಾತ್ರಾ ಕ್ಲಿನಿಕ್‌ನ ಧಣಿ ರಾಕೇಶ್ ಬಾತ್ರಾ; ಹೀಗೆ ಇಸ್ಪೀಟಿಗೆ ಕುಂತವರಾರೂ ಮಾಮೂಲಿ ಮನುಷ್ಯರಲ್ಲ, ಹಾಗಂಥ ಅದು ಇಸ್ಪೀಟ್ ಕ್ಲಬ್ ಅಲ್ಲ, ಲೈಸೆನ್ಸಿಲ್ಲ, ಪೋಲೀಸರ ಭಯವಿಲ್ಲ, ರೌಡಿಗಳ್ಯಾರೂ ತಲೆ ಹಾಕುವುದಿಲ್ಲ. ನಡುರಾತ್ರಿಯತನಕ ಇಸ್ಪೀಟಾಡಿ ಲಕ್ಷಗಟ್ಟಲೇ ದುಡ್ಡು ಕಳಕೊಂಡವನು ತೀರ ಹೈರಾಣಾದನೆಂದರೆ ಪಕ್ಕದ ರೂಮ್‌ನಲ್ಲಿರುವ ಲೈವ್‌ಬ್ಯಾಂಡ್ ಹುಡುಗಿಯರ ಪೈಕಿ ತನಗಿಷ್ಟ ಬಂದವಳೊಡನೆ ಮತ್ತೊಂದು ರೂಮ್ ಹೊಕ್ಕಬಹುದು. ಅಲ್ಲಿ ಹೆಣ್ಣು-ಹೆಂಡ ಎರಡೂ ಯಥೇಚ್ಛ.


ಆದರೆ ಒಂದೇ ಒಂದು ಷರತ್ತೆಂದರೆ ಗಿರಾಕಿ ಕೋಟ್ಯಾಧೀಶ್ವರನಾಗಿರಬೇಕು. ನಂಬಿಕಸ್ತನಾಗಿರಬೇಕು. ಮತ್ತು ಕನಿಷ್ಠ ಎರಡು ಲಕ್ಷ ಕಟ್ಟಿಯೇ ಒಳಕ್ಕೆ ಕಾಲಿಡಬೇಕು!



ಕ್ರಿಕೆಟ್ ಬುಕ್ಕಿ ನರಹರಿ

ಇಂಥಾದೊಂದು ಐಷಾರಾಮಿ ಜೂಜು ಕಟ್ಟೆಯ ಹೆಸರು 'ಗೋಲ್ಡ್‌ಫಿಂಚ್.' ಬೆಂಗಳೂರಿನ ಶಿವಾನಂದ ಸರ್ಕಲ್ ಸಮೀಪದ ಹೋಟೆಲ್ ಬೆಂಗಳೂರು ಇಂಟರ್‌ನ್ಯಾಷನಲ್ ಎದುರಿನ ಹೊಚ್ಚಹೊಸ 'ಗೋಲ್ಡ್‌ಫಿಂಚ್' ಎಂಬ ಕ್ಯಾಟಗಿರಿ ಹೋಟೆಲಿನ ಎದರು ಯಾವುದೇ ಶುಕ್ರವಾರ, ಶನಿವಾರ ಅಥವಾ ಭಾನುವಾರದ ಸಂಜೆ ನಿಂತುಬಿಟ್ಟರೆ ಮೇಲ್ಕಂಡ ಪ್ರತಿಯೊಬ್ಬರನ್ನೂ ಕಣ್ಣಾರೆ ಕಾಣಬಹುದು. ಸಂಜೆಯಾಗುತ್ತಿದ್ದಂತೆ ಒಬ್ಬೊಬ್ಬರಾಗಿ ಗೋಲ್ಡ್‌ಫಿಂಚ್ ಹೊಕ್ಕುವ ದೃಶ್ಯವಂತೂ ಮನಮೋಹಕ.

ಇಲ್ಲಿಗೆ ಎರಡು ವರ್ಷದ ಹಿಂದೆ ಉದ್ಘಾಟನೆಗೊಂಡ 'ಗೋಲ್ಡ್‌ಫಿಂಚ್' ಅನ್ನು ಬೆಂಗಳೂರಿನ ಐಷಾರಾಮಿ ಇಸ್ಪೀಟ್ ಅಡ್ಡೆಯನ್ನಾಗಿ ರೂಪಿಸಿದವನು ಪ್ರಕಾಶ್ ಶೆಟ್ಟಿ. ಈತ ಕಂಠೀರವ ಸ್ಟೇಡಿಯಂ ಎದುರಿನ ಕುಡ್ಲ ಮತ್ತು ಬಂಜಾರ ಎಂಬ ಬ್ಯಾಂಡ್ ಅಡ್ಡೆಗಳ ಮಾಲೀಕನೂ ಹೌದು. ಗೋಲ್ಡ್‌ಫಿಂಚ್ ಪಕ್ಕದಲ್ಲೇ ಬಂಜಾರ ಹೆಸರಿನ ಮತ್ತೊಂದು ರೆಸ್ಟೋರೆಂಟ್ ಮತ್ತು ಕನ್ನಿಂಗ್‌ಹ್ಯಾಮ್ ರಸ್ತೆಯ 'ಔರಾ' ಎಂಬ ಡಿಸ್ಕೋಥೇಕ್‌ಗೂ ಈತನೇ ಧಣಿ. ಬೆಂಗಳೂರಿನ ಜನಕ್ಕೆ ಪ್ರಕಾಶ್ ಶೆಟ್ಟಿ ಒಬ್ಬ ಹೋಟೆಲಿಯರ್ ಎನ್ನುವುದಕ್ಕಿಂತಲೂ ಲ್ಯಾಂಡ್ ಡೀಲರ್ ಎಂದರೇನೇ ಹೆಚ್ಚು ಪರಿಚಿತ. ಹತ್ತು ವರ್ಷದ ಹಿಂದೆ ಜೆ.ಪಿ. ನಗರದಲ್ಲಿ ಯಕಶ್ಚಿತ್ ಕ್ಯಾಂಟೀನ್ ಒಂದನ್ನು ನಡೆಸಿಕೊಂಡಿದ್ದ ಪ್ರಕಾಶ್ ಶೆಟ್ಟಿ ಇವತ್ತು 'ಗೋಲ್ಡ್‌ಫಿಂಚ್'ನಂಥ ಕೋಟಿ ಲೆಕ್ಕದ ರಹಸ್ಯ ಇಸ್ಪೀಟ್ ಅಡ್ಡೆಗೆ ಧಣಿಯಾಗಿದ್ದು ಎಷ್ಟು ವಿಚಿತ್ರವೋ ಈತನ ಮುಂಬಯಿ ಕಾಂಟ್ಯಾಕ್ಟುಗಳು ಮತ್ತು ಲೈವ್ ಬ್ಯಾಂಡ್ ಲಿಂಕುಗಳೂ ಅಷ್ಟೇ ನಿಗೂಢ.



ಅಲ್ಲಂ ವೀರಭದ್ರಪ್ಪ

ಬಂದ ಗಿರಾಕಿ ಅದೆಂಥಾ ಪ್ರಭಾವಿ ಯಾದರೂ ರಿಸೆಪ್ಷನ್‌ನಲ್ಲಿರುವ ಶೆಟ್ಟಿಯ ಬಂಟ ಜಾಫ್ರೀ ಕಾಸ್ಟಾನ ಕೈಯಲ್ಲಿ ಎರಡು ಲಕ್ಷ ತೆತ್ತ ನಂತರವೇ ಪ್ರವೇಶ. ಗೋಲ್ಡ್‌ಫಿಂಚ್‌ನ ಎರಡನೇ ಮಹಡಿಯಿಂದಾಚೆಗಷ್ಟೇ ಗಿರಾಕಿಗಳಿಗೆ ರೂಮ್ ಕೊಟ್ಟು ಇಡೀ ಮೊದಲ ಮಹಡಿಯನ್ನು ಜುಗಾರಿಗೆಂದು ಮೀಸಲಿಟ್ಟಿದ್ದಾನೆ. ಬೇರೆ ಯಾರಿಗೂ ಮೊದಲ ಮಹಡಿಗೆ ಪ್ರವೇಶವಿಲ್ಲ. ಕ್ಲೋಸ್ಡ್ ಸರ್ಕ್ಯೂಟ್ ಟೀವಿಯಲ್ಲಿ ಪ್ರತಿ ರೂಮಿನ ಆಗುಹೋಗುಗಳನ್ನು ಪ್ರಕಾಶ್ ಶೆಟ್ಟಿ ಗಮನಿಸುತ್ತಿರುತ್ತಾನೆ.




ಗೋಲ್ಡ್‌ಫಿಂಚ್ ಹೋಟೆಲ್




ಪ್ರಕಾಶ್ ಶೆಟ್ಟಿಯ ಬಂಜಾರಾ

ಪ್ರಾರಂಭದಲ್ಲಿ ಜೆ.ಪಿ. ನಗರದ ಸೈಟು ವ್ಯವಹಾರವೊಂದಕ್ಕೆ ಕೈಯಿಟ್ಟು ಡೀಲಿನ ರುಚಿ ಕಂಡ ಪ್ರಕಾಶ್ ಶೆಟ್ಟಿ ಕ್ರಮೇಣ ಬಿನ್ನಿಪೇಟೆ ಶಾಸಕ ಸೋಮಣ್ಣನ ಆಸ್ಥಾನದಲ್ಲಿ ಕಾಣಿಸಿಕೊಂಡ. ಜೊತೆ ಜೊತೆಗೇ ಲೈವ್‌ಬ್ಯಾಂಡ್ ಕಾಯಕಕ್ಕೂ ಕೈಯಿಟ್ಟ. ಜೆ.ಪಿ. ನಗರ, ಬನಶಂಕರಿ, ಚಂದ್ರಾ ಲೇಔಟ್‌ಗಳಲ್ಲಿ ಕೊಂಡ ಸೈಟುಗಳಲ್ಲಿ ಅಪಾರ್ಟ್‌ಮೆಂಟ್ ಕಟ್ಟಿಸಿದ. ಆಲಿ ಅಸ್ಗರ್ ರಸ್ತೆಯಲ್ಲೊಂದು ಬಂಗಲೆ ಖರೀದಿಸಿ ಅದಕ್ಕೆ ತ್ರಿಶೂಲ್ ಡೆವಲಪರ್ಸ್ ಎಂಬ ಬೋರ್ಡು ಹಾಕಿಸಿದ ಪ್ರಕಾಶ್ ಶೆಟ್ಟಿಗೆ ಅದ್ಯಾವ ಡೀಲಿನಲ್ಲಿ ಮಂಗಳೂರಿನ ಲಿಕ್ಕರ್ ದೊರೆ ಎ.ಜೆ. ಶೆಟ್ಟಿ ಗಂಟು ಬಿದ್ದನೋ. ಈ ಎ.ಜೆ. ಶೆಟ್ಟಿಗೆ ಕಾಂಟ್ರಾಕ್ಟ್ ದಂಧೆ, ಎ.ಜೆ. ಆಸ್ಪತ್ರೆ, ಮೆಡಿಕಲ್ ಕಾಲೇಜ್, ಡಿಸ್ಟಿಲರಿ ಎಲ್ಲವೂ ಇತ್ತು. ಆದರೆ ಇದೆಲ್ಲವನ್ನೂ ಮೀರಿದ ಇಸ್ಪೀಟ್ ಹುಚ್ಚಿತ್ತು.



ಬಾಲಮುತ್ತಯ್ಯ

ಪ್ರಕಾಶ್ ಶೆಟ್ಟಿ ಮತ್ತು ಎ.ಜೆ. ಶೆಟ್ಟಿ ವಾರಕ್ಕೊಮ್ಮೆಯಾದರೂ ಮುಂಬಯಿಯ ಹುಮಾಯೂನ್ ಕ್ಲಬ್ಬಿಗೆ ಹೋಗಿ ಇಸ್ಪೀಟ್ ಆಡಬೇಕು. ಆ ಮಟ್ಟದ ಇಸ್ಪೀಟ್ ಪಂಟರ್‌ಗಳು. ಪ್ರಕಾಶ್ ಶೆಟ್ಟಿಯ ಅಣ್ಣ ಶಂಕರ್ ಪ್ರತಿಷ್ಠಿತ ಬ್ಯಾಂಕ್ ಒಂದರ ರಿಕವರಿ ಮ್ಯಾನೇಜರ್. ಯಾವ್ಯಾವ ಪ್ರಾಪರ್ಟಿಯ ಮೇಲೆ ಸಾಲ ವಿತ್ತೋ ಅದೆಲ್ಲವನ್ನೂ ತಮ್ಮ ಪ್ರಕಾಶ್ ಶೆಟ್ಟಿಗೇ ದಕ್ಕುವಂತೆ ಶಂಕರ್ ನೆರವಾಗುತ್ತಿದ್ದ. ಹಾಗೇ ಸಾಲಕ್ಕೆ ತುತ್ತಾದ ಬೆಂಗಳೂರ್ ಇಂಟರ್ ನ್ಯಾಷನಲ್ ಹೋಟೆಲ್ ಎದುರಿನ 100x100 ಸೈಜಿನ ಸೈಟು ಅಣ್ಣನ ಮೂಲಕವೇ ಪ್ರಕಾಶ್ ಶೆಟ್ಟಿಯ ಪಾಲಾಯಿತು. ಅದರಲ್ಲೇ ಏಳಂತಸ್ತಿನ ಹೋಟೆಲ್ ಎಬ್ಬಿಸಿದ ಶೆಟ್ಟಿ ಅದರ ಮೊದಲನೇ ಮಹಡಿಯ ರೂಂ ನಂಬರ್ ನೂರಾ ಒಂಭತ್ತನ್ನು ಇಸ್ಪೀಟಿಗೆಂದೇ ಕಟ್ಟಿಸಿದ. ಪಕ್ಕದ ನೂರಾ ಎಂಟು ಕೂಡ ಇಸ್ಪೀಟಿಗೆ ಮೀಸಲಾಗಿಟ್ಟ. ಮಗ್ಗುಲಿಗೇ ಇದ್ದ ನೂರಾ ಆರನೇ ನಂಬರ್‌ನ ಕೋಣೆಯನ್ನು ಕ್ರಿಕೆಟ್ ಬುಕ್ಕಿ ನರಹರಿ ತನ್ನ ಖಾಯಂ ಅಡ್ಡೆಯನ್ನಾಗಿ ಮಾಡಿಕೊಂಡ. ಆದರೆ ನೂರಾಮೂರನೇ ನಂಬರ್ ಕೋಣೆಯಿತ್ತಲ್ಲ, ಅಲ್ಲಿ ಹಿಂಡುಗಟ್ಟಲೇ ಲೈವ್‌ಬ್ಯಾಂಡ್ ಹುಡುಗಿಯರನ್ನು ಪ್ರಕಾಶ್ ಶೆಟ್ಟಿ ತಂದಿಟ್ಟ. ಅದೇ ಗೋಲ್ಡ್‌ಫಿಂಚ್‌ನ ಅತೀ ಮುಖ್ಯ ಗುರುತ್ವಾಕರ್ಷಣ ಕೇಂದ್ರವಾಯಿತು.



ದಿಲಕ್ಸ್ ಗೋವಿಂದು

ಪ್ರತಿ ಶುಕ್ರವಾರ, ಶನಿವಾರ ಮತ್ತು ಭಾನುವಾರ ಇಸ್ಪೀಟ್ ಭಯಂಕರ ರಂಗೇರುತ್ತಿತ್ತಾದರೂ ಮಿಕ್ಕ ದಿನಗಳಲ್ಲಿ ಬೇರೆಯದೇ ರೀತಿಯ ಜುಗಾರಿ ಶುರುವಾಯಿತು. ಅದು ಮುಂಬಯಿಯ ಹುಮಾಯೂನ್ ಕ್ಲಬ್‌ನ ಶ್ರೀಮಂತ ಜೂಜುಕೋರರನ್ನು ವಿಮಾನದಲ್ಲಿ ಬೆಂಗಳೂರಿಗೆ ಕರೆ ತಂದು ರಾತ್ರಿಯಿಡೀ ಇಸ್ಪೀಟಾಡಿಸಿ ಬೆಳಿಗ್ಗೆ ಮತ್ತೆ ಮುಂಬಯಿಯ ಫ್ಲೈಟ್ ಹತ್ತಿಸುವ ಪ್ಯಾಕೇಜ್ ಟ್ರಿಪ್. ಮುಂಬಯ ಅರ್ಧ ಖರ್ಚಿಗೆ ಎಲ್ಲ ಮುಗಿಯುತ್ತಿತ್ತು. ಮುಂಬಯಿಯ ಹೋಟೆಲಿಯರ್ ಸಂಜಯ್‌ನೇ ಅದಕ್ಕೆ ಏಜೆಂಟ್ ಆದ. ಇಸ್ಪೀಟಿನ ಜೊತೆಗೇ ಮದ್ಯ ಬೋರಾದರೆ ಬ್ಯಾಂಡ್ ಲಲನೆಯರು. ದೇಶದಲ್ಲೆಲ್ಲೂ ಇಲ್ಲದ ವಿಲಕ್ಷಣ ದಂಧೆಯೊಂದನ್ನು ಪ್ರಕಾಶ್ ಶೆಟ್ಟಿ ಪ್ರಾರಂಭಿಸಿದ.

ಅದ್ಯಾವತ್ತು ಮಾಜಿ ಮಂತ್ರಿ ಮತ್ತು ಮಾಜಿ ಕೆಪಿಸಿಸಿ ಅಧ್ಯಕ್ಷ ಅಲ್ಲಂ ವೀರಭದ್ರಪ್ಪನಿಗೆ 'ಗೋಲ್ಡ್‌ಫಿಂಚ್' ರುಚಿ ಹತ್ತಿತೋ! ಕೃಷ್ಣ ಸಂಪುಟದಲ್ಲಿ ತಮ್ಮ ಸಹೋದ್ಯೋಗಿಯಾಗಿದ್ದ ಪೌರಾಡಳಿತ ಖಾತೆ ಮಂತ್ರಿ ಮಲ್ಲಿಕಾರ್ಜುನ ನಾಗಪ್ಪನವರನ್ನೂ ಪ್ರಕಾಶ್ ಶೆಟ್ಟಿಗೆ ಪರಿಚಯಿಸಿಕೊಟ್ಟರು. ಧರ್ಮಸಿಂಗ್ ಸರ್ಕಾರದ ಪತನದ ತನಕ ಪ್ರತಿನಿತ್ಯ ಅಲ್ಲಂ ಮತ್ತು ನಾಗಪ್ಪ ಎಲೆ ತಟ್ಟದ್ದೇ ತಟ್ಟಿದ್ದು. ಯಾವತ್ತು ಕುಮಾರ ಸ್ವಾಮಿ ಮುಖ್ಯಮಂತ್ರಿಯಾದರೋ ಶುಕ್ರವಾರ, ಶನಿವಾರ ಮತ್ತು ಭಾನುವಾರಕ್ಕಷ್ಟೇ ಅಲ್ಲಂ ಮತ್ತು ನಾಗಪ್ಪ ಹಾಜರಾಗುತ್ತಿದ್ದರು.

ಬಂದ ಗಿರಾಕಿ ಅದೆಂಥಾ ಪ್ರಭಾವಿಯಾದರೂ ರಿಸೆಪ್ಷನ್‌ನಲ್ಲಿರುವ ಶೆಟ್ಟಿಯ ಬಂಟ ಜಾಫ್ರೀ ಕಾಸ್ಟಾನ ಕೈಯಲ್ಲಿ ಎರಡು ಲಕ್ಷ ತೆತ್ತ ನಂತರವೇ ಪ್ರವೇಶ. ಬೇಸ್‌ಮೆಂಟ್‌ನಲ್ಲೇ ರಿಸೆಪ್ಷನ್ ಮತ್ತು ಶೆಟ್ಟಿಯ ಖಾಸಾ ಛೇಂಬರ್ ಇದೆ. ಗೋಲ್ಡ್‌ಫಿಂಚ್‌ನ ಎರಡನೇ ಮಹಡಿಯಿಂದಾಚೆಗಷ್ಟೇ ಗಿರಾಕಿಗಳಿಗೆ ರೂಮ್ ಕೊಟ್ಟು ಇಡೀ ಮೊದಲ ಮಹಡಿಯನ್ನು ಜುಗಾರಿಗೆಂದು ಮೀಸಲಿಟ್ಟಿದ್ದಾನೆ. ಬೇರೆ ಯಾರಿಗೂ ಮೊದಲ ಮಹಡಿಗೆ ಪ್ರವೇಶವಿಲ್ಲ, ಕ್ಲೋಸ್ಡ್ ಸರ್ಕ್ಯೂಟ್ ಟೀವಿಯಲ್ಲಿ ಪ್ರತಿ ರೂಮಿನ ಆಗುಹೋಗುಗಳನ್ನು ಪ್ರಕಾಶ್ ಶೆಟ್ಟಿ ಗಮನಿಸುತ್ತಿರುತ್ತಾನೆ. ಏನೇ ಹೆಚ್ಚುಕಮ್ಮಿಯಾದರೂ ಯಮಕಿಂಕರರಂಥ ಬೌನ್ಸರ್‌ಗಳಿರುತ್ತಾರೆ. ಹೈಗ್ರೌಂಡ್ಸ್ ಪೋಲೀಸ್ ಠಾಣೆಗೆ ತಪ್ಪದೇ ಮಾಮೂಲಿ ಸಂದಾಯವಾಗುತ್ತದೆ. ಲೈಸೆನ್ಸಿಲ್ಲ, ಸರಬರಾಜಾಗುವ ಲಿಕ್ಕರ್‌ಗೆ ಪರ್ಮಿಟ್ಟಿಲ್ಲ, ಎಲ್ಲೋ ಲೈವ್ ಬ್ಯಾಂಡ್ ನಡೆಯಿತೆಂದು ಪೋಲೀಸ್ ಠಾಣೆಯ ಇನ್ಸ್‌ಪೆಕ್ಟರ್‌ನನ್ನೇ ಕಮೀಷನರ್ ಅಜಯ್‌ಕುಮಾರ್ ಸಿಂಗ್ ಸಸ್ಪೆಂಡ್ ಮಾಡುತ್ತಾರೆ. ವಿಧಾನಸೌಧಕ್ಕೆ ಫರ್ಲಾಂಗ್ ದೂರದಲ್ಲೇ ದೊಡ್ಡೋರು ಲಕ್ಷಗಟ್ಟಲೇ ಪಣಕ್ಕಿಟ್ಟು ಇಸ್ಪೀಟಾಡುವುದು ತಪ್ಪಲ್ಲ, ತಮ್ಮ ಶೋಕಿಗೆಂದು ಬ್ಯಾಂಡ್ ಹುಡುಗಿಯರ ಹಿಂಡನ್ನೇ ತಂದಿಟ್ಟುಕೊಂಡರೂ ತಪ್ಪಲ್ಲ! ಇದೆಂಥಾ ನ್ಯಾಯ?

ಬಹುಶಃ ಮಾಜಿ ಮಂತ್ರಿಗಳಿಬ್ಬರನ್ನು ಎಲ್ಲಿ ಠಾಣೆಗೆಳೆದೊಯ್ಯಬೇಕಾಗುತ್ತದೋ ಎಂಬ ಭೀತಿಯೇ? ಅಥವಾ ಅದು ಪ್ರಕಾಶ್ ಶೆಟ್ಟಿಯ ತಾಕತ್ತೆ?

ಕೊಳ್ಳೆಯ ದುಡ್ಡು ಕಳ್ಳರ ಪಾಲು

ಗೋಲ್ಡ್‌ಫಿಂಚ್‌ನ ವ್ಯಾಮೋಹಕ್ಕೆ ಒಮ್ಮೆ ಬಿದ್ದರೆಂದರೆ ಮುಗಿದೇ ಹೋಯಿತು. ಕ್ರಮೇಣ ಇಸ್ಪೀಟು ನಶೆಯಾಗುತ್ತದೆ. ಬ್ಯಾಂಡ್ ಲಲನೆಯರ ಖಯಾಲಿ ಉಲ್ಬಣಿಸುತ್ತದೆ. ಈ ಪೈಕಿ ಗಾಂಧಿನಗರದ ಫಿಲ್ಮ್ ಪ್ರೊಡ್ಯೂಸರ್ ಬಾಲಮುತ್ತಯ್ಯ ಒಬ್ಬನೇ ಐವತ್ತು ಲಕ್ಷ ಕಳಕೊಂಡರೆ, ಅದೇ ಗಾಂಧಿನಗರದ ಮತ್ತೊಬ್ಬ ನಿರ್ಮಾಪಕ ದಿಲಕ್ಸ್ ಗೋವಿಂದು ಎರಡು ಕೋಟಿ ಗೆದ್ದ!

ಅಲ್ಲಂ ವೀರಭದ್ರಪ್ಪ ಮೂವತ್ತು ಲಕ್ಷಕ್ಕೆ ಬರ್ಬಾದಾದರೆ, ಮಲ್ಲಿಕಾರ್ಜುನ ನಾಗಪ್ಪನವರಿಗೆ ಕೇವಲ ನಲವತ್ತೈದು ಲಕ್ಷ ಕೈಬಿಟ್ಟಿದೆ. ಮಾಜಿ ಮಂತ್ರಿಗಳಿಬ್ಬರದೂ ಹೊಡೆದ ಕೊಳ್ಳೆಯ ಖರ್ಚೆಂದೇ ಭಾವಿಸೋಣ. ಅದೇ ಸಾಲಿಗೆ ಸೇರುವ ಬಾತ್ರಾ ಕ್ಲಿನಿಕ್ ಧಣಿ ರಾಕೇಶ್ ಬಾತ್ರಾ ಇವತ್ತು ಐವತ್ತು ಲಕ್ಷದ ಸಾಲಗಾರ. ಮಂಗಳೂರಿನ ಆಶಿಸ್ ಎಂಬಾತ ಕೂಡ ನಲವತ್ತು ಲಕ್ಷ ಕಳೆದುಕೊಂಡ. ಇದೇ ಪಟ್ಟಿಗೆ ಸೇರುವ ಮತ್ತೊಬ್ಬನೆಂದರೆ ಆತ ಬಿಲ್ಡರ್ ರಾಜಗೋಪಾಲ ರೆಡ್ಡಿ, ಈತ ಹಿರಿಯ ಐಪಿಎಸ್ ಅಧಿಕಾರಿ ಕೆ.ಸಿ. ರಾಮಮೂರ್ತಿಯ ಸೋದರ ಸಂಬಂಧಿ. ಲ್ಯಾಂಡ್ ಡೀಲಿನಲ್ಲಿ ಗಳಿಸಿದ್ದೆಲ್ಲ ಗೋಲ್ಡ್‌ಫಿಂಚ್‌ನಲ್ಲಿ ಸೋರಿ ಹೋಗಿದೆ.

ಆದರೆ ಲಿಕ್ಕರ್ ದೊರೆ ಎ.ಜೆ. ಶೆಟ್ಟಿ ಮತ್ತು ಧಣಿ ಪ್ರಕಾಶ್ ಶೆಟ್ಟಿ ಮಾತ್ರ ಯಾವತ್ತೂ ದುಡ್ಡು ಕಳಕೊಂಡಿದ್ದೇ ಇಲ್ಲ, ಅದೇನು ಮಾಯೆಯೋ, ಕೈಚಳಕವೋ ಸೋಲೇನಿದ್ದರೂ ಗಿರಾಕಿಗಳಿಗೇ ಹೊರತು ನಡೆಸುವಾತ ಗೆಲ್ಲುತ್ತಲೇ ಇರುತ್ತಾನೆ. ರಾಜಾಜಿನಗರದ ಸೆಂಟ್ ಆನ್ಸ್ ಖದೀಮ ಬಾಲಕೃಷ್ಣ, ಲ್ಯಾಂಡ್ ಡೀಲರ್ ಕಂ ಫಿಲ್ಮ್ ಪ್ರೊಡ್ಯೂಸರ್ ಭೈರೇಗೌಡ, ಗಾರ್ಬೇಜ್ ಕಂಟ್ರಾಕ್ಟರ್ ಗೋಪಿನಾಥ ರೆಡ್ಡಿ, ಪಿಟ್ಸಾಯಾ ಧಣಿ ನಾಗರಾಜ್, ನೆಲಗಳ್ಳ ತೇಜರಾಜ್ ಗುಲೇಚ, ಕಳ್ಳ ಕಂಟ್ರಾಕ್ಟರ್ ಚಂದ್ರಪ್ಪ ಮತ್ತೊಬ್ಬ ಲ್ಯಾಂಡ್ ಗ್ರಾಬರ್-ಕಂಟ್ರಾಕ್ಟರ್ ಜೈರಾಮ್‌ರೆಡ್ಡಿ ಮುಂತಾದರೆಲ್ಲರೂ ಗೋಲ್ಡ್ ಫಿಂಚ್ ಅಡ್ಡೆಯಲ್ಲಿ ಮುಳುಗೆದ್ದವರೇ.




ಕಂಟ್ರಾಕ್ಟರ್ ಚಂದ್ರಪ್ಪ

ಕುಖ್ಯಾತಿಯನ್ನು ಮರೆಮಾಚಬೇಕಲ್ಲ; ಪ್ರಕಾಶ್ ಶೆಟ್ಟಿ ಜೆಡಿ(ಎಸ್) ಶಾಸಕಾಂಗ ಪಕ್ಷದ ಸಭೆಗೆ ತನ್ನ ಹೋಟೆಲಿನಲ್ಲೇ ಅವಕಾಶ ಕಲ್ಪಿಸಿದ. ಅಲ್ಲಂ ಮೂಲಕ ಲಿಂಗಾಯತ ಶಾಸಕರ ಸಭೆಯನ್ನೂ ತನ್ನ ಹೋಟೆಲಲ್ಲೇ ಏರ್ಪಡಿಸಿದ್ದ, ಇನ್ನು ಪೋಲೀಸರು ರೇಡು ಮಾಡುತ್ತಾರಾ?

ಬುದ್ಧಿವಂತರನ್ನು ನೋಡಿ ನಗುವುದು ದಡ್ಡರ ಹಕ್ಕು -ಜೆ.ಡಿ.ಟ್ರೋಯರ್


ಕಡ್ಡಿಯಾಡಿಸಿದ ಯಡ್ಡಿ

ಹೈಕೋರ್ಟ್ ಪೀಠಕ್ಕೆ ಹೆಟ್ಟಿದ ಗೂಟ!




"ಚೆಡ್ಡಿ ಯಡ್ಡಿ-ಕಡ್ಡಿ ಆಡಿಸಿಬಿಟ್ಟ; ಬಿಕನಾಸಿ ಜೆಟ್ ಮೂಲಕ ಪೀಠಕ್ಕೆ ಗೂಟ ಜಡಿದುಬಿಟ್ಟ"- ದು ನಿತ್ಯ ಅವಳಿನಗರಗಳ ಸಾಮಾನ್ಯ ಜನ ೇಳುತ್ತಿರುವ ಮಾತು. ಇದು ಬರೀ ಮಾತಲ್ಲ; ರೀ ಅವಳಿ ನಗರಗಳ ವಿಷಯವಲ್ಲ, ಇದು ುತ್ತರ ಕರ್ನಾಟಕದ ಜನರ ಆಕ್ರೋಶ, ಪ್ರತಿಭಟನೆ; ಮ್ಮಿ, ಯಡ್ಡಿಗಳ ಸರಕಾರದ ವಿರುದ್ಧದ ತಿಭಟನೆ.

ಈದ್ಗಾ, ನೈರುತ್ಯ ರೈಲ್ವೆ, ಹೈಕೋರ್ಟ್ ೀಠ- ಈ ವಿವಾದಗಳನ್ನು ರಾಜಕೀಯ ಾಭಕ್ಕೆ ಉಪಯೋಗಿಸಿಕೊಂಡ ಬಿಜೆಪಿಯ ಮಂಗಗಳೀಗ ಅಧಿಕಾರಕ್ಕೇರಿವೆ. ಉಪಮುಖ್ಯಮಂತ್ರಿಯಷ್ಟೇ ಅಲ್ಲದೇ ಹಣಕಾಸು ಖಾತೆಯನ್ನು ಗಿಟ್ಟಿಸಿಕೊಂಡಿರುವ ಯಡ್ಡಿ ಉತ್ತರ ಕರ್ನಾಟಕದ ಜನರ ಬೆನ್ನಿಗೆ ಚೂರಿ ಇಕ್ಕಿದ್ದಾರೆ. ಹಾಗೆಯೇ ಸಿ.ಎಂ. ಪಟ್ಟದಲ್ಲಿದ್ದೂ ೈಕೋರ್ಟ್ ಪೀಠದ ಬಗ್ಗೆ ಕಾಳಜಿ ವಹಿಸದ ುಮಾರಸ್ವಾಮಿ ಎಂಬ ಬಾಲಕನೂ ಈ ಾಗಕ್ಕೆ ದ್ರೋಹ ಬಗೆದಿದ್ದಾನೆ.



ಜಗದೀಶ್ ಶೆಟ್ಟರ್


ಆದೆಲ್ಲ ಇರ್‍ಲಿ, ಹುಬ್ಬಳ್ಳಿ-ಧಾರವಾಡದವರೇ ದ ಜಗದೀಶ್ ಶೆಟ್ಟರ್, ಬಸವರಾಜ ೊರಟ್ಟಿಗಳೆಂಬ ಸಚಿವರು ಈಗ ಎಲ್ಲಾ ತೂತುಗಳನ್ನು ಮುಚ್ಚಿಕೊಂಡು ದಂಡ-ಪಿಂಡರೆನಿಸಿಬಿಟ್ಟಿದ್ದಾರೆ. ಆಗ ನ್ಯಾಯಮೂರ್ತಿ ಎಸ್.ಕೆ. ಜೈನ್ ಸಾಹೇಬರ ತಕರಾರುಗಳೆಲ್ಲ ಪೀಠ ಸ್ಥಾಪನೆಗೆ ಅಡ್ಡಿಯಾಗಿದ್ದವು. ನಂತರ ನಿವೃತ್ತಿ ಸಮಯಕ್ಕೆ ಹುಬ್ಬಳ್ಳಿ, ಗುಲ್ಬರ್ಗಾಗಳಿಗೆ ಸಂಚಾರಿಪೀಠಗಳನ್ನು ದಯಪಾಲಿಸಿ ಹೋದರು ಜೈನ್ ಸಾಹೇಬರು. ಅಂತೂ ಧಾರವಾಡ, ಗುಲ್ಬರ್ಗಾಗಳಲ್ಲಿ ಸಂಚಾರಿ ಪೀಠಗಳ ಶಂಕುಸ್ಥಾಪನೆಯಾಯ್ತು, ಮುಂದೆ ಹಣ ಬರದೇ ಈ ಸಂಚಾರಿ ಪೀಠಗಳು ಶಂಖ ಹೊಡೆಯುತ್ತಾ ಕೂಡುವಂತಾಯ್ತು.



ಹೈಕೋರ್ಟ್ ಪೀಠ ಸ್ಥಾಪನೆಗಾಗಿ ಉಪವಾಸ ಸತ್ಯಾಗ್ರಹ ಕೈಗೊಂಡಿರುವ ಹಿರೇಮಠ್

ಬಜೆಟ್ಟಿನಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ದುಡ್ಡಿಲ್ಲ. ಬಜೆಟ್‌ನಲ್ಲೂ ಹಿಂದುತ್ವ ಬೆರೆಸುವ useless ಹಣಕಾಸು ಮಂತ್ರಿಯ ಖಾಲಿ ತಲೆಯಿಂದ ಇನ್ನೇನು ಹೊರಬಂದಿತು?

ತೀರ್ಥಯಾತ್ರೆ, ಗೋಮೂತ್ರಗಳೆಲ್ಲ ಬಜೆಟ್ಟಿನಲ್ಲಿ ಹೊಕ್ಕುವಂತಾಗಿ ನ್ಯಾಯಕ್ಕಾಗಿ ಹೈಕೋರ್ಟ್ ಪೀಠ ಕೇಳಿದ ಉತ್ತರ ಕರ್ನಾಟಕದ ಜನರ ನ್ಯಾಯಯುತ ಹೋರಾಟಕ್ಕೆ ಅನ್ಯಾಯ ಎಸಗಿದ್ದಾರೆ ಮಾರ್ವಾಡಿ ಬುದ್ಧಿಯ ಲಿಂಗಾಯತ ಚೆಡ್ಡಿ ಯಡಿಯೂರಪ್ಪ!



ಬಸವರಾಜ ಹೊರಟ್ಟಿ

ಈದ್ಗಾ ದರ್ಗಾ ಎಂದು ಬೊಗಳುತ್ತಲೇ ಕಾಲ ಹಾಕುತ್ತಿರುವ ಭಜರಂಗಿ ಪುಂಡರು ಈ ಹಿಂದೆ ಪೀಠಕ್ಕಾಗಿ ರಸ್ತಾರೋಖೋ ನೆಪದಲ್ಲಿ ಗಲಾಟೆ ಎಬ್ಬಿಸುತ್ತಿದ್ದವು. ಈಗ ವಕೀಲರು, ವಿದ್ಯಾರ್ಥಿಗಳ ಜೊತೆ ಸೇರಿ ಜನಸಾಮಾನ್ಯರೆಲ್ಲ ಪ್ರತಿಭಟಿಸುತ್ತಿದ್ದರೂ, ಭಂಡ ಬಿಜೆಪಿ ಭಜರಂಗಿಗಳೆಲ್ಲ ಕಮರಿಪೇಟೆಯಲ್ಲಿ ತೀರ್ಥಯಾತ್ರೆ ಮಾಡುತ್ತಾ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಜಾತ್ರೆ ಮಾಡುತ್ತಿವೆ.

ಕಳೆದ ಚುನಾವಣೆಯಲ್ಲಿ ಬಸವಣ್ಣನ ತತ್ವಗಳಿಗೆ ತದ್ವಿರುದ್ಧವಾಗಿರುವ ಚೆಡ್ಡಿಗಳನ್ನು ಬೆಂಬಲಿಸಿದ ಉತ್ತರ ಕರ್ನಾಟಕದ ಜನ ಅದರಲ್ಲೂ ಶ್ರೀಮಂತ ಹಾಗೂ ಮಧ್ಯಮವರ್ಗದ ಲಿಂಗಾಯತರು 'ಗೋಡ್ಯಾನ ಗೂಟ ಕಿತ್ತು...' ಎಂದು ಪರಿತಪಿಸುತ್ತಿದ್ದಾರೆ!

ಈ ಥಾಲ್ತು ಸರಕಾರದಲ್ಲಿ ಸಂಚಾರಿ ಪೀಠವೂ ಇಲ್ಲ, ಹೈಕೋರ್ಟ್ ಪೀಠವೂ ಇಲ್ಲ. ಏಕೆಂದರೆ ಸಿ.ಎಂ., ಡಿ.ಸಿ.ಎಂ.ಗಳ ಪ್ರೀತಿಯ ಕನಸಾದ ಬೆಂಗಳೂರು ಮೆಟ್ರೋ ರೈಲಿಗೇ ನಯಾಪೈಸೆ ಸಿಕ್ಕಿಲ್ಲ ಈ ಸಲದ ಬಂಡಲ್ ಬಜೆಟ್‌ನಲ್ಲಿ!

-ಮಲ್ಲಿ

ನಿಮ್ಮ ಕೈಲಿ ಏನೂ ಇಲ್ಲ ಅಂದ್ರೆ ನಮ್ಮ ಜೊತೆ ಬನ್ನಿ

ಧೂತ್ತೇರಿ

ರಾಜ್ಯಸಭಾ ಚುನಾವಣೆಯಲ್ಲಿ ಅನಂತಮೂರ್ತಿ ೋತುಹೋದ ಸುದ್ದಿ ಕೇಳಿದ ಗೌಡರ ಜವರನೂ, ರುಬರ ಲಕ್ಕನೂ, ಕೈಕೈ ಹಿಡಿದು ಕುಣಿಯಲೋಸ್ಕರ ಂಟ ಸಿಂಗ್ರಿಗೌಡರ ಮನೆಯವರೆಗೂ ಹೋದರಂತಲ್ಲಾ, ಕುಂಟ ಸಿಂಗ್ರಿಗೌಡ "ಹೆಚ್ಚೆಸ್ಸೆ ರಲಿ ಇರಿ. ಆತ ತುಂಬ ನ್ನಾಗಿ ಚಪ್ಪಾಳೆ ಹಾಕುತ್ತಾನೆ. ಪ್ಪಾಳೆ ಹಾಕಿಕೊಂಡು ಕುಣಿಯುವುದನ್ನೇ ನೋಡಲು ಚಂದ" ಂದು ಕೂರಿಸಿಕೊಂಡರಂತಲ್ಲಾ, ನಂತರ "ಅಂತೂ ಅನಂತ ಮೂರ್ತಿ ಸೋತನಲ್ಲ ಬಿಡಿ. ಾವು ಕೇಕೆ ಹಾಕಿ ಕುಣಿಯುದು ಮುಖ್ಯವಲ್ಲ, ಆತನನ್ನು ಸೋಲಿಸಿದೆವಲ್ಲ, ಅದೇ ಮುಖ್ಯ" ಎಂದು ಕುಳಿತಲ್ಲೇ ಮುಲುಕಿದರಂತಲ್ಲಾ ಧೂತ್ತೇರಿ!

* * * * * * * * * * * * *

ಅನಂತಮೂರ್ತಿ ಸೋಲಿನಿಂದ ಕುಣಿದಾಡುವಷ್ಟು ುಷಿಯಾಗಿರುವ ಚಂಪಾ, "ಮುಂದೆ ಬರುವ ಕನ್ನಡ ಾಹಿತ್ಯ ಪರಿಷತ್ ಚುನಾವಣೆಯಲ್ಲಿ ಪುನಹ ನಾನೇ ಿಲ್ಲುತ್ತೇನೆ. ನಮಗೆ ಕುಮಾರಸ್ವಾಮಿ, ಎಡೂರಪ್ಪನ ಬಲ ಇರುವವರೆಗೆ ಯಾವ ಸರ್ಪಗಳು ಏನೂ ಾಡಲಾರವು" ಎಂದು ರಾಜೀವ್ ಚಂದ್ರಶೇಖರನ ುನಲ್ಲಿ ಓಡಾಡಿದರಂತಲ್ಲಾ, ಆ ಕೂಡಲೇ ಪರಿಷತ್ ಸ ಬಿಟ್ಟು ಚುನಾವಣೆ ಪ್ರಚಾರಕ್ಕಿಳಿದರಂತಲ್ಲಾ, ಈ ುಷೆ, ಕರ್ನಾಟಕದ ಜನಸ್ತೋಮ ರಾಜ್ಯಸಭಾ ುನಾವಣೆ ನಿಮಿತ್ತವಾಗಿ ಸಾಹಿತಿಗಳು ಹಾವು, ಚೇಳು, ಯಿ, ನರಿ, ಕತ್ತೆ, ಹಂದಿ ಎಂದೆಲ್ಲಾ ಬೈದಾಡಿದ್ದನ್ನು ೋಡಿ "ಕೇವಲ ಒಂದು ಸೀಟಿನ ಚುನಾವಣೆಗೆ ಿಷ್ಟೊಂದು ಬೈದಾಡಿದ ಸಾಹಿತಿಗಳು, ಇನ್ನೇನಾದರೂ ುಮ್ಮಲ್ಲೇ ಚುನಾವಣೆಗಳಿಗೆ ನಿಂತರೆ ಇನ್ನೆಂತಹ ುಗಳಗಳ ನಿಘಂಟು ಬಿಚ್ಚಬಲ್ಲರು" ಎಂದು ದಂಗು ಾದು ಹೋದರಂತಲ್ಲಾ, ಧೂತ್ತೇರಿ!!

* * * * * * * * * * * * *

ರಾಜ್ಯಸಭಾ ಚುನಾವಣೆ ಪ್ರಯುಕ್ತ ಹಿಂದಿನ ದಿನವೇ ಿದ ಸೂಟ್ ಕೇಸ್‌ಗಳನ್ನು ಜೋಪಾನವಾಗಿ ಇರಿಸಿ, ಾದ ಬಟ್ಟೆ ಧರಿಸಿ, ವಿಧಾನಸೌಧಕ್ಕೆ ಓಟು ಮಾಡಲು ಶಾಸಕರು ಬಂದರಂತಲ್ಲಾ, ಆಗ ಅವರ ಎದುರು ಪರಿಹಾರ ಕೇಳಲು ಅರ್ಜಿ ಹಿಡಿದು ಬಂದ ಅಮಾಯಕರ ಗತ್ತಿನಲ್ಲಿ ಸರ್ವೋದಯ ನಾಯಕ ದೇವನೂರು ಪಡೆ ನಿಂತು "ಸಾರ್, ಅನಂತಮೂರ್ತಿ ಮರಿಬೇಡಿ", "ಸಾರ್ ಅನಂತಮೂರ್ತಿ ಮರಿಬೇಡಿ" ಎನ್ನುತ್ತಿದ್ದರಂತಲ್ಲಾ, ದೇವನೂರರ ಅಂಗ ಲಾಚುವಿಕೆಗೆ ಮರುಗಿದ ಎಂ.ಪಿ.ಪ್ರಕಾಶ್ ಮನಕರಗಿದಂತಹ ಮುಖ ಮಾಡಿ "ನಾನು ಅಸಹಾಯಕ ಮಾದೇವ, ನನ್ನ ಕೈಲಿ ಏನೂ ಇಲ್ಲ" ಎಂದರಂತಲ್ಲಾ, ಪ್ರಕಾಶರ ಈ ಮಾತಿನಿಂದ ತುಂಬ ಖುಷಿಯಾದ ದೇವನೂರು "ಪ್ರಕಾಶ್, ನಿಮ್ಮ ಕೈಲಿ ಏನೂ ಇಲ್ಲ ಅಂದ್ರೆ, ಅದು ಬಹಳ ಒಳ್ಳೆ ಸ್ಥಿತಿ. ಕ್ರಿಯೇಟಿವ್ ಆಗಿ ಆಲೋಚನೆ ಮಾಡಕ್ಕಂತೂ ಒಳ್ಳೆ ಸಮಯ. ನೀವು ಕೂಡಲೇ ನಮ್ಮ ಪಾರ್ಟಿಗೆ ಬನ್ನಿ" ಎಂದರಂತಲ್ಲಾ, ಆಗ ಪ್ರಕಾಶ್ ದೇವನೂರು ಜೊತೆ ಮಾತನಾಡುತ್ತಿರುವುದು ದೇವೇಗೌಡರಿಗೆ ಗೊತ್ತಾದರೆ ಗತಿಯೇನೆಂಬ ಆತಂಕದ ಮುಖದಲ್ಲಿ "ಆಮೇಲೆ ಮಾತಾಡಾನ. ನಾನೆ ನಿಮ್ಮ ಮನೆಗೆ ಬರ್ತೀನಿ. ನೀವು ಬರೋದೇನು ಬೇಡ" ಎಂದು ಜಾಗ ಖಾಲಿ ಮಾಡಿದರಂತಲ್ಲಾ, ಧೂತ್ತೇರಿ!!

* * * * * * * * * * * * *

ಪ್ರಕಾಶ್ ಪರಾರಿಯಾದುದನ್ನು ವಿಚಿತ್ರ ಒಳಮನಸ್ಸಿನಿಂದ ಆಲೋಚಿಸುತ್ತ ನಿಂತಿದ್ದ ದೇವನೂರು "ಈಗ ನಾನು ಮಾತನಾಡಿಸಿದ್ದು ಎಂ.ಪಿ. ಪ್ರಕಾಶರನ್ನೋ ಅಥವಾ ಬೇರೆ ಯಾರನ್ನೋ" ಎಂದು ಅನುಮಾನದ ಪ್ರಶ್ನೆ ಎಸೆದರಂತಲ್ಲಾ, ಅದಕ್ಕೆ ದೇವನೂರು ಪಕ್ಕದಲ್ಲೇ ಇದ್ದ ಕುಮಾರಣ್ಣನ ಅಭಿಮಾನಿಗಳು "ಯಾಕೆ ಸಾರ್ ಇಂತ ಪ್ರಶ್ನೆ ಕೇಳ್ತಿರಿ? ಅವರು ಹಂಡ್ರೆಡ್ ಪರಸೆಂಟ್ ಎಂ.ಪಿ.ಪ್ರಕಾಶ್" ಎಂದರಂತಲ್ಲಾ, "ಪ್ರಕಾಶ್ ಮೀಸೆ ಬಿಟ್ಟಿಲ್ಲ ಅಲ್ಲವಾ? ಆದರೆ ನನ್ನ ಜೊತೆ ಮಾತನಾಡಿದ ವ್ಯಕ್ತಿ ಮೀಸೆ ಬಿಟ್ಟಿದ್ದಾರೆ?" ಎಂದು ದೇವನೂರು ಬೀಡಿ ಹಚ್ಚಿದರಂತಲ್ಲಾ, "ಅಯ್ಯೋ, ಪ್ರಕಾಶ್ ಮೀಸೆ ಬಿಡೋದರ ಹಿಂದೆ ಒಂದು ದೊಡ್ಡ ಕತೆನೆ ಇದೆ ಸಾರ್. ಬುದ್ಧಿಜೀವಿಗಳು ಪ್ರಕಾಶ್ ತುಂಬಾ ದುರ್ಬಲ ವ್ಯಕ್ತಿ ಅಂದ್ರು. ಹಿತೈಶಿಗಳು ಅಸಹಾಯಕ ಮನುಷ್ಯ ಅಂದ್ರು. ಇನ್ನು ಕೆಲವರು ಈ ಪ್ರಕಾಶ್ ಕಳದೋದ್ರು ಅಂದ್ರು.



ಎಲ್ಲರಿಗೂ ಇಂತಹ ಉತ್ತರ ಕೊಡಬೇಕಿತ್ತು, ಅದಕ್ಕೆ ಮೀಸೆ ಬಿಟ್ಟು ಉತ್ತರ ಕೊಡತಾ ಅವ್ರೆ" ಎಂದು ಕುಮಾರಣ್ಣನ ಅಭಿಮಾನಿಗಳು ಸುಳ್ಳು ಕಾರಣಗಳನ್ನು ಕೊಡುತ್ತಿರುವಾಗ ದೇವನೂರು ಇನ್ನೊಂದು ಬೀಡಿ ಹಚ್ಚಲು ತಯಾರಾದರಂತಲ್ಲಾ, ಆಗ ವಿಧಾನಸೌಧದ ಸಿಬ್ಬಂದಿ "ಸಾರ್ ಬೀಡಿ ಸೇದಂಗಿಲ್ಲ ಇಲ್ಲಿ" ಎಂದರಂತಲ್ಲಾ, ಧೂತ್ತೇರಿ!!

* * * * * * * * * * * * *

ತಮ್ಮ ಕುಮಾರ ಕಂಠೀರವ "ಯಾರ್‍ರೀ ಈ ಅನಂತಮೂರ್ತಿ" ಅಂದರೂ ಅದನ್ನು ಅವಮಾನವೆಂದು ಭಾವಿಸದೆ ಅನಂತಮೂರ್ತಿ ದೇವೇಗೌಡರ ಮನೆಗೆ ಹೋದರಂತಲ್ಲಾ, ಇಡೀ ಜೀವಮಾನದಲ್ಲಿ ಒಂಟಿ ಬ್ರಾಹ್ಮಣನನ್ನು ಎದುರುಗೊಳ್ಳದ ದೇವೇಗೌಡರು "ಅನಂತಮೂರ್ತಿ ಬಂದಿದ್ದಾರೆ" ಎಂದು ಸಹಾಯಕರು ಹೇಳಿದರೂ ಅವರನ್ನು ಬಂದು ನೋಡದೆ ಮಹಡಿ ಮೇಲೆ ಕುಳಿತು ತೂಕಡಿಸುತ್ತಿದ್ದರಂತಲ್ಲಾ, ಆಗ ಅಲ್ಲಿಗೆ ಬಂದ ದತ್ತ "ಸಾರ್ ನಾನೂ ಅನಂತಮೂರ್ತಿ ಜೊತೆ ಇರ್ತೀನಿ, ಕೆಳಗೆ ಬನ್ನಿ" ಎಂದು ಹೇಳಿ ಹೋದರೂ ದೇವೇಗೌಡರು ಅನಂತಮೂರ್ತಿಯವರನ್ನು ಎದುರುಗೊಳ್ಳುವಷ್ಟರಲ್ಲಿ ಒಂದೂವರೆ ಗಂಟೆಯಾಗಿತ್ತಂತಲ್ಲಾ, ಇದೆಲ್ಲವನ್ನು ನಂತರ ಯೋಚಿಸಿದ ಗೌಡರು, ಕುಮಾರಸ್ವಾಮಿಗೆ ಫೋನ್ ಮಾಡಿ "ಕುಮಾರ, ಅನಂತ ಮೂರ್ತಿಯ ಬಗ್ಗೆ ನೀನು ಹಗುರವಾಗಿ ಮಾತನಾಡಿರುವ ವಿಷಯ ಜೀವಂತವಾಗಿರಲು ಬಿಡಬೇಡ. ಯಾವುದಾದರೂ ಬೃಹತ್ ಸಾರ್ವಜನಿಕ ಸಭೆಯಲ್ಲಿ ಕ್ಷಮೆ ಕೇಳಿ ದೊಡ್ಡ ಮನುಷ್ಯ ಅನ್ನಿಸಿಕೋ" ಎಂದರಂತಲ್ಲಾ, ಅಪ್ಪನ ಆಲದ ಮರದ ಮೇಲೆ ಆಟವಾಡುತ್ತಿರುವ ಕುಮಾರಣ್ಣ ರಾಮನಗರದ ಸಿನಿಮಾ ಪುಸ್ತಕ ಸಮಾರಂಭದಲ್ಲಿ ಅಪ್ರಸ್ತುತವಾದರೂ ಅನಂತಮೂರ್ತಿ ವಿಷಯ ತೆಗೆದು ಕ್ಷಮೆ ಕೋರಿದರಂತಲ್ಲಾ, ಇದರಿಂದ ಪುಳಕಿತರಾದ ರಾಮನಗರದ ಜನಸ್ತೋಮ "ಕುಮಾರಣ್ಣ ಆ ಮುದಿಯ ದೇವೇಗೌಡನಿಗಿಂತಲೂ ದೊಡ್ಡ ಮನುಷ್ಯ" ಎಂದು ಕೊಂಡಾಡಿದರಂತಲ್ಲ, ಧೂತ್ತೇರಿ!!!

-ಯಮಾಪೂ

ದೇವು–ಬಾಲು ಮತ್ತೆ ಜೋಡಿ!

'ಇವನ್ನೇ ರಾಜಕೀಯ ವಿಪರ್ಯಾಸ ಅನ್ನೋದು!

'ಆ ಸ್ವಾಮಿ ಕಮ್ಮೂ ಮುಟ್ಟ ಏನ್ರೀ ರಾಜಕೀಯ ಮಾತೋದು? ತಾಕತ್ತಿದ್ರೆ ಖಾವಿ ಕಳಚಿಟ್ಟು ನನ್ನ ವಿರುದ್ಧ ಚುನಾವಣೆಗೆ ನಿಂತು ನನ್ನನ್ನು ಸೋಲಿಸಲಿ. ಇದು ನನ್ನ ಓಪನ್ ಚಾಲೆಂಜ್....!' ಹಾಗೆಂದು ಯಾವ ದೇವೇಗೌಡ ಗುಡುಗಿದ್ದರೋ ಈಗ ಅದೇ ಆದಿಚುಂಚನಗಿರಿ ಸ್ವಾಮಿಯನ್ನು ಕರೆದು ಪಾದಪೂಜೆ ಮಾಡಿದ್ದಾರೆ. ಮಾರ್ಚ್ ಇಪ್ಪತ್ತರಂದು ಪದ್ಮನಾಭನಗರದ ತಮ್ಮ ಮನೆಯಲ್ಲಿ ದೇವೇಗೌಡರು ಬಾಲಗಂಗಾಧರರ ಪಾದ ಮುಟ್ಟಿ ನಮಸ್ಕರಿಸುತ್ತಿರುವ ಫೋಟೋಗಳು ಪತ್ರಿಕೆಗಳಲ್ಲಿ ಅಚ್ಚಾಗಿವೆ.

ಎಂಥಾ ವಿಪರ್ಯಾಸವಲ್ಲವೆ? ಹಾವು-ಮುಂಗುಸಿಯಂತಿದ್ದ ಧೃತ್ಯರಿಬ್ಬರು ಮತ್ತೆ ಒಂದಾಗಿದ್ದಾರೆಂದರೆ ಏನರ್ಥ?

ಇಲ್ಲಿಗೆ ಸರಿಸುಮಾರು ಎರಡು ವರ್ಷದ ಹಿಂದೆ, ಅಂದರೆ 2003ರ ಮೇ ನಾಲ್ಕರಂದು ಕೆಂಗೇರಿಯ ಗುರುಜ್ಞಾನಾಶ್ರಮದ ವೇದಿಕೆಯಲ್ಲಿ ಕುಮಾರ ಚಂದ್ರಶೇಖರನಾಥ ಸ್ವಾಮಿಯ ಪಕ್ಕದಲ್ಲೇ ಕೂತು ಬಾಲಗಂಗಾಧರನಾಥರ ವಿರುದ್ಧ ಕಿಡಿಕಾರಿದ್ದ ದೇವೇಗೌಡರಿಗೆ ಏಕಾಏಕಿ ಆದಿಚುಂಚನಗಿರಿಯ ಮೇಲೆ ಭಕ್ತಿ ಬಂದದ್ದೇಕೆ? ವಿಶ್ವ ಒಕ್ಕಲಿಗರ ಪೀಠಾಧಿಪತಿ ಕುಮಾರ ಚಂದ್ರಶೇಖರನಾಥರು ಇಷ್ಟು ಬೇಗ ಬೇಡವಾಗಿಬಿಟ್ಟರೆ?

ಡಾ. ಸೋಮನಾಥ್

ಬಹುಶಃ ಕೆಂಗೇರಿ ಸ್ವಾಮಿ ಕುಮಾರ ಚಂದ್ರಶೇಖರನಾಥರು ನೆಟ್ಟಗಿದ್ದರೆ ದೇವೇಗೌಡರಿಗೆ ಈ ಗತಿ ಬರುತ್ತಿರಲಿಲ್ಲವೇನೋ. ಏನೆಲ್ಲಾ ಪಂಪ್ ಹೊಡೆದರೂ ಕೆಂಗೇರಿಯ ಸ್ವಾಮಿ ಉದ್ಧಾರವಾಗಲಿಲ್ಲ. ಗುರುಜ್ಞಾನ ಕೇಂದ್ರದಲ್ಲಿ ಅವತ್ತು ಕಮ್ಮಿಯೆಂದರೂ ಐವತ್ತು ಸಾವಿರ ಮಂದಿ ದೇವೇಗೌಡರ ಬೆಂಬಲಿಗರಿದ್ದರು. ರೇವಣ್ಣ, ಕುಮಾರಣ್ಣ, ಎಮ್ಮೆಲ್ಸಿ ಪುಟ್ಟಣ್ಣ ಇತ್ಯಾದಿಯಾಗಿ ಸಮಸ್ತ ಮಣ್ಣಿನ ಮಕ್ಕಳ ಸೈನ್ಯವೇ ಕೆಂಗೇರಿ ಸ್ವಾಮಿಯ ಬೆನ್ನಿಗಿತ್ತು. ಒಂದಾನೊಂದು ಕಾಲಕ್ಕೆ ಆದಿಚುಂಚನಗಿರಿ ಆಪ್ತ ವಲಯದಲ್ಲಿದ್ದ ಬಿಲ್ಡರುಗಳಾದ ಎ.ಜಿ. ಸಿದ್ಧಪ್ಪ ಮತ್ತು ಅಡಕಮಾರನಹಳ್ಳಿ ಕೃಷ್ಣಪ್ಪ ಕೆಂಗೇರಿ ಸ್ವಾಮಿಯನ್ನು ಮೇಲಕ್ಕೆತ್ತಲು ಏನು ತಾನೇ ಮಾಡಿಲ್ಲ?



ಆರ್. ಅಶೋಕ್

ಶಾಲೆ ಕಟ್ಟಿಸಿಕೊಟ್ಟರು. ಕಾರು ಕೊಡಿಸಿದರು. ಕಂಡಕಂಡಲ್ಲಿ ಕರೆದೊಯ್ದು ಪಾದಪೂಜೆಗೈದರು. ಎಲ್ಲೆಲ್ಲಿ ದೇವೇಗೌಡರ ಕಡೆಯವರ ಸಭೆ ಸಮಾರಂಭಗಳಾದವೋ ಅಲ್ಲಿಗೆಲ್ಲ ಕುಮಾರ ಚಂದ್ರಶೇಖರರದೇ ದಿವ್ಯ ಸಾನಿಧ್ಯವಿರುತ್ತಿತ್ತು. ಪತ್ರಿಕೆಗಳಲ್ಲಿ ಸ್ವಾಮಿಯದೇ ಫೋಟೋ ಹಾಕಿಸಿ ಜಾಹೀರಾತುಗಳಿರುತ್ತಿದ್ದವು. ಆದರೆ ಕುಮಾರ ಚಂದ್ರಶೇಖರನಾಥ ಅಲ್ಪತೃಪ್ತ ಮತ್ತು ಪುಕ್ಕಲ. ಬಾಲಗಂಗಾಧರರಂತೆ ಮಹತ್ವಾಕಾಂಕ್ಷಿಯಲ್ಲ. ಎಲ್ಲಿ ಇಡೀ ಮಠವನ್ನು ಕುಮಾರಣ್ಣ ಕೈವಶ ಮಾಡಿಕೊಳ್ಳುತ್ತಾರೋ ಎಂಬ ಅಳುಕು. ಆದಿಚುಂಚನಗಿರಿ ವಿರುದ್ಧ ತೊಡೆ ತಟ್ಟದವರಿಗಿದ್ದ ಆವೇಗಕ್ಕೆ ಕೆಂಗೇರಿ ಸ್ವಾಮಿ ಸ್ಪಂದಿಸಲೇ ಇಲ್ಲ. ನೋಡುವ ತನಕ ನೋಡಿದ ದೇವೇಗೌಡರು ಕ್ರಮೇಣ ಕೆಂಗೇರಿ ಸ್ವಾಮಿಯನ್ನೇ ಮರೆತುಬಿಟ್ಟರು.



ಬಾಲಗಂಗಾಧರ ಸ್ವಾಮಿಯವರಿಂದ ಆಶೀರ್ವಾದ ಪಡೆಯುತ್ತಿರುವ ದೇವೇಗೌಡ ದಂಪತಿಗಳು

ಅಷ್ಟರಲ್ಲೇ ಚುನಾವಣೆ ನಡೆದು ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂತಲ್ಲ; ಯಾವತ್ತು ಉಪಮುಖ್ಯಮಂತ್ರಿ ಸಿದ್ಧರಾಮಯ್ಯ ಗೌಡರ ಪಾಲಿಗೆ ಕಿರಿಕಿರಿ ತಂದಿಟ್ಟರೋ ಆಗ ದೇವೇಗೌಡರಿಗೆ ನೆನಪಾದದ್ದು once again ಅದೇ ಬಾಲಗಂಗಾಧರನಾಥ ಸ್ವಾಮಿ!

ಈ ನಡುವೆ ಕೃಷ್ಣರ ಆಳ್ವಿಕೆಯಲ್ಲಿ ಯಾರ್‍ಯಾರು ಕೆಂಗೇರಿ ಸ್ವಾಮಿಯನ್ನು ಬೆಂಬಲಿಸುತ್ತಾರೋ ಅಂಥ ಅಧಿಕಾರಿಗಳನ್ನೆಲ್ಲ ಬಾಲಗಂಗಾಧರರೇ ನಿಂತು ಎತ್ತಂಗಡಿ ಮಾಡಿಸಿದ್ದರು. 'ನಾನು ಭಯಂಕರ ಬಂಡೆಯಿದ್ದಂತೆ. ಅದಕ್ಕೆ ಯಾರು ಬೇಕಾದರೂ ತಲೆ ಚಚ್ಚಿಕೊಳ್ಳಬಹುದು!' ಎಂದೇ ಬಹಿರಂಗ ವೇದಿಕೆಯಲ್ಲಿ ದೇವೇಗೌಡರಿಗೆ ಚುಚ್ಚಿದ ಬಾಲ ಗಂಗಾಧರ ಸ್ವಾಮಿ, ಕೆಂಗೇರಿ ಸ್ವಾಮಿಗೆ ಫಂಡು ಹೊಂದಿಸುತ್ತಿದ್ದಾರೆಂದು ಮೈಸೂರಿನ ಮೂಡಾ ಕಮೀಷನರ್ ಮತ್ತು ಸಂದೇಶ್ ನಾಗರಾಜ್ ಅಳಿಯ ಜೈರಾಮ್, ಬೆಂಗಳೂರು ಗ್ರಾಮಾಂತರದ ಸ್ಪೆಷಲ್ ಡಿ.ಸಿ. ಮತ್ತು ಮಾಗಡಿ ಶಾಸಕ ಬಾಲಕೃಷ್ಣರ ಅಕ್ಕನ ಗಂಡ ಎಸ್.ಎನ್. ನಾಗರಾಜ್‌ರನ್ನು ಕಂದಾಯ ಮಂತ್ರಿ ಶ್ರೀಕಂಠಯ್ಯನವರ ಮೂಲಕ ಇನ್ನಿಲ್ಲದಂತೆ ಹಣಿದಿದ್ದರು.



ಚಂದ್ರಶೇಖರನಾಥ ಸ್ವಾಮಿ

ಯಾವತ್ತು ಸಮ್ಮಿಶ್ರ ಸರ್ಕಾರ ಬಂತೋ ಬಾಲಗಂಗಾಧರರೂ ಮೆತ್ತಗಾದರು. ಕಾರಣವಿಷ್ಟೇ: ಅವರ ಎದುರಾಳಿ ಕೆಂಗೇರಿಸ್ವಾಮಿ ಯುದ್ಧಕ್ಕಿಳಿಯಲೇ ಇಲ್ಲ ಮತ್ತು ಗೌಡರ ಮಕ್ಕಳೂ ಅತ್ತ ತಲೆ ಹಾಕುತ್ತಿರಲಿಲ್ಲ. ಅದೇ ಹೊತ್ತಿಗೆ ಗೌಡರ ವಿರುದ್ಧ ಸಿದ್ಧರಾಮಯ್ಯ ಸೊಲ್ಲೆತ್ತಲಾರಂಭಿಸಿದ್ದೇ ತಡ; ಇಲ್ಲಿಗೆ ಆರು ತಿಂಗಳ ಹಿಂದೆ ಮಹತ್ವದ ಬೆಳವಣಿಗೆಯೊಂದು ಸದ್ದಿಲ್ಲದೇ ಸಂಭವಿಸಿತ್ತು. ಅದು ಬಾಲಗಂಗಾಧರ ಸ್ವಾಮಿ ಮತ್ತು ಕುಮಾರಸ್ವಾಮಿ ಮಧ್ಯೆ ಏರ್ಪಟ್ಟ ಮೊದಲ ರಾಜಿ ಪಂಚಾಯ್ತಿ. ಅವತ್ತು ಪಾಂಡವಪುರದ ಶಾಸಕ ಸಿ.ಎಸ್. ಪುಟ್ಟರಾಜು ಮತ್ತು ಎಮ್ಮೆಲ್ಸಿ ಪುಟ್ಟಣ್ಣನವರು ವಿಜಯನಗರದ ಆದಿಚುಂಚನಗಿರಿ ಮಠದಲ್ಲಿ ಬಾಲಗಂಗಾಧರರೊಡನೆ ಅರ್ಧ ಗಂಟೆ ಮಾತಾಡಿ ಕುಮಾರಣ್ಣನನ್ನು ಕರೆಸಿಕೊಂಡರು. ಕುಮಾರಸ್ವಾಮಿ ಸ್ವಾಮಿಯ ಕಾಲಿಗೆ ಬಿದ್ದು ಆಶೀರ್ವಾದ ಯಾಚಿಸಿದ.

ಅದು ರಾಜಿಯ ಮೊದಲ ಸುತ್ತು. ನಿಗೂಢವೆಂದರೆ ಹಾಗೇ ದೇವು ಮತ್ತು ಬಾಲು ಮಧ್ಯೆ ಸಂಬಂಧ ಕುದುರಲು ಮುಖ್ಯ ಕಾರಣಕರ್ತರ್‍ಯಾರು ಗೊತ್ತೆ?

ಉತ್ತರಹಳ್ಳಿಯ ಬಿಜೆಪಿ ಶಾಸಕ ಆರ್. ಅಶೋಕ್ ಮತ್ತು ಬಿಜೆಪಿ ನಾಯಕ ಬಸನಗೌಡ ಪಾಟೀಲ್ ಯತ್ನಾಳ್! ಬೇರೆ ಯಾರಿಗಲ್ಲದಿದ್ದರೂ ಬಿಜೆಪಿಗೆ ಅದು ಬೇಕಾಗಿತ್ತು. ಯಾವತ್ತು ಕಾಂಗ್ರೆಸ್ ಒಳಗೊಳಗೇ ಸಿದ್ಧರಾಮಯ್ಯನವರನ್ನು ಎತ್ತಿ ಕಟ್ಟಲಾರಂಭಿಸಿತೋ ಅದಕ್ಕೆ ಪ್ರತಿಯಾಗಿ ದೇವೇಗೌಡ ಆದಿಚುಂಚನಗಿರಿಗೆ ಹತ್ತಿರವಾಗುತ್ತಾ ಬಂದರು. ಎಂ.ಪಿ. ಪ್ರಕಾಶ್ ಉಪಮುಖ್ಯಮಂತ್ರಿಯಾದ ಮೇಲಂತೂ ಅದು ಮತ್ತಷ್ಟು ಗಾಢವಾಯಿತು. ಹಾಸನದ ಸಭೆಯೊಂದರಲ್ಲಿ ದೇವು-ಬಾಲು ಒಟ್ಟೊಟ್ಟಿಗೇ ಒಂದೇ ವೇದಿಕೆಯಲ್ಲಿ ಪ್ರತ್ಯಕ್ಷರಾದರು.



ಯತ್ನಾಳ್

ಈಗ ನಡೆದಿರುವುದು ಈ ಎಲ್ಲಾ ಕಸರತ್ತುಗಳ ಕ್ಲೈಮ್ಯಾಕ್ಸ್. ಅಂತಿಮವಾಗಿ ದೇವೇಗೌಡರು ಬಾಲಗಂಗಾಧರನಾಥರನ್ನು ತಮ್ಮ ಪದ್ಮನಾಭನಗರದ ಮನೆಗೆ ಬರಮಾಡಿಕೊಂಡು ಕಾಲಿಗೆ ಬಿದ್ದಿದ್ದಾರೆ. ಜಾಣ ಸನ್ಯಾಸಿ ಬಾಲಗಂಗಾಧರರು ಗೌಡರ ತಲೆ ಮುಟ್ಟಿ ಆಶೀರ್ವದಿಸಿದ್ದಾರೆ. ಇಲ್ಲಿ ಸದ್ದಿಲ್ಲದೇ ಕಾರ್ಯ ಸಾಧಿಸಿದ್ದು ಮಾತ್ರ ಬಿಜೆಪಿ. ಒಳಗೊಳಗೇ ಯಡ್ಡಿಯ ಜೊತೆ ದೇವೇಗೌಡರು ದೋಸ್ತಿಯ ಮಾತಿಗಿಳಿಯುತ್ತಿದ್ದಂತೆ ಬಿಜೆಪಿ ಬಲೆ ಹೆಣೆಯತೊಡಗಿತು. ಯಡ್ಡಿ ಅದಕ್ಕೆಂದು ಉತ್ತರಹಳ್ಳಿ ಶಾಸಕ ಆರ್. ಅಶೋಕ್ ಮತ್ತು ಬಸನಗೌಡ ಯತ್ನಾಳರನ್ನು ಆಯ್ದುಕೊಂಡರು. ಅಶೋಕ್‌ಗೆ ಮೊದಲಿನಿಂದಲೂ ಬಾಲಗಂಗಾಧರನಾಥ ಸ್ವಾಮಿ ಆಪ್ತರು. ಆರೆಸ್ಸೆಸ್ ವಲಯದ ಪರವಾಗಿ ಆ ಕಾಲದಿಂದಲೂ ಆದಿಚುಂಚನಗಿರಿಗೆ ಆಪ್ತರಾಗಿದ್ದು ಯತ್ನಾಳ್.

ಅಶೋಕ್ ಮತ್ತು ಯತ್ನಾಳ್ ಸೇರಿಕೊಂಡೇ ಎಮ್ಮೆಲ್ಸಿ ಪುಟ್ಟಣ್ಣ ಮತ್ತು ಪಾಂಡವಪುರದ ಶಾಸಕ ಪುಟ್ಟರಾಜುರನ್ನು ಬಾಲಗಂಗಾಧರರ ಬಳಿ ಕಳಿಸಿಕೊಟ್ಟಿದ್ದಾರೆ. ಆನಂತರ ದೇವೇಗೌಡರಿಗೂ ಸ್ವಾಮಿಗೂ ರಾಜಿ ಮಾಡಿಸಿದ್ದಾರೆ. ಈ ಮೂಲಕ ಸಧ್ಯದ ಕೋ-ಜಾ ಸರ್ಕಾರಕ್ಕೆ ಬಾಲಗಂಗಾಧರನಾಥರೇ ಅಧಿಕೃತ ರಾಜಗುರುವಾಗಿ ಹೊಮ್ಮಿದ್ದಾರೆ. ಇದು ಸಧ್ಯದ ತೇಪೆ ಮಾತ್ರ. ದೇವೇಗೌಡರ ಬುದ್ಧಿ ಸ್ವಾಮಿಗೆ ಚೆನ್ನಾಗಿ ಗೊತ್ತು. ಕಷ್ಟ ಬಂದಾಗ ಕಾಲು ಹಿಡಿಯುವುದು ಅವಕಾಶ ಸಿಕ್ಕಾಗ ಝಾಡಿಸಿ ಒದೆಯುವುದು ಗೌಡರ ಹುಟ್ಟುಗುಣ. ಈ ರೀತಿ ಮತ್ತೆ ಮತ್ತೆ ದೇವೇಗೌಡರು ಕಾಲಿಗೆ ಬಿದ್ದಿದ್ದು ಇಬ್ಬರಿಗೆ ಮಾತ್ರ. ಮೊದಲನೆಯವರು ರಾಮಕೃಷ್ಣ ಹೆಗಡೆಯಾದರೆ ಎರಡನೆಯವರು ಬಾಲಗಂಗಾಧರಸ್ವಾಮಿ. ಹೆಗಡೆಗಾದ ಗತಿ ಮುಂದೊಮ್ಮೆ ಬಾಲಗಂಗಾಧರರಿಗೂ ಬಾರದು ಎನ್ನಲು ಯಾವ ಗ್ಯಾರಂಟಿ? ■

ದೇವರ ದುಡ್ಡು ಸ್ವಾಮಿಯ ಪಾಲು?

ಖಾದಿ ಡ್ರೆಸ್ಸು-ಖಾವಿ ವಸ್ತ್ರ ಇವೆರಡರಲ್ಲಿ ಯಾರಿಗೆ ಯಾವುದನ್ನು ತೊಡಿಸಿದರೂ ಆದಿಚುಂಚನಗಿರಿ ಸ್ವಾಮಿ ಮತ್ತು ದೇವೇಗೌಡ ಪರಸ್ಪರ ಒಂದೇ ರೀತಿ ಕಾಣಿಸುತ್ತಾರೆ. ಖಾವಿ ತೊಟ್ಟರೆ ದೇವೇಗೌಡ ಥೇಟು ಬಾಲಗಂಗಾಧರನಾಥ ಸ್ವಾಮಿ. ಖಾದಿ ಉಟ್ಟರೆ ಬಾಲಗಂಗಾಧರರು ದೇವೇಗೌಡರ ತದ್ರೂಪಿ. ದೇವೇಗೌಡರಿಗೆ ಖಾವಿ ತೊಡದೆಯೇ ಜಗದ್ಗುರುವಾಗುವ ಬಯಕೆಯಾದರೆ, ಬಾಲಗಂಗಾಧರರಿಗೆ ಖಾದಿ ಉಡದೇ ರಾಜಕೀಯ ಮಾಡುವ ದುರಾಶೆ.

ಪ್ರಧಾನಿ ಪಟ್ಟದಿಂದ ಇಳಿಯುತ್ತಿದ್ದಂತೆ ಗೌಡರಿಗೂ ಸ್ವಾಮಿಗೂ ಏಕೆ ಕಿತ್ತಾಟ ಬಂತೆಂಬುದೇ ಇವತ್ತಿಗೂ ನಿಗೂಢ. ಕೆಲವರ ಪ್ರಕಾರ ಪ್ರಧಾನಿಯಾಗಿದ್ದಾಗ ಇಡೀ ದಕ್ಷಿಣ ಭಾರತದ ರಸ್ತೆ ಕಾಂಟ್ರಾಕ್ಟನ್ನು ತಮಿಳುನಾಡಿನ ಗುತ್ತಿಗೆದಾರನೊಬ್ಬನಿಗೆ ಕೊಟ್ಟದ್ದಕ್ಕೆ ದೇವೇಗೌಡರಿಗೆ ಇನ್ನೂರು ಕೋಟಿಯ ಕಮೀಷನ್ ಬಂದಿತ್ತಂತೆ. ಅದನ್ನು ವೈ.ಕೆ. ರಾಮಯ್ಯನವರ ಮೂಲಕ ಬಾಲಗಂಗಾಧರನಾಥರ ಬಳಿ ಕೊಟ್ಟು ಮಡಗಿದ್ದರಂತೆ. ಕಳೆದ ಚುನಾವಣೆಗೂ ಮುನ್ನ ಅದನ್ನು ಕೇಳಲು ಹೋದರೆ ತಮ್ಮ ಕುಂಬಳಗೋಡು ಆಶ್ರಮವನ್ನು ತೋರಿಸಿದ ಬಾಲಗಂಗಾಧರರು "ನೀನು ಕೊಟ್ಟದ್ದೆಲ್ಲಾ ಇಲ್ಲಿದೆ ನೋಡು" ಎಂದುಬಿಟ್ಟರಂತೆ!

ಹೀಗೆ ಜಿದ್ದಾಜಿದ್ದಿ ಹುಟ್ಟುಹಾಕಿದ ಇನ್ನೂರು ಕೋಟಿಯಲ್ಲಿ ದೇವೇಗೌಡರಿಗೆ ವಾಪಸ್ಸು ಬಂದ ದುಡ್ಡೆಷ್ಟು? ಅಥವಾ ಕೊಟ್ಟ ದುಡ್ಡು ಮನ್ನಾ ಆಯಿತೆ? ಬಲ್ಲವರ್‍ಯಾರು?

ಕೆಂಗೇರಿ ಸ್ವಾಮಿಯ ತಾಪತ್ರಯ

ಬೇರೆ ಯಾರೇ ಒಬ್ಬ ಸ್ವಾಮಿಯ ಬೆನ್ನಿಗೆ ದೇವೇಗೌಡರಂಥ ಧೃತ್ಯರಿದ್ದಿದ್ದರೆ ಯಾವ ಮಟ್ಟಕ್ಕೆ ಬೆಳೆಯುತ್ತಿದ್ದರೋ? ಆದರೆ ಕೆಂಗೇರಿ ಸ್ವಾಮಿ ಚಂದ್ರಶೇಖರನಾಥ ಮನೆಗೆ ಮಗನಲ್ಲ ಸುಡುಗಾಡಿಗೆ ಹೆಣವಲ್ಲ. ಪ್ರಾರಂಭದಲ್ಲಿ ವಾರಕ್ಕೊಮ್ಮೆಯಾದರೂ ಕುಮಾರಸ್ವಾಮಿ ಕೆಂಗೇರಿ ಮಠಕ್ಕೆ ಬಂದು ಹೋಗುತ್ತಿದ್ದರು. ಎಂಎಲ್‌ಸಿ ಪುಟ್ಟಣ್ಣ, ಚಿನ್ನಿಗಪ್ಪ, ಚನ್ನರಾಯಪಟ್ಟಣದ ಪುಟ್ಟೇಗೌಡರಂಥ ಘಟಾನುಘಟಿಗಳೇ ಕೆಂಗೇರಿ ಮಠದ ಉದ್ಧಾರಕ್ಕೆ ನಿಂತಿದ್ದರು. ಬಿಲ್ಡರುಗಳಾದ ಎ.ಜಿ. ಸಿದ್ಧಪ್ಪ ಮತ್ತು ಅಡಕಮಾರನಹಳ್ಳಿ ಕೃಷ್ಣಪ್ಪ ಬಾಲಗಂಗಾಧರನಾಥರ ವಿರುದ್ಧ ಕೆಂಗೇರಿ ಸ್ವಾಮಿಯನ್ನು ಯಾವ ಮಟ್ಟಕ್ಕೊಯ್ಯುವುದಕ್ಕೂ ರೆಡಿಯಿದ್ದರು.

ಆದರೆ ಅಂಥ ಯಾವ ನಿರೀಕ್ಷೆಗೂ ಕೆಂಗೇರಿ ಸ್ವಾಮಿ ಯೋಗ್ಯನಾಗಿರಲಿಲ್ಲ ಎಂದು ಗೊತ್ತಾಗುವ ಹೊತ್ತಿಗೆ ಕಾಲ ಮಿಂಚಿತ್ತು.

ಇಡೀ ಕೆಂಗೇರಿ ಆಶ್ರಮವನ್ನು ನಿಯಂತ್ರಿಸುತ್ತಿದ್ದದ್ದು ಕುಮಾರ ಚಂದ್ರಶೇಖರನಾಥರ ತಮ್ಮನ ವಿಧವಾ ಪತ್ನಿ ದೇವಮ್ಮ. ತಮ್ಮ ದುರ್ಮರಣಕ್ಕೀಡಾದ ನಂತರ ಆತನ ಪತ್ನಿ ದೇವಮ್ಮನನ್ನು ಕೆಂಗೇರಿ ಮಠದಲ್ಲೇ ತಂದಿಟ್ಟುಕೊಂಡ ಕುಮಾರ ಚಂದ್ರಶೇಖರನಾಥರು ಕ್ರಮೇಣ ಆಕೆಯ ಕೈಗೊಂಬೆಯಾಗಿ ಬಿಟ್ಟರು. ದೇವಮ್ಮ ತನ್ನ ಮಗ ಬಾಲರಾಜ್‌ನನ್ನೇ ಕುಮಾರ ಚಂದ್ರಶೇಖರನಾಥರ ಕಾರಿಗೆ ಡ್ರೈವರ್ ಆಗಿ ನೇಮಿಸಿದ್ದಳು. ಆ ಮೂಲಕ ಸ್ವಾಮಿಯ ಓಡಾಟ, ಎಲ್ಲಿಂದ ಎಷ್ಟು ದುಡ್ಡು ಬಂತು, ಇತ್ಯಾದಿಗಳನ್ನು ತಿಳಿದುಕೊಂಡು 'ತತ್ತಾ... ಇತ್ತಾಗೀ...' ಎಂದು ಕಿತ್ತುಕೊಳ್ಳುತ್ತಿದ್ದಳು. ಅದೊಮ್ಮೆ ಕುಮಾರಸ್ವಾಮಿ ಮತ್ತು ಚಿನ್ನಿಗಪ್ಪ ಸೇರಿಕೊಂಡು ಒಂದು ಬ್ರೀಫ್‌ಕೇಸ್ ತುಂಬ ನೋಟಿನ ಕಂತೆಗಳನ್ನು ತಂದುಕೊಟ್ಟರು. ಮರು ಬೆಳಿಗ್ಗೆ ಬೇರೇನಕ್ಕೋ ಬಂದು ಕೇಳಿದರೆ ಸ್ವಾಮಿ ಕೈ ಎತ್ತಿಬಿಟ್ಟ. ಆ ಹೊತ್ತಿಗಾಗಲೇ ಸ್ವಾಮಿ ಮತ್ತು ದೇವಮ್ಮನ ನಂಟು ಬಿಲ್ಡರುಗಳಾದ ಸಿದ್ದಪ್ಪ-ಅಡಕಮಾರನಹಳ್ಳಿ ಕೃಷ್ಣಪ್ಪರಿಗೂ ಗೊತ್ತಾಗಿತ್ತು.

ಮಠಕ್ಕೆ ಬಂದ ದುಡ್ಡೆಲ್ಲ ದೇವಮ್ಮನ ಮೂಲಕ ಪೋಲಾಗುತ್ತಿದೆ ಎಂದು ಗೊತ್ತಾಗಿದ್ದೇ ತಡ, ಇಡೀ ಮಣ್ಣಿನ ಮಕ್ಕಳ ಪಟಾಲಂ ಬರುವುದನ್ನೇ ನಿಲ್ಲಿಸಿತು. ದೇವಮ್ಮ ತನ್ನ ಅಳಿಯನನ್ನೇ ಗುರು ಜ್ಞಾನಾಶ್ರಮದ ಹೆಡ್‌ಮಾಸ್ತರನನ್ನಾಗಿ ನೇಮಿಸಿದಳು. ಮಗಳಿಗೆಂದು ಮಠದ ದುಡ್ಡಲ್ಲಿ ಬಂಗಲೆ ಖರೀದಿಸಿದಳು. ಆಶ್ರಮದ ಅನಾಥ ಮಕ್ಕಳನ್ನು ದೇವಮ್ಮನ ಮನೆಚಾಕರಿಗೆ ಕಳಿಸುತ್ತಿದ್ದ ಕುಮಾರ ಚಂದ್ರಶೇಖರನಾಥರು ನಡುರಾತ್ರಿಯೆದ್ದು ದೊಣ್ಣೆಯಿಂದ ಮಕ್ಕಳನ್ನು ಬಡಿಯುತ್ತಿದ್ದರು. ದೇವಮ್ಮನ ಹಿಂಸೆ ತಾಳಲಾರದೇ ಅನಾಥ ಬಾಲಕಿಯೊಬ್ಬಳು ಆಶ್ರಮದ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಾಗಲೂ ಕುಮಾರಸ್ವಾಮಿಯೇ ನಿಂತು ಸ್ವಾಮಿಯನ್ನು ಬಚಾಯಿಸಿದ್ದ.

ಒಂದು ಹಂತದಲ್ಲಿ ಬರುತ್ತಿದ್ದ ಬೆಂಬಲಿಗರು ಮತ್ತು ಸಿಗುತ್ತಿದ್ದ ನೆರವನ್ನು ಕಂಡು ಕುಮಾರ ಚಂದ್ರಶೇಖರನಾಥರೇ ದಂಗಾಗಿಬಿಟ್ಟರು. ಬರುಬರುತ್ತ ದೇವಮ್ಮ ನೆರವಿಗಿದ್ದ ಸಿದ್ಧಪ್ಪ ಮತ್ತು ಅಡಕಮಾರನಹಳ್ಳಿ ಕೃಷ್ಣಪ್ಪರ ಮೇಲೇ ದಬ್ಬಾಳಿಕೆಗಿಳಿದರು. ಯಾರು ಕೇಳುತ್ತಾರೆ?



ಸಿದ್ಧರಾಮ ಚೈತನ್ಯ ಸ್ವಾಮಿ


ಇದು ಗೊತ್ತಾಗಿದ್ದೇ ಕುಮಾರಸ್ವಾಮಿ ತಲೆ ಚಚ್ಚಿಕೊಂಡ. ಕೆಂಗೇರಿ ಮಠಕ್ಕೆ ಉತ್ತರಾಧಿಕಾರಿಯಾಗಿ ನೇಮಕಗೊಂಡಿದ್ದ ಸ್ವಾಮಿ ಸಿದ್ಧರಾಮ ಚೈತನ್ಯರು ರೋಸತ್ತು ಮಠ ತೊರೆದು ತುಮಕೂರಿನ ಕಾಡಗುಜ್ಜನಹಳ್ಳಿಯಲ್ಲಿ ಒಕ್ಕಲಿಗ ಮಹಾಗುರು ಶ್ರೀ ಸಿದ್ಧರಾಮ ಮಠ ಎಂಬ ಪ್ರತ್ಯೇಕ ಮಠ ಕಟ್ಟಿಕೊಂಡರು. ಯಾವ ಸಿದ್ಧಪ್ಪ ಮತ್ತು ಕೃಷ್ಣಪ್ಪ ಕುಮಾರ ಚಂದ್ರಶೇಖರನಾಥರ ಬೆನ್ನಿಗಿದ್ದರೋ ಅವರೇ ನಿಂತು ಸಿದ್ಧರಾಮ ಚೈತನ್ಯರನ್ನು ಬೆಳೆಸತೊಡಗಿದರು.


ಸದ್ಯ ಕೆಂಗೇರಿ ಮಠ ಹಿಂದಿನಂತೆ ಪಾಳುಬಿದ್ದಿದೆ. ಒಕ್ಕಲಿಗರ ಪಾಲಿನ ಮೂರನೇ ಜಗದ್ಗುರು ಸಿದ್ಧರಾಮ ಚೈತನ್ಯರನ್ನು ವಿಶೇಷವಾಗಿ ತುಮಕೂರಿನ ಒಕ್ಕಲಿಗರು ಬೆಂಬಲಿಸುತ್ತಿದ್ದಾರೆ. ಬಾಲಗಂಗಾಧರರು ಮಾತ್ರ ಅವತ್ತು ಹೇಗಿದ್ದರೋ ಹಾಗೆ ಇವತ್ತಿಗೂ ಹೆಲಿಕಾಪ್ಟರ್ ಬಿಟ್ಟಿಲ್ಲ, ಬಂದ ದಾರಿಗೆ ಸುಂಕವಿಲ್ಲದಂತಾದದ್ದು ಮಾತ್ರ ದೇವೇಗೌಡ.

ಕಾರ್ಪೋರೇಟರ್ ಸಮಿಉಲ್ಲಾ ನಾಪತ್ತೆ! ಚಪ್ಪರ್ ಬಾಬು ಕೈವಾಡ!

ರಾಮಲಿಂಗಾರೆಡ್ಡಿ ಶಿಷ್ಯರಿಂದ ಗುಲ್ಬರ್ಗಾ ಹುಡುಗಿಯ

ಕಿಡ್ನ್ಯಾಪ್ & ರೇಪ್







ಗುಲ್ಬರ್ಗಾದ ಸುಶಿಕ್ಷಿತ ಮನೆತನದ ಪುಟ್ಟ, ಮುಗ್ಧ ...ಯೊಬ್ಬಳ ಬದುಕನ್ನು ಬೆಂಗಳೂರಿನ ಕುಖ್ಯಾತ ... ರಾಜಕಾರಣಿಗಳು ಹೊಸಕಿ ಹಾಕಿರುವ ದಾರುಣ [illegible] ಇದು.

...ನಡೆದಿರುವುದು ಕಿಡ್ನ್ಯಾಪ್ ಹಾಗೂ ರೇಪ್. ... ಬಲಿಯಾದ ಬಾಲಕಿ ಈಗ ಪೋಷಕರ ...ಬಳಿಗೆ ಹಿಂತಿರುಗಿದ್ದಾಳೆ (ಆಕೆಯ ರಕ್ಷಣೆಗೆಂದು ... ಇಲ್ಲಿ ಅವಳ ಮತ್ತು ಅವಳ ಪೋಷಕರ ...ಗಳನ್ನು ಪ್ರಕಟಿಸುತ್ತಿಲ್ಲ). ಈ ದುರ್ಘಟನೆಯ ...ಮುಖ ಲಿಂಕ್ ಆಗಿರುವ ಬೆಂಗಳೂರಿನ ಚಪ್ಪರ್ ...ಬು ಎಂಬ ಹೀನ ಕ್ರಿಮಿ ಈಗ ತಲೆ ಮರೆಸಿ ...ಕೊಂಡಿದ್ದಾನೆ. ಇದೇ ಪ್ರಕರಣದಲ್ಲಿ ಭಾಗಿಯಾಗಿದ್ದಾನೆಂಬ ...ಅನುಮಾನವಿರುವ ಚಪ್ಪರ್ ಬಾಬುನ ಗೆಳೆಯ ಹಾಗೂ ...ಮಹಾನಗರ ಪಾಲಿಕೆ ಗುರುಪ್ಪನಪಾಳ್ಯ ವಾರ್ಡ್‌ನ ಸದಸ್ಯ ...ಸಮಿಉಲ್ಲಾ ಕೂಡ ಈಗ ನಾಪತ್ತೆಯಾಗಿಬಿಟ್ಟಿದ್ದಾನೆ.

ಈ ಇಬ್ಬರೂ ಮಹಾನುಭಾವರು ಕಾಂಗ್ರೆಸ್ ಲೀಡರ್, ...ನಗರ ಶಾಸಕ ರಾಮಲಿಂಗಾರೆಡ್ಡಿಯ ಪರಮಾಪ್ತ...ರು. ಅಷ್ಟೇ ಅಲ್ಲ ಕುಡಿತ, ಹೆಂಗಸರು, ಲೈವ್ ...ಬ್ಯಾಂಡ್ ಚಟ, ಅಕ್ರಮ ರಿಯಲ್ ಎಸ್ಟೇಟ್ ದಂಧೆಗಳಲ್ಲಿ ... ದೋಸ್ತಿಯಿರುವ ಎಲಿಮೆಂಟ್‌ಗಳಾಗಿದ್ದಾರೆ. ...ಬೆಂಗಳೂರು ಪೋಲೀಸರು ನೆಟ್ಟಗೆ ಡ್ಯೂಟಿ ಮಾಡಿದಿದ್ದರೆ, ...ಮಾಜಿ ಮಂತ್ರಿ ರಾಮಲಿಂಗಾರೆಡ್ಡಿ ಈ ನಪ್ಪಟಾಲ್‌ಗಳ ...ಬೆನ್ನಿಗೆ ನಿಂತಿರದಿದ್ದರೆ ಇವರಿಬ್ಬರೂ ಜೈಲು ಸೇರಿ ಬಹಳ ...ದಿನಗಳಾಗಿರುತ್ತಿದ್ದವೇನೋ. ಆದರೆ ಈಗ ಈ ಮಹಾತ್ಮರ ...ಪಾಪದ ಕೊಡ ತುಂಬಿದೆ. ಇವರಿಂದ ಅತ್ಯಾಚಾರಕ್ಕೊಳ...ಗಾಗಿರುವ ಗುಲ್ಬರ್ಗಾ ಬಾಲಕಿ ಚಪ್ಪರ್ ಬಾಬುವಿನ ...ಹೆಸರನ್ನು ಪೋಲೀಸರಿಗೆ ಹೇಳಿದ್ದಾಳೆ. ಇನ್ನೇನು ಇವತ್ತೋ ...ನಾಳೆಯೋ ಕಾರ್ಪೋರೇಟರ್ ಸಮಿಉಲ್ಲಾನನ್ನೂ ಆ... ಗುರುತು ಹಿಡಿಯಬಹುದು.

ಬಹುಶಃ ಆ ಭೀತಿಯಿಂದಲೋ ಏನೋ ಇವರಿ...ಬ್ಬರೂ ಈಗ ಬೆಂಗಳೂರಿನಿಂದ ಪರಾರಿಯಾಗಿದ್ದಾರೆ.

ಗುಲ್ಬರ್ಗಾ ಲಿಂಕ್ ಸಿಕ್ಕಿದ್ದು

...ಧರಂಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಶಿಕ್ಷಣ ...ಸಚಿವರಾಗಿದ್ದ ರಾಮಲಿಂಗಾರೆಡ್ಡಿಯವರನ್ನು ಗುಲ್ಬರ್ಗಾ ...ಜಿಲ್ಲೆಯ ಉಸ್ತುವಾರಿ ಸಚಿವರನ್ನಾಗಿ ನೇಮಿಸಲಾಗಿತ್ತು. ...ಈ ಜಿಲ್ಲೆಯ ಮಲ್ಲಿಕಾರ್ಜುನ ಖರ್ಗೆ ಕೆಪಿಸಿಸಿ ...ಅಧ್ಯಕ್ಷರಾಗಿ ಆಯ್ಕೆಯಾದ ಕಾರಣ ರಾಮಲಿಂಗಾರೆಡ್ಡಿಗೆ ...ಈ ಜವಾಬ್ದಾರಿ ಹೊರಿಸಲಾಗಿತ್ತು. ಉಸ್ತುವಾರಿ ಸಚಿವ...ರಾಗಿದ್ದ ಕಾರಣ ಕೆಡಿಪಿ ಮೀಟಿಂಗ್, ಪ್ರಗತಿ ಪರಿಶೀಲನಾ ...ಸಭೆಗೆಂದು ರೆಗುಲರ್ ಆಗಿ ಗುಲ್ಬರ್ಗಾಗೆ ಹೋಗಿ ...ಬರುತ್ತಿದ್ದ ರೆಡ್ಡಿಯವರ ಜೊತೆ ಈ ಸಮಿಉಲ್ಲಾ, ...ಪಟ್ಟಾಭಿರಾಮನಗರದ ಕಾರ್ಪೋರೇಟರ್ ಎನ್. ...ನಾಗರಾಜ್ ಹಾಗೂ ಚಪ್ಪರ್ ಬಾಬು ಕೂಡ ಆಗಾಗ್ಗೆ ...ಹೋಗಿ ಬರುತ್ತಿದ್ದರು. ದಿನಕ್ಕೊಬ್ಬ ಹೆಂಗಸರ ಬೆನ್ನು ...ಹತ್ತುವ ಚಟವಿರುವ ಸಮಿಉಲ್ಲಾ ಹಾಗೂ ಚಪ್ಪರ್ ...ಬಾಬುಗೆ ಆಗ ಗುಲ್ಬರ್ಗಾದಲ್ಲಿ ಪರಿಚಯವಾದವರೇ ...ಆಯೀಷಾ, ಹಸೀನಾ ಹಾಗೂ ಪರ್ವೀನ್ ಎಂಬ ಹುಡುಗಿ...ಯರು. ಅಲ್ಲಿನ ಟಾಟಾ ಇಂಡಿಕಾಂ ಆಫೀಸಿನ ಕಚೇರಿ...ಯಲ್ಲಿ ಕೆಲಸಕ್ಕಿದ್ದ ಈ ಮೂವರು ಹುಡುಗಿಯರ ಬಗ್ಗೆ ... [illegible] ಕೇಳಿಬರುತ್ತಿವೆ. ಅದೇ ಟಾಟಾ ಇಂಡಿಕಾಂ ...ಕಚೇರಿಯ ಹತ್ತಿರದಲ್ಲಿ ಆನಂದ್ ಡ್ರೈವಿಂಗ್ ಸ್ಕೂಲ್ ... ಆನಂದ್ ಎಂಬ ಯುವಕ ಅದರ ಮಾಲೀಕನಾಗಿದ್ದ ... [illegible] ಅರೆಸ್ಟಾಗಿದ್ದಾನೆ). ಈ ಆನಂದ್‌ಗೆ ಪರಿಚಯ...ವಿದ್ದ ಬಾಲಕಿಯೇ ಈಗ ಕಿಡ್ನ್ಯಾಪ್ ಹಾಗೂ ರೇಪ್‌ಗೆ ಬಲಿಯಾಗಿರುವ ನತದೃಷ್ಟೆ. ಏನಾಯಿತೆಂದರೆ ಆನಂದ್‌ನನ್ನು ನೋಡಲು ಒಂದೆರಡು ಬಾರಿ ಬಂದಿದ್ದ ಆ ಬಾಲಕಿಗೆ ಸ್ವತಃ ಆನಂದನೇ ಆಯೀಷಾ, ಹಸೀನಾ ಹಾಗೂ ಪರ್ವೀನ್‌ರ ಪರಿಚಯ ಮಾಡಿಸಿದ್ದಾನೆ. ಈ ಮುಸ್ಲಿಂ ಹುಡುಗಿಯರಿಗೆ ಗುಲ್ಬರ್ಗಾದ ಅಸಂಖ್ಯಾತ ಚೆಡ್ಡಿಹರುಕ ಪುಢಾರಿಗಳು, ಅಧಿಕಾರಿಗಳ ಪರಿಚಯವಿದೆ. ಅದೇ ಕ್ಯಾಟಗರಿಗೆ ಸೇರುವ ರಾಮಲಿಂಗಾರೆಡ್ಡಿ ಪಟಾಲಂ

[illegible]

ಪರಿಚಯವೂ ಏರ್ಪಟ್ಟಿದೆ. ಆದರೆ ಗುಲ್ಬರ್ಗಾದ ಆ ಮುಗ್ಧ ಸುಂದರ ಬಾಲೆಗೆ ಈ ಬ್ರಾಥಲ್ ಗ್ಯಾಂಗಿನ ಅಸಲಿ ಮುಖ ಗೊತ್ತಾಗಿಲ್ಲ. ಆಯೀಷಾ ಮತ್ತಿತರರ



ಬಿಜೆಪಿ-ಜೆಡಿಎಸ್ ಮಹಿಳೆಯರ ಪ್ರತಿಭಟನೆ

ಜೊತೆ ಸಹಜ ಸ್ನೇಹದಿಂದಲೇ ಇದ್ದಳು. ಆಗಲೇ ಈ ಬಾಲಕಿ ಸಮಿಉಲ್ಲಾ ಹಾಗೂ ಚಪ್ಪರ್ ಬಾಬು ಕಣ್ಣಿಗೆ ಬಿದ್ದಿದ್ದಾಳೆ. ಪರಸ್ಪರರ ಪರಿಚಯವೂ ಆಗಿದೆ. ಮೊಬೈಲ್ ಫೋನಿನಲ್ಲಿ ಮಾತಾಡುವುದು, ಆಗಾಗ್ಗೆ ಗುಲ್ಬರ್ಗಾದಲ್ಲೇ ಭೇಟಿಯಾಗುವುದು ಎಲ್ಲಾ ನಡೆದಿದೆ.

ನಾಪತ್ತೆಯಾದಳು ಬಾಲೆ

ಹೀಗೆ ಪರಿಚಯ ಭೇಟಿ ಎಲ್ಲಾ ನಡೆಯುತ್ತಿದ್ದ ವಿಷಯ ಆ ಬಾಲೆಯ ಪೋಷಕರಿಗೆ ಗೊತ್ತಾಗಿಲ್ಲ. ಹೀಗಿರುವಾಗಲೇ ಮಾರ್ಚ್ 8 ನೇ ತಾರೀಖು ಆ ಬಾಲಕಿ ಗುಲ್ಬರ್ಗಾದಿಂದ ನಾಪತ್ತೆಯಾಗಿದ್ದಾಳೆ. [illegible] ತಂದೆ ಗುಲ್ಬರ್ಗಾದ ಚೌಕಿ ಪೋಲೀಸ್ ಠಾಣೆಯಲ್ಲಿ ಒಂದು ದೂರು ಕೊಟ್ಟಿದ್ದಾರೆ. ಆ ಕಂಪ್ಲೆಂಟಿನಲ್ಲಿ ಆನಂದ್ ಡ್ರೈವಿಂಗ್ ಸ್ಕೂಲಿನ ಆನಂದ್ ಹಾಗೂ ಟಾಟಾ ಇಂಡಿಕಾಂನ ಆಯೀಷಾ ಮತ್ತಿತರ ಮೇಲೆ ಅನುಮಾನ ವ್ಯಕ್ತಪಡಿಸಲಾಗಿದೆ. ಮೊದಮೊದಲು ಈ ಪ್ರಕರಣದ ಬಗ್ಗೆ ಅಸಡ್ಡೆ ತೋರಿದ ಚೌಕಿ ಠಾಣಾ ಪೋಲೀಸರು ಯಾವಾಗ ಶಾಸಕ ವಿಠಲ್ ಹೇರೂರ್ ಹಾಗೂ ಮಾಜಿ ಸಚಿವ ಬಾಪೂಗೌಡ ದರ್ಶನಾಪೂರ ಠಾಣೆಗೇ ಬಂದು ಗಲಾಟೆ ಮಾಡಿದರೋ ನಂತರ ಗಡಿಬಡಿಯಿಂದ ಓಡಾಡಿ ಆನಂದನನ್ನು ಅರೆಸ್ಟ್ ಮಾಡಿದ್ದಾರೆ. ಟಾಟಾ ಇಂಡಿಕಾಂನ ಆಯೀಷಾಳನ್ನು ಎಳೆದು ತಂದು ಗದರಿಸಿದೇಟಿಗೆ ಅವಳು ಚಪ್ಪರ್ ಬಾಬು ಹೆಸರೇಳಿಬಿಟ್ಟಿದ್ದಾಳೆ.

ಈ ನಡುವೆ ಗುಲ್ಬರ್ಗಾದಿಂದ ನಾಪತ್ತೆಯಾಗಿದ್ದ ಬಾಲಕಿ ಮಾರ್ಚ್ 17 ರಂದು ಬೆಂಗಳೂರಿನ ಜೆ.ಪಿ. ನಗರದ ಶಮಾ ಮಂಜಿಲ್ ಎಂಬ ಲೇಡೀಸ್ ಹಾಸ್ಟಲಿನಲ್ಲಿ ಪತ್ತೆಯಾಗಿದ್ದಾಳೆ. ಅವಳನ್ನು ಗುಲ್ಬರ್ಗಾದಿಂದ ಕಿಡ್ನ್ಯಾಪ್ ಮಾಡಿ ಕರೆತಂದಿದ್ದ ಚಪ್ಪರ್ ಬಾಬು ಬನ್ನೇರುಘಟ್ಟ ರಸ್ತೆಯಲ್ಲಿರುವ ಕಾಂಗ್ರೆಸ್ ಲೀಡರ್ ಒಬ್ಬನಿಗೆ ಸೇರಿರುವ ಫಾರಂ ಹೌಸಿನಲ್ಲಿ ಇರಿಸಿದ್ದ. ಅಲ್ಲಿ ಆಕೆಗೆ ಮತ್ತು ಬರಿಸುವ ಔಷಧವನ್ನು ಕುಡಿಸಿ ಅತ್ಯಾಚಾರವೆಸಗಲಾಗಿದೆ. ಚಪ್ಪರ್ ಬಾಬು ಅಲ್ಲದೆ ಕೆಲ ಕಾಂಗ್ರೆಸ್ ಕಾರ್ಪೋರೇಟರ್‌ಗಳೂ ಈ ಕೃತ್ಯ ನಡೆಸಿರುವ ಅನುಮಾನ ಈಗ ಪೋಲೀಸರಿಗೆ ಬಂದಿದೆ. ಈ ದುಷ್ಟ ಕ್ರಿಮಿಗಳ ವರ್ತನೆಗಳಿಂದ ಬೆದರಿದ ಬಾಲಕಿ ಪ್ರತಿಭಟಿಸಲು ಶುರು ಮಾಡಿದಾಗ ಅವಳನ್ನು ಚೆನ್ನೈಗೆ ಸಾಗಿಸುವ ಪ್ರಯತ್ನ ಮಾಡಿದ್ದಾರೆ. ದಾರಿಯಲ್ಲಿ ಹೊಸೂರಿನಿಂದ ಬಾಲಕಿಯ ತಂದೆಗೇ ಫೋನ್ ಮಾಡಿಸಿ "ತಾನು ಕ್ಷೇಮದಿಂದಿರುವುದಾಗಿಯೂ, ಪೋಲೀಸ್ ಕಂಪ್ಲೆಂಟ್ ಕೊಡುವುದಾಗಲೀ, ಹುಡುಕುವ ಪ್ರಯತ್ನವನ್ನಾಗಲೀ ಮಾಡಕೂಡದೆಂದು" ಆ ಹುಡುಗಿಯ ಬಾಯಿಂದಲೇ ಹೇಳಿಸಿದ್ದಾರೆ. ಆದರೆ ಅಷ್ಟರಲ್ಲಿ ಚೌಕಿ ಠಾಣಾ ಇನ್ಸ್‌ಪೆಕ್ಟರ್ ಹೂಗಾರ್ ಈ ಕೇಸ್‌ನ್ನು ಸೀರಿಯಸ್ ಆಗಿ ತೆಗೆದುಕೊಂಡು ಸಮಿಉಲ್ಲಾ ಹಾಗೂ ಚಪ್ಪರ್ ಬಾಬುಗಾಗಿ ತಲಾಷ್ ಆರಂಭಿಸಿದ್ದರು. ಬಾಲಕಿಯಿಂದ ಬಂದಿದ್ದ ಫೋನ್ ಕರೆಗಳ ಜಾಡು ಹಿಡಿದು, ಟಾಟಾ ಇಂಡಿಕಾಂನ ಆಯಿಷಾ ನೀಡಿದ್ದ ಕ್ಲೂ ಆಧರಿಸಿ ನೇರ ಬೆಂಗಳೂರಿಗೆ ಬಂದವರೇ ಶಮಾ ಮಂಜಿಲ್‌ಗೆ ದಾಳಿ ಮಾಡಿ ಆ ಬಾಲಕಿಯನ್ನು ರಕ್ಷಿಸಿದ್ದಾರೆ. ಚಪ್ಪರ್ ಬಾಬು ಪೋಲೀಸರಿಗೆ ಹೆದರಿ ಆ ಹುಡುಗಿಯನ್ನು ಶಮಾ ಮಂಜಿಲ್‌ನಲ್ಲಿ ಬಿಟ್ಟು ಪರಾರಿಯಾಗಿದ್ದ.

ಗುಲ್ಬರ್ಗಾ ಪೋಲೀಸರು ಈಗ ಕಾರ್ಪೋರೇಟರ್ ಸಮಿಉಲ್ಲಾ ಮತ್ತವನ ಚೇಲಾ ಚಪ್ಪರ್ ಬಾಬು ಇಬ್ಬರನ್ನು ಹುಡುಕುತ್ತಿದ್ದಾರೆ.

ಈ ನೀಚರ ಪೈಶಾಚಿಕ ಕೃತ್ಯಕ್ಕೆ ಬಲಿಯಾಗಿರುವ ಬಾಲಕಿಯ ಕುಟುಂಬ ಈಗ ಅಪಾರ ದುಃಖದಿಂದಿದೆ. ಆದರೆ ಅವರೇನೂ ದುರ್ಬಲರಲ್ಲ. ಹಾಗಾಗಿ ಗುಲ್ಬರ್ಗಾ ಪೋಲೀಸರಾಗಲಿ ಅಥವಾ ಸಿಟಿ ಪೋಲೀಸರಾಗಲಿ ಈ ಕಿಡ್ನ್ಯಾಪ್ ಹಾಗೂ ರೇಪ್ ಪ್ರಕರಣವನ್ನು ಗಂಭೀರವಾಗಿಯೇ ತನಿಖೆ ಮಾಡಬೇಕಾಗಿ ಬಂದಿದೆ.

ಆರೋಪಿಗಳೆಲ್ಲರೂ ಕಾಂಗ್ರೆಸ್‌ನವರಾಗಿದ್ದು ಸ್ಥಳೀಯ ಜೆಡಿಎಸ್ ಹಾಗೂ ಬಿಜೆಪಿಗಳು ಅಖಾಡಕ್ಕಿಳಿಯಲು ರೆಡಿಯಾಗುತ್ತಿದ್ದಾರೆ. ಈಗಾಗಲೇ ಎರಡು ದಿನಗಳ ಹಿಂದೆ ಆಡುಗೋಡಿ ಪೋಲೀಸ್ ಠಾಣೆ ಎದುರು ಬಿಜೆಪಿ ಹಾಗೂ ಜೆಡಿಎಸ್‌ನ ಮಹಿಳಾ ವಿಭಾಗದವರು ಸಮಿಉಲ್ಲಾ ಹಾಗೂ ಚಪ್ಪರ್ ಬಾಬುನನ್ನು ಕೂಡಲೇ ಅರೆಸ್ಟ್ ಮಾಡುವಂತೆ ಗಲಾಟೆ ನಡೆಸಿ ಹೋಗಿದ್ದಾರೆ. ಈ ಘಟನೆ ವಿಧಾನಸಭೆ ಹಾಗೂ ಮಹಾನಗರ [illegible] ಗಲಾಟೆಗಳಿಗೆ ಕಾರಣವಾದರೆ [illegible]

ಚಪ್ಪರ್ ಬಾಬು-ಸಮಿಉಲ್ಲಾ ಹೀನ ಚರಿತ್ರೆ

ಬೆಂಗಳೂರಿನ [illegible] ರೌಡಿ ಹಾಗೂ ಮೂರನೇ ದರ್ಜೆ ಕಳ್ಳ ಚಪ್ಪರ್ ಬಾಬುವಿನ ಹೆಸರೇ ಹೇಳುವಂತೆ ಮೂಲಭೂತವಾಗಿ ಅವನೊಬ್ಬ ಚಪ್ಪರ್ ಅರ್ಥಾತ್ ಚಿಂದಿ ಆಯುತ್ತಾ ಬೆಳೆದವನು. ಮೊದಮೊದಲು ಡೆಮಾಲಿಷ್ ಆಗಿರುವ ಬಿಲ್ಡಿಂಗ್‌ಗಳಿಂದ ಮಣ್ಣು-ಕಸ ಎತ್ತಿ ದೂರಕ್ಕೊಯ್ದು ಸುರಿದು ಬರುತ್ತಿದ್ದವನು ನಿಧಾನವಾಗಿ ಲಾರಿ ಇಟ್ಟುಕೊಂಡ. ಕೊನೆಗೆ ರಿಯಲ್ ಎಸ್ಟೇಟ್ ದಂಧೆ ಶುರು ಮಾಡಿದ. ಶಿವಾಜಿನಗರದ ರೌಡಿ ಗ್ಯಾಂಗ್‌ಗಳೊಂದಿಗೆ ಬಾಬುಗೆ ಮೊದಲಿಂದಲೂ ಒಳ್ಳೇ ದೋಸ್ತಿಯಿದೆ. ಮುಖ್ಯವಾಗಿ ದೈತ್ಯದೇಹಿ ರೌಡಿ ತನ್ವೀರ್ ಜೊತೆ ಇವನ ವ್ಯವಹಾರಗಳಿವೆ. ಜಗಳವಿರುವ ಆಸ್ತಿಗಳ ಡೀಲಿಂಗ್ ಹಾಗೂ ಲೈವ್‌ಬ್ಯಾಂಡ್ ಹುಡುಗಿಯರ ಶೋಕಿ ಇವೆರಡೇ ಚಪ್ಪರ್ ಬಾಬುವಿನ ನಿತ್ಯ ಕಸುಬು. ಇಂತವನೊಂದಿಗೆ ದೋಸ್ತಿ ಬೆಳೆಸಿಕೊಂಡಿರುವ ಕಾರ್ಪೋರೇಟರುಗಳಾದ ಗುರಪ್ಪನ ಪಾಳ್ಯ ವಾರ್ಡಿನ ಸಮಿಉಲ್ಲಾ ಹಾಗೂ ಪಟ್ಟಾಭಿರಾಮ ನಗರ ವಾರ್ಡಿನ ನಾಗರಾಜ ನಡೆಸಿರುವ ಕ್ರಿಮಿನಲ್ ಕೆಲಸಗಳ ಪಟ್ಟಿ ಮಾಡಿದರೆ ಅದೇ ಒಂದು ಧಾರವಾಹಿಯಷ್ಟಾಗುತ್ತದೆ.

ಈ ಸಮಿಉಲ್ಲಾ ಕೇವಲ ಹತ್ತು ವರ್ಷಗಳ ಹಿಂದೆ ಬೀದಿಯಲ್ಲಿ ಸೀಮೆಎಣ್ಣೆ ಮಾರಿಕೊಂಡು ತಿರುಗುತ್ತಿದ್ದವ. ನಂತರ ರಾಮಲಿಂಗಾರೆಡ್ಡಿಯ ಬಳಗ ಸೇರಿಕೊಂಡು ರಾಜಕೀಯಕ್ಕಿಳಿದಿದ್ದ. ಕಳೆದ ಬಾರಿಯ ನಗರಪಾಲಿಕೆ ಎಲೆಕ್ಷನ್‌ನಲ್ಲಿ ಜೆಡಿಎಸ್‌ನ ರಿಜ್ವಾನ್‌ನನ್ನು ಸೋಲಿಸಿ ಕಾಂಗ್ರೆಸ್‌ನಿಂದ ಗೆದ್ದು ಬಂದಿದ್ದ.

ಕಾರ್ಪೋರೇಟರ್ ಆದನಂತರ ಲಿಟಿಗೇಷನ್ ಇರುವ ಆಸ್ತಿ ವ್ಯವಹಾರದಲ್ಲೇ ಫುಲ್‌ಟೈಂ ತೊಡಗಿಸಿಕೊಂಡಿರುವ ಸಮಿಉಲ್ಲಾ ಜಯದೇವ ಆಸ್ಪತ್ರೆ ಹಿಂಭಾಗದಲ್ಲಿ ಈಗಾಗಲೇ 2 ಕೋಟಿ ಬೆಲೆಯ ಕಾಂಪ್ಲೆಕ್ಸ್ ಒಂದನ್ನು ಎಬ್ಬಿಸಿದ್ದಾನೆ. ಅದೂ ಕೂಡ ಯಾರದ್ದೋ ಜಾಗವನ್ನು ಒತ್ತುವರಿ ಮಾಡಿ ಕಟ್ಟಿರುವ ಕಟ್ಟಡ.

ಯಾರಾದರೂ ಅಬಲೆ ಹೆಣ್ಣುಮಕ್ಕಳು ನಗರ ಪಾಲಿಕೆಯಲ್ಲಿ ಕೆಲಸವಾಗ ಬೇಕೆಂದು ಇವನ ಹತ್ತಿರ ಬಂದರೆ ಅಲ್ಲಿಗೆ ಅವರ ದುರಾದೃಷ್ಟ ಶುರುವಾದಂತೆ. ಅಷ್ಟರ ಮಟ್ಟಿಗೆ ಸಮಿಉಲ್ಲಾನ 'ಸ್ತ್ರೀ ಸಮಾಜ ಸೇವೆ' ಪ್ರಸಿದ್ಧವಾಗಿವೆ.



ಈಗ ಗುಲ್ಬರ್ಗಾದ ಬಾಲಕಿಯ ಕಿಡ್ನ್ಯಾಪ್ ಹಾಗೂ ರೇಪ್ ಪ್ರಕರಣದಲ್ಲಿ ಚಪ್ಪರ್ ಬಾಬುವಿನ ಪಾತ್ರ ಈಗಾಗಲೇ ಪೋಲೀಸರಿಗೆ ಗೊತ್ತಾಗಿದೆ. ಆದರೆ ಕಾರ್ಪೋರೇಟರ್ ಸಮಿಉಲ್ಲಾ ಪದೇಪದೇ ಗುಲ್ಬರ್ಗಾಗೆ ಹೋಗಿ ಬಂದಿರುವುದು, ಅಲ್ಲಿನ ವೆಂಕಟೇಶ್ವರ ನಗರದ ಟಾಟಾ ಇಂಡಿಕಾಂನ ಆಯಿಷಾ, ಹಸೀನರ ಜೊತೆ ಸಮಿಉಲ್ಲಾಗಿರುವ ಲಿಂಕುಗಳು... ಇದೆಲ್ಲದರ ಬಗ್ಗೆ ಪೋಲೀಸರು ತನಿಖೆ ಮಾಡಲಿ. ಜೊತೆಗೆ ಸಮಿಉಲ್ಲಾ ಡ್ರೈವರ್ ಅಮ್ಜದನ ಕೈವಾಡವೂ ಇದರಲ್ಲಿ ಇದ್ದಂತಿದೆ.

[illegible] 8 [illegible] ಗುಲ್ಬರ್ಗಾದಿಂದ ಕಿಡ್ನ್ಯಾಪ್ [illegible] ಮಾರ್ಚ್ 17 [illegible]

ಫತ್ತೆಶಾವಲಿ ದರ್ಗಾಕ್ಕೆ ಚೆಡ್ಡಿ-ಗಡ್ಡಗಳ ಕಾಟ!

ಹುಬ್ಬಳ್ಳಿಯ ಪ್ರಸಿದ್ಧ ಫತ್ತೆಶಾವಲಿ ದರ್ಗಾ ಮೇಲೆ ಎಲ್ಲ ದಿಕ್ಕುಗಳಿಂದಲೂ ದಾಳಿ ಆಗುತ್ತಲೇ ಇದೆ. ಒಂದು ಕಡೆ ಆಡಳಿತ ಮಂಡಳಿಯಲ್ಲಿರುವ ಹೆಗ್ಗಣಗಳ ಕಾಟ, ಇನ್ನೊಂದು ಕಡೆ ಪಿಳ್ಳೆನವಗಳ ಚೆಡ್ಡಿಗಳ ತಾಪತ್ರಯ. ಹುಬ್ಬಳ್ಳಿಯ ಸಾಮಾನ್ಯ ಮುಸ್ಲಿಮರೆಲ್ಲ ಈ ಎಲ್ಲ ಕಳ್ಳರಿಂದ ದರ್ಗಾ ರಕ್ಷಿಸಿ ಎಂದು ದಶಕಗಳಿಂದ ಹೇಳುತ್ತಲೇ ಇದ್ದಾರೆ. ಮುಸ್ಲಿಮರನ್ನಷ್ಟೇ ಅಲ್ಲದೆ ಸಾವಿರಾರು ಹಿಂದೂಗಳನ್ನು ಆಕರ್ಷಿಸಿದ ಈ ದರ್ಗಾ ಭಾವೈಕ್ಯತೆಯ ಕೇಂದ್ರದಂತಿದೆ. ಆದರೆ ದರ್ಗಾ ಕಮಿಟಿಯ ಕಳ್ಳರು, ಮನೆಹಾಳ ಮುಜಾವರರು ದರ್ಗಾಕ್ಕೆ ಶಾಪವಾಗಿದ್ದರೆ, ಇತ್ತ ಒಂದಿಷ್ಟು ಚೆಡ್ಡಿಗಳು ದರ್ಗಾ ಜಾಗವನ್ನೇ ಕಬಳಿಸಿ ಅಟ್ಟಹಾಸ ಮೆರೆಯುತ್ತಿವೆ.

'ಮೈಹೂನಾ' ಎನ್ನುವ ಲಗದಗ

20 ವರ್ಷಗಳಿಂದ ದರ್ಗಾ ಕಮಿಟಿಗೆ ಚುನಾವಣೆಯೇ ನಡೆದಿಲ್ಲ, ಕಮಿಟಿಯ ಅಧ್ಯಕ್ಷ ಸ್ಥಾನವನ್ನು ತನ್ನಪ್ಪನ ಆಸ್ತಿ ಎಂದು ತಿಳಿದಿರುವ ದಬಿಸಾಬ ಲಗದಗ "ಎಲೆಕ್ಷನ್ ಕ್ಯೊಂ... ಮೈ ಹೂ ನಾ$_{ss}$" ಎಂದು ಮೆರೆಯುತ್ತಿದ್ದಾನೆ. ರಾಜ್ಯ ಹೈಕೋರ್ಟ್ ದರ್ಗಾ ಕಮಿಟಿಯ



ಅವ್ಯವಹಾರಗಳ ತನಿಖೆ ನಡೆಸಲು ಮತ್ತು ಚುನಾವಣೆ ನಡೆಸಲು ಈ ಹಿಂದೆ ಎರಡು ಬಾರಿ ಸೂಚಿಸಿತ್ತು. ಇತ್ತೀಚೆಗೆ ಮಾರ್ಚ್ 3ರಂದು ಮೂರನೇ ಆದೇಶ ನೀಡಿರುವ ಹೈಕೋರ್ಟ್ ನಾಲ್ಕು ತಿಂಗಳೊಳಗಾಗಿ ಕಡ್ಡಾಯವಾಗಿ ಚುನಾವಣೆ ನಡೆಸಲೇಬೇಕು ಎಂದು ಹೇಳಿದೆ.

ಆದರೆ ಕುರಿಮಾಂಸದ ರುಚಿ ಸವಿದಿರುವ ತೋಳಗಳು ಈ ಕಮಿಟಿಗೆ ಚುನಾವಣೆ ಮೂಲಕವೂ ಅಟಕಾಯಿಸಿಕೊಳ್ಳಬಹುದು. ಕಮಿಟಿಯ ಎಲ್ಲ ಅವ್ಯವಹಾರಗಳು ಬಯಲಿಗೆ ಬರಬೇಕೆಂದರೆ ಕಮಿಟಿಯನ್ನು ರದ್ದುಗೊಳಿಸಿ ದಕ್ಷ ಆಡಳಿತಾಧಿಕಾರಿಯನ್ನು ನೇಮಿಸಬೇಕಾಗಿದೆ.

ದರ್ಗಾ ಆಸ್ತಿ ಕಳ್ಳರಪಾಲು!

ವಿಕ್ಟೋರಿಯಾ ಮಹಾರಾಣಿ ವರ್ಷವೊಂದಕ್ಕೆ 8 ಆಣೆ ಭೂ ಬಾಡಿಗೆಯಂತೆ ಈ ದರ್ಗಾಕ್ಕೆ 10 ಎಕರೆ 11 ಗುಂಟೆ ಜಾಗ ನೀಡಿದ್ದಳು. ಈಗ 40'X40' ಜಾಗ ಮಾತ್ರ ಉಳಿದಿದೆ! ಉಳಿದದ್ದೆಲ್ಲಾ ಕಳ್ಳಕಾಕರ ಪಾಲಾಗಿಹೋಗಿದೆ. ಈ ಜಾಗದಲ್ಲಿ ನಿಂತವರು ಆಡಳಿತ ಮಂಡಳಿಯೊಂದಿಗೆ ಶಾಮೀಲಾಗಿ ಜಾಗ ತಮ್ಮದೇ ಎನ್ನುತ್ತಿದ್ದಾರೆ. 1955ರಲ್ಲೇ ಈ ಜಾಗ ಸರಕಾರದ್ದೆಂದು ಅಂದಿನ ಜಿಲ್ಲಾಧಿಕಾರಿ ತೀರ್ಮಾನಿಸಿದ್ದ. ಈ ಜಾಗ ದರ್ಗಾದ್ದೆಂದು ಕಮಿಟಿಯವರು ಕೋರ್ಟ್ ಮೆಟ್ಟಲೇರಿ 20 ವರ್ಷಗಳಿಂದಲೂ ವ್ಯಾಜ್ಯ ನಡೆಯುತ್ತಲೇ ಇದೆ.

ದಬಿಸಾಬ ಲಗದಗ ಉರುಫ್ ಬಾಬಾಜಾನ್ ಲಗದಗ 30 ವರ್ಷಗಳ ಹಿಂದೆ ಜವಾಹರ್ ಗ್ಯಾರೇಜಿನಲ್ಲಿ ಒಬ್ಬ ಸಾಮಾನ್ಯ ಮೆಕ್ಯಾನಿಕ್. ಆ ಗ್ಯಾರೇಜ್ ಮಾಲಿಕನಾಗಿದ್ದ ಫಕೀರನಿಗೆ ಗಾಂಜಾ ಹುಚ್ಚು, ಗಾಂಜಾ ಗಿರಾಕಿಗೆ ಟೋಪಿ ಹಾಕಿ ಲಗದಗನೇ ಗ್ಯಾರೇಜ್ ಮಾಲೀಕನಾಗಿಬಿಟ್ಟ. ಇವತ್ತು ಈ ಗ್ಯಾರೇಜ್ 25 ಲಕ್ಷ ರೂ ಬೆಲೆ ಬಾಳುತ್ತದೆ.

ಹುಬ್ಬಳ್ಳಿ

ಕಮಿಟಿಯ ಹಣವನ್ನು ತಿಂದಿದ್ದಲ್ಲದೇ, ಕಲಘಟಗಿ ಕಡೆಯ ಗಂಧದ ಮರಗಳನ್ನು ಕದ್ದು ಕೊಬ್ಬಿದವನು ಈ ಲಗದಗ.



ಏಳು ವರ್ಷಗಳಿಂದ ತನ್ನ ಗ್ಯಾರೇಜ್‌ಗೆ ಅಕ್ರಮವಾಗಿ ವಿದ್ಯುತ್ ಪಡೆದು ಕೆಪಿಟಿಸಿಎಲ್‌ಗೆ ನಾಲ್ಕು ಲಕ್ಷ ರೂ. ವಂಚಿಸಿದ್ದಕ್ಕೆ ಈತನ ಮೇಲೆ ಕೇಸು ಜಡಿಯಲಾಗಿದೆ. ಬೀರಬಂದ ಓಣಿಯಲ್ಲಿ 20 ವರ್ಷಗಳಿಂದ 'ಮುತುವಲ್ಲಿ' ಆಗಿ ಕಳ್ಳಾಟ ನಡೆಸಿದ. ಕೊನೆಗೆ ಮುಸ್ಲಿಮರೇ ಇವನನ್ನು ಕಿತ್ತೊಗೆದು ಮಿಶ್ರಿಕೋಟಿ ಎನ್ನುವ ಸಭ್ಯರನ್ನು 'ಮುತುವಲ್ಲಿ' ಮಾಡಿಕೊಂಡರು. ದರ್ಗಾದ ಹಣ ನುಂಗಿ ನುಂಗಿ 4 ಅಂಗಡಿಗಳನ್ನು, ಕಲಘಟಗಿಯಲ್ಲಿ ಹೊಲವನ್ನು, ಬೀರಬಂದ ಓಣಿಯಲ್ಲಿ 20 ಲಕ್ಷದ ಮನೆಯನ್ನು ಎಬ್ಬಿಸಿರುವ ಲಗದಗನಿಗೆ ಧರ್ಮವೂ ಲಾಭಕರ ದಂಧೆಯಾಗಿಬಿಟ್ಟಿದೆ. ಇವನ ಸೋದರ ಸಂಬಂಧಿಗಳಾದ ಇಟ್ಟಂಗಿ ಭಟ್ಟಿಯ ಅಲ್ಲಾ ಸಾಬ್, ಲತೀಫ್, ಸತ್ತಾರ್, ಸೋಡೆವಾಲೆ, ಜಾಫರ್ ಸಾಬ್ ದಂಡೋಟಿ, ಮೆಹಬೂಬ್ ನವಲೂರ ಇವರೆಲ್ಲ ಕಮಿಟಿಯಲ್ಲಿನ ಕ್ರಿಮಿಗಳು. ಫತೇಶಾ ಎಜುಕೇಷನ್ ಸೊಸೈಟಿ ಹೆಸರಲ್ಲಿ ಉರ್ದು ಪ್ರಾಥಮಿಕ ಶಾಲೆ ನಡೆಸುತ್ತಾರೆ. ಇಲ್ಲೂ ಇಸ್ಮಾಯಿಲ್ ಸಾಬ್ ಜಾಲೇಗಾರ್, ಸತ್ತಾರ್ ಖತೀಬ್‌ಗಳೆಂಬ ಹೆಗ್ಗಣಗಳು ಡೊನೇಷನ್ ಹೆಸರಲ್ಲಿ ಬಡ ಮುಸ್ಲಿಮರನ್ನು ಕಿತ್ತು ತಿನ್ನುತ್ತಿವೆ. ಆಡಳಿತ ಮಂಡಳಿಯ 13 ಸದಸ್ಯರ ಪೈಕಿ ನಾಲ್ವರು ಸತ್ತು, ಒಬ್ಬರು ಬೇಸತ್ತು ರಾಜೀನಾಮೆಯಿತ್ತು ಈಗ ಎಂಟು ಗಂಟುಗಳ್ಳರು ಮಾತ್ರ ಉಳಿದಿದ್ದಾರೆ. ಇಲ್ಲಿನ ಅವ್ಯವಹಾರಗಳ ತನಿಖೆಗೆಂದು ಕಳೆದ ವರ್ಷ (22.2.2005) ರಂದು ಸರಕಾರ ಆಡಳಿತಾಧಿಕಾರಿ ಯನ್ನು ನೇಮಿಸಿತ್ತು, ಆದರೆ ಮಾಜಿ ಸಚಿವ ಹಿಂಡಸಗೇರಿಯ ಬೆಂಬಲದಿಂದ ಮರುದಿನವೇ ಆಡಳಿತಾಧಿಕಾರಿ ನೇಮಕವನ್ನು ರದ್ದು ಮಾಡಿಸಿಬಿಟ್ಟರು.

ಭಕ್ತರ ದೇಣಿಗೆ ಕಳ್ಳರ ಮನೆಗೆ!

ಈ ದರ್ಗಾಕ್ಕೆ 8 ಮುಜಾವರರು (ಪೂಜಾರಿಗಳು) ಇದ್ದಾರೆ. ಕಳೆದ 30 ವರ್ಷಗಳಿಂದ ಇವರು ಖಾಯಂ ಮುಜಾವರರಾಗಿಬಿಟ್ಟಿದ್ದಾರೆ. ಇವರಲ್ಲಿ ಶಮಶುಮುಲ್ಲಾ, ಖಾದರಸಾಬ ಮುಲ್ಲಾ, ಬಾಬುಸಾಬ ಮುಲ್ಲಾಗಳೆಲ್ಲ ಸಹೋದರರೇ. ಇವರಲ್ಲಿ ಇಬ್ಬರು ಬಡ್ಡಿ ವ್ಯವಹಾರ ಮಾಡುತ್ತಿದ್ದಾರೆ. ತಿಂಗಳಿಗೆ 22 ಸಾವಿರ ರೂ.ಗಳಷ್ಟು ಭಕ್ತರ ದೇಣಿಗೆ ಸಂಗ್ರಹವಾಗಿ ಯಾರ್‍ಯಾರದೋ ಜೇಬು ಸೇರುತ್ತಿದೆ. ಇದಲ್ಲದೇ ಒಳಗಿರುವ ದೇಣಿಗೆ ಪೆಟ್ಟಿಗೆಗಳಿಂದ ತಿಂಗಳಿಗೆ 50 ರಿಂದ 60 ಸಾವಿರ ಜಮೆಯಾಗಿ ಮುಜಾವರರನ್ನು, ಕಮಿಟಿ ಕ್ರಿಮಿಗಳನ್ನು ಶ್ರೀಮಂತರನ್ನಾಗಿಸುತ್ತಿದೆ. ಭಕ್ತಾದಿಗಳು ನೇರವಾಗಿ ಸಲ್ಲಿಸಿದ ಹಣ ಸೀದಾ ಕಮಿಟಿ ಸದಸ್ಯರ ಕಿಸೆಗೇರುತ್ತಿದೆ.

ಕಳೆದ ವರ್ಷ ರಾಜ್ಯ ಸರಕಾರ ವಕ್ಫ್ ಬೋರ್ಡ್‌ನ ಆಡಿಟರ್‌ಗಳಿಂದ 1.4.95 ರಿಂದ 31.3.2005ರ ಅವಧಿಯ ದರ್ಗಾದ ಆಯವ್ಯಯಗಳನ್ನೆಲ್ಲಾ ಆಡಿಟ್ ಮಾಡಿಸಿದಾಗ ಅವ್ಯವಹಾರ ಸಾಬೀತಾಗಿತ್ತು. ಇತ್ತೀಚೆಗೆ 3 ವರ್ಷಗಳ ಅವಧಿಯಲ್ಲೇ ಎತ್ತಿದ 20 ಲಕ್ಷ ರೂ. ಚಂದಾ ಹಣಕ್ಕೆ ಲೆಕ್ಕ ಪತ್ರಗಳಿಲ್ಲ, ಅಧಿಕೃತವಾಗಿ 6 ಲಕ್ಷ ರೂ. ತೋರಿಸಿ ಉಳಿದಿದ್ದನ್ನು ಸ್ವಾಹಾ ಮಾಡಲಾಗಿದೆ. ರಾಜ್ಯ ವಕ್ಫ್ ಬೋರ್ಡ್‌ಗೂ ಈ ವರದಿ ತಲುಪಿ ಕಸದ ಬುಟ್ಟಿ ಸೇರಿದೆ. ಕಾರಣ: ಹಿಂಡಸಗೇರಿ ಎಂಬ ಮಾಜಿ ಸಚಿವನ ಅಭಯ ಹಸ್ತ! ದಾದಾ ಖಲಂದರ್ ಹೊಂಗಲ್, ಮೊಹ್ಮದ್ ಗೌಸ್ ಚೌಧರಿ, ಪಿ. ಅಬ್ದುಲ್ ಗಣಿ ಎಂಬುವವರು ಉಚ್ಚ ನ್ಯಾಯಾಲಯದವರೆಗೂ ಈ ವಿಷಯವನ್ನು ಒಯ್ದು ಕಮಿಟಿಗೆ ಚುನಾವಣೆ ನಡೆಸಬೇಕೆಂಬ ಆದೇಶ ತಂದಿದ್ದಾರೆ. ಹುಬ್ಬಳ್ಳಿಯ ಜನ ಲಗದಗನ ದರೋಡೆ ತಂಡ ಮತ್ತೆ ಗೆಲ್ಲದಂತೆ ಮುತುವರ್ಜಿ ವಹಿಸಬೇಕಾಗಿದೆ.

-ದೇವಾನಂದ ಜಗಾಪುರ

ದರ್ಗಾಕ್ಕೆ ಅಂಟಿದ ಚೆಡ್ಡಿ ಡಾ. ತಲವಾಯಿ

ಇದೊಂದು ಪಕ್ಕಾ ಸಂಘಪರಿವಾರದ ಹುಳ. 1965ರಿಂದಲೂ ಈ ಡಾ. ತಲವಾಯಿ ಎಂಬ ಚೆಡ್ಡಿ ದರ್ಗಾಕ್ಕೆ ಅಂಟಿಕೊಂಡಿದೆ. 1960ರಲ್ಲಿ ಅಂಜುಟಗೇರಿಯ ಕಾಸೀಮಸಾಬ್ ಎಂಬ ಪೈಲ್ವಾನ್‌ನಿಗೆ 10'X10' ಅಳತೆಯ ದರ್ಗಾ ಜಾಗವನ್ನು ಬಾಡಿಗೆ ಆಧಾರದ ಮೇಲೆ ನೀಡಿದ್ದರು. ಈ ಪೈಲ್ವಾನ್ ಸಿದ್ಧಾರೂಢ ಸ್ವಾಮಿಯ ಭಕ್ತನೂ ಆಗಿದ್ದ. ಸಿದ್ಧಾರೂಢ ಮಠದಲ್ಲಿ ಈ ಪೈಲ್ವಾನನಿಗೆ ಚೆಡ್ಡಿ ಡಾ. ತಲವಾಯಿ ತಗುಲಿಕೊಂಡಿತು. ಪೈಲ್ವಾನ್ ಕಾಸೀಮಸಾಬನನ್ನು ಊರು ಬಿಡುವಂತೆ ಮಾಡಿದ ಚೆಡ್ಡಿ ಚತುರ ಡಾ. ತಲವಾಯಿ ಕಾಸೀಮಸಾಬ ಬಾಡಿಗೆಗಿದ್ದ ದರ್ಗಾದ ಜಾಗಕ್ಕೆ ತಾನೇ ಒಡೆಯನಾದ. ಪಿ. ಅಬ್ದುಲ್ ಗಣಿ ಎಂಬುವವರು ಕಮಿಟಿ ಚೇರ್ಮನ್ ಆಗಿರುವವರೆಗೂ ಚೆಡ್ಡಿ ತಲವಾಯಿ 200 ರೂ. ವಾರ್ಷಿಕ ಬಾಡಿಗೆ ನೀಡುತ್ತಿದ್ದ.

ನಂತರ ಚೇರ್ಮನ್‌ನಾಗಿ ಬಂದ ನೋಡಿ ಲಗದಗ ಎಂಬ ದರೋಡೆಕೋರ. ಅಲ್ಲಿಗೆ ಚೆಡ್ಡಿ ತಲವಾಯಿಗೆ ಶುಕ್ರದೆಸೆ ಆರಂಭವಾಯ್ತು, ಲಗದಗನೊಡನೆ ದೋಸ್ತಿ ಮಾಡಿದ ಚೆಡ್ಡಿ ವಾರ್ಷಿಕ ಬಾಡಿಗೆ ಕಟ್ಟುವುದನ್ನು ನಿಲ್ಲಿಸಿದ. ನಂತರದ ದಿನಗಳಲ್ಲಿ ಇದು ಸರಕಾರದ ಜಾಗ, ನಾನು ಮೊದಲಿನಿಂದಲೂ ಇಲ್ಲಿ ಬಾಡಿಗೆಗೆ ಇರುವುದರಿಂದ ಈ ಜಾಗ ಖರೀದಿಸಲು ನನಗೆ ಅನುಮತಿ ಕೊಡಿ ಎಂದು ಕೋರ್ಟ್ ಮೆಟ್ಟಲೇರಿಬಿಟ್ಟಿದ್ದ ಚೆಡ್ಡಿ ತಲವಾಯಿ! ಬಾಡಿಗೆಗೆಂದು 10'X10' ಜಾಗಪಡೆದ ಈ ತಲವಾಯಿ 100'X100' ಜಾಗವನ್ನು ಕಬಳಿಸಿಬಿಟ್ಟಿದ್ದಾನೆ. ಇದರಲ್ಲಿ 28 ಮನೆ, 7 ಅಂಗಡಿ ಕಟ್ಟಿಸಿ ಬಾಡಿಗೆಗೆ ಕೊಟ್ಟಿದ್ದಾನೆ. ಪ್ರತಿ ಅಂಗಡಿಗೆ 30 ಸಾವಿರ ಡಿಪಾಜಿಟ್, 3 ಸಾವಿರ ಬಾಡಿಗೆಯಾದರೆ, ಪ್ರತಿ ಮನೆಗೆ 10 ಸಾವಿರ ಡಿಪಾಜಿಟ್, ಸಾವಿರ ರೂ. ಬಾಡಿಗೆ ಬರುತ್ತಿದೆ! ಭ್ರಷ್ಟ ಕಾರ್ಪೋರೇಷನ್ ಅಧಿಕಾರಿಗಳು ಈ ಚೆಡ್ಡಿಯ ಪರವೇ ಇದ್ದಾರೆ. ಹೇಗಾದರೂ ಮಾಡಿ ಇನ್ನೊಂದಿಷ್ಟು ಜಾಗ ಕಬಳಿಸಲು ಯೋಚಿಸಿ ರುವ ಈ ತಲವಾಯಿ ಪಿಳ್ಳೆನವ ತೆಗೆದು ಕೋಮು ಗಲಭೆಗಳಿಗೂ ಕಾರಣವಾಗುತ್ತಿದ್ದಾನೆ.

ಆಯೋಧ್ಯೆಯ ರಾಮಮಂದಿರ ಪಕ್ಕದ ಜಾಗವನ್ನೂ ಕದಿಯಬಲ್ಲ ಡಾ. ತಲವಾಯಿಯ ಮೇಲೆ ತುರ್ತಾಗಿ ತನಿಖೆ ಕೈಗೊಳ್ಳಬೇಕಿದೆ. ಹಾಗೆಯೇ 1960ರಲ್ಲಿ ದರ್ಗಾದವರು ರಜಾಕ್‌ಸಾಬ್ ಮುಲ್ಲಾ ಎಂಬಾತನಿಗೆ ಪೆಟ್ರೋಲ್ ಬಂಕ್ ನಡೆಸಲು ಜಾಗ ಕೊಟ್ಟರೆ, ಆ ಮುಲ್ಲಾ ಇಂಡಿ ಎನ್ನುವಾತನಿಗೆ ಆ ಜಾಗ ಕೊಟ್ಟು ಊರುಬಿಟ್ಟ. 5 ವರ್ಷ ಭೂಬಾಡೆ ಕಟ್ಟಿದ ಇಂಡಿ ಫ್ಯಾಮಿಲಿ ಸರಕಾರದಿಂದ ಈ ಜಾಗವನ್ನು ಪಡೆಯಿತೋ ಅಥವಾ ದರ್ಗಾದವರೇ ಆ ಜಾಗ ಕೊಟ್ಟರೋ? ಒಟ್ಟಿನಲ್ಲಿ ಈಗ ಅಲ್ಲಿ ಇಂಡಿ ಪೆಟ್ರೋಲ್ ಬಂಕ್ ಭರ್ಜರಿ ವ್ಯಾಪಾರ ನಡೆಸುತ್ತಿದೆ. ದರ್ಗಾದ ಆಸ್ತಿ ಹೀಗೆ ಯಾರ್‍ಯಾರದೋ ಪಾಲಾಗಿ ಹೋಗುತ್ತಿದೆ.

ಹುಬ್ಬಳ್ಳಿ : ಸುಪ್ರೀಂ ಕೋರ್ಟ್ ಸಲಹೆ

'ಈದ್ಗಾ'-ಇನ್ನೆಷ್ಟು ಬಲಿ ಬೇಕು?

ಈದ್ಗಾ ವಿವಾದ... ಅಮಾಯಕರ ಹೆಣಗಳ ಮೇಲೆ, ರಕ್ತದ ರಂಗೋಲಿಯ ಎದುರೇ ನಿಂತುಕೊಂಡು ಬಂದಿರುವ ಈ ಈದ್ಗಾ ವಿವಾದ ಬಗೆಹರಿಯಲು ಸುಪ್ರೀಂಕೋರ್ಟ್ ಒಳ್ಳೆಯ ಸಲಹೆಯನ್ನೇನೋ ಕೊಟ್ಟಿದೆ. ಆದರೆ ಸ್ಥಳೀಯ ಸಮೀಕರಣಗಳನ್ನು ಬಲ್ಲವರಿಗೆ ಈ ಸಲಹೆ ಕಾರ್ಯಸಾಧುವೆ ಎಂಬ ಪ್ರಶ್ನೆ ಕಾಡತೊಡಗಿದೆ.

ರಾಜ್ಯ ಸರ್ಕಾರ, ಮಹಾನಗರ ಪಾಲಿಕೆ, ವಕ್ಫ್ ಮಂಡಳಿ ಮತ್ತು ಅಂಜುಮನ್ ಇಸ್ಲಾಂ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯೇ ಈದ್ಗಾ ವಿವಾದಕ್ಕೆ ಪರಿಹಾರ ರೂಪಿಸಬಹುದು ಎಂಬರ್ಥದ ಸಲಹೆಯನ್ನು ಸುಪ್ರೀಂ ಕೋರ್ಟ್ ನೀಡಿದೆ. ಈದ್ಗಾ ಮೈದಾನದಲ್ಲಿ ಉದ್ಯಾನವನವೊಂದನ್ನು ನಿರ್ಮಿಸಿ, ವರ್ಷಕ್ಕೆ ಎರಡು ಬಾರಿ (ರಂಜಾನ್, ಬಕ್ರೀದ್ ವೇಳೆ) ಮುಸ್ಲಿಂ ಬಾಂಧವರಿಗೆ ಪ್ರಾರ್ಥನೆ ಸಲ್ಲಿಸಲು ಅವಕಾಶ ಮಾಡಿಕೊಡಲು ಸುಪ್ರೀಂಕೋರ್ಟ್ ಬಯಸಿದೆ. ಆದರೆ ಕೋರ್ಟು, ಸಂವಿಧಾನಗಳನ್ನೆಂದೂ ಗೌರವಿಸದ ಸಂಘರಾಷ್ಟ್ರ ಬೆಂಕಿ ಸವಾಬ ಚೆಡ್ಡಿಗಳು ಅಧಿಕಾರದಲ್ಲಿರುವಾಗ ಸುಪ್ರೀಂ ಕೋರ್ಟ್ ಸಲಹೆಯನ್ನು ಕಾರ್ಯರೂಪಕ್ಕೆ ತರುವುದು ಕಷ್ಟಕರವೇ.



ಈ ಹಿಂದೆ ಇಂತಹ ಸಲಹೆ, ಪ್ರಸ್ತಾಪಗಳನ್ನು ಕೋರ್ಟುಗಳು ನೀಡಿವೆ. ಸರಕಾರಗಳು ಹಲವಾರು ಸಮಿತಿಗಳನ್ನು ರಚಿಸಿ, ಕೋರ್ಟ್‌ಗಳ ಸಲಹೆಯನ್ನು ಕಾರ್ಯರೂಪಕ್ಕೆ ತರಲು ಯತ್ನಿಸಿ ವಿಫಲವಾಗಿವೆ. ಈ ವಿಫಲತೆಗೆ ಕೋಮುವಿವಾದಗಳನ್ನು ಸದಾ ಜೀವಂತವಾಗೇ ಇಟ್ಟು ರಾಜಕೀಯ ಲಾಭ ಪಡೆದುಕೊಳ್ಳುವ ಚೆಡ್ಡಿ ಚಿನಾಲಿಗಳೇ ಕಾರಣಕರ್ತರು ಎಂಬುದು ಅವಳಿ ನಗರಗಳ ಸಾಮಾನ್ಯ ಜನತೆಗೆ ತಡವಾಗಿ ಅರಿವಿಗೆ ಬರುತ್ತಿದೆ. ಈ ಮೊದಲು ಎಚ್.ಕೆ ಪಾಟೀಲ್ ನೇತೃತ್ವದ ಸಮಿತಿ, ಎಸ್.ಆರ್. ಮೋರೆ ನೇತೃತ್ವದ ಸಮಿತಿ, ದಿವಂಗತ ಮೂಜಗಂ ನೇತೃತ್ವದ ಸಮಿತಿಗಳು ಏಕಾಭಿಪ್ರಾಯ ಮೂಡಿಸುವುದರಲ್ಲಿ ವಿಫಲವಾಗಿದ್ದವು. ತಂಟೆಕೋರ ತಗಡು ಸಂಘಪರಿವಾರ ಇರುವಾಗ ಏಕಾಭಿಪ್ರಾಯ ಮೂಡಿಸುವುದು ಸಾಧ್ಯವೇ?

ಈಗಾಗಲೇ ಈದ್ಗಾ ಮೈದಾನ ಉದ್ಯಾನವನದ ರೂಪ ತಾಳುವುದಕ್ಕೆ ಕೋರ್ಟಲ್ಲೇ ಅಂಜುಮನ್ ಸಂಸ್ಥೆ ಆತಂಕ, ಆಕ್ಷೇಪಣೆ ವ್ಯಕ್ತಪಡಿಸಿ, ಈದ್ಗಾ ಗೋಡೆಯ ಸುರಕ್ಷತೆಯ ಬಗ್ಗೆಯೂ ಸಂಶಯ ವ್ಯಕ್ತಪಡಿಸಿದೆ. ತಲೆತಿರುಕ ಮುತಾಲಿಕ್ ಮಾತ್ರ ಈದ್ಗಾ ಉದ್ಯಾನವನ ಆಗುವುದನ್ನು ಸ್ವಾಗತಿಸುತ್ತಾನೆ. ಮರುಕ್ಷಣವೇ ತನ್ನ ವಿಷ ಬುದ್ಧಿ ಹಲ್ಕಾ ಯೋಚನೆಯನ್ನು ಹೊರಕ್ಕೆ ಕಕ್ಕುವ ಈ ಮುತಾಲಿಕ್ "ವರ್ಷಕ್ಕೆರಡು ಬಾರಿ ಪ್ರಾರ್ಥನೆ ನಡೆದರೆ ಉದ್ಯಾನವನಕ್ಕೆ ಧಕ್ಕೆ ಆಗುತ್ತದೆ. ಆದ್ದರಿಂದ ಈದ್ಗಾದ ಗೋಡೆಯನ್ನೇ ಬೇರೆಡೆಗೆ ಸ್ಥಳಾಂತರಿಸಬೇಕು... ನಿರ್ವಹಣಾ ಸಮಿತಿಯಲ್ಲಿ ಇಬ್ಬರು ಹಿಂದೂ ಧರ್ಮದ ಮುಖಂಡರು, ಈಗಿನ ಮೂರು ಸಾವಿರ ಮಠದ ಸ್ವಾಮಿ, ವಿಎಚ್‌ಪಿಯ ನರೇಗಲ್‌ರನ್ನು ಸೇರಿಸಿಕೊಳ್ಳಬೇಕು" ಎಂಬ ವಿನಾಶಕಾರಿ ಸೂತ್ರ ಹೆಣೆಯುತ್ತಾನೆ. ನರೇಗಲ್ ಎಂಬುದು ಮುತಾಲಿಕ್‌ನಷ್ಟೇ ಭೀಕರವಾದ ವೈರಸ್ ಎಂಬುದು ಜಗಜ್ಜಾಹೀರಾಗಿರುವಾಗ ಮಂಗ ಮುತಾಲಿಕ್‌ನ ದುರ್ಬುದ್ಧಿ ಅರ್ಥವಾಗುತ್ತದೆ.

ಉಭಯ ಸಮ್ಮತ ಪರಿಹಾರ ರೂಪಿಸಿಕೊಳ್ಳಿ ಎಂದು ಕೋರ್ಟ್ ಹೇಳಿದೆಯೇ ವಿನಃ ಇಂತಹುದೇ ಪರಿಹಾರ ರೂಪಿಸುವಂತೆ ಸ್ಪಷ್ಟ ನಿರ್ದೇಶನ ನೀಡಿಲ್ಲ ಎಂದು ಸರಕಾರಿ ವಕೀಲ ಸಂಜಯ ಹೆಗಡೆ ಹೇಳುತ್ತಾರೆ.

ಹತ್ತಾರು ಅಮಾಯಕರ ಜೀವ ತೆಗೆದ ಕೋಮುವಾದಿಗಳ ಎಂದೂ ತೀರದ ರಕ್ತದಾಹ ತಣಿಸಲು ಹುಬ್ಬಳ್ಳಿ-ಧಾರವಾಡಗಳ ಜನ ಬಲಿಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ 'ಕೋ-ಜಾ' ಸರಕಾರದ ಮೇಲಿದೆ. ಈದ್ಗಾ ವಿವಾದದಿಂದ ಕಾಂಗ್ರೆಸ್, ಬಜೆಪಿಗಳೆರಡೂ ರಾಜಕೀಯ ಲಾಭ ಗಳಿಸಿವೆ.

ಪ್ರಹ್ಲಾದ ಜೋಶಿ ಎಂಬ ವಂಚಕಭಟ್ಟ ಸಂಸದನಾದ, ಅಶೋಕ ಕಾಟವೆ ಎಂಬ ನಕಲಿ ಮದ್ಯದ ಹುಳ ಶಾಸಕತ್ವದ 'ರುಚಿ' ನೋಡಿತ್ತು, ಇವತ್ತು ಜಗದೀಶ್ ಶೆಟ್ಟರ್ ಎಂಬ ನಿರುಪಯುಕ್ತನೂ ಮಂತ್ರಿಯಾಗಿದ್ದಾನೆ. ಹಾಗೆಯೇ ಹಿಂಡಸಗೇರಿ ಎಂ.ಎಲ್.ಸಿ.ಗಿರಿ ಪಡೆದರೆ, ಹುಬ್ಬಳ್ಳಿ ಶಾಸಕ ಜಬ್ಬಾರ್ ಖಾನ್ ಹೊನ್ನಳ್ಳಿ ಸಚಿವಗಿರಿಯನ್ನೂ ಅನುಭವಿಸಿದ್ದ. ಇವರೆಲ್ಲರೂ ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ಈದ್ಗಾ ವಿವಾದದ ಲಾಭ ಪಡೆಯುತ್ತಲೇ ಬಂದಿದ್ದಾರೆ.

1994ರಲ್ಲಿ ಈದ್ಗಾ ಮೈದಾನದಲ್ಲಿ ಅಂಜುಮನ್ ವತಿಯಿಂದ ರಾಷ್ಟ್ರಧ್ವಜ ಹಾರಿಸಿ, ಜನರಲ್ಲಿ ಒಂದಿಷ್ಟು ನೆಮ್ಮದಿ ಮೂಡಿಸಿದ ಸಾಧನೆ ಮಾಡಿದ ದಳ ಸರಕಾರವೇ ಇವತ್ತು ಅಧಿಕಾರದಲ್ಲಿದೆ. ಆದರೆ ರಾಜಕೀಯ, ಸಾಮಾಜಿಕ ಇಚ್ಛಾಶಕ್ತಿಗಳಿಲ್ಲದ, ಜಾತ್ಯತೀತತೆ ಎಂದರೇನು ಎಂದು ಕೇಳುವ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿರುವಾಗ ಏನನ್ನು ನಿರೀಕ್ಷಿಸಲು ಸಾಧ್ಯ?

ಮಾದಿಗರಿಗೆ ಮೋಸ, ಲಿಂಗಾಯಿತರಿಗೆ ಸಲಾಮು!

ಭಮರಸಾಗರ ಶಾಸಕ ಆಂಜನೇಯ

[illegible] ಕ್ಷೇತ್ರದ ಶಾಸಕ [illegible] ಬಂಗಲ್ಲ ಕುಂತಿದ್ದಾನೆ. ಮಾಜಿ ಶಾಸಕ ಚಂದ್ರಪ್ಪ ಎಂಬ ಗೆ:ವಿಯನ್ನು ಮನೆಗೆ ಕಳುಹಿಸಿ, ಸೋತೂ ಸೋತು ಇದ್ದ ಹಾಳಾ ಕಾಂಗ್ರೆಸ್ ಸಂಸ್ಕೃತಿಯ ಆಂಜನೇಯನನ್ನು ಯಿಸಿದ ತಪ್ಪಿಗೆ ಕ್ಷೇತ್ರದ ಜನ ಪಶ್ಚಾತ್ತಾಪ ಪಡುತ್ತಿದ್ದಾರೆ. ಗತ ಹೆಸರಲ್ಲಿ ರಾಜಕೀಯ ನೆಲೆ ಕಂಡುಕೊಂಡ ಮೇಲ್ಜಾತಿಯ ರಾಜಕೀಯ ನಾಯಕರಿಗೆ ದೊಗ್ಲು ಹೊಡೆಯುತ್ತಾ ತನಗೆ ರಾಜಕೀಯ ಜೀವದಾನ ಮಾದಿಗ ಸಮುದಾಯವನ್ನೇ ನಿರ್ಲಕ್ಷಿಸುತ್ತಿದ್ದಾನೆ. ಮಾತುಗಳನ್ನಾಡುತ್ತಲೇ ಕಂತೆಗಳನ್ನು ಪೇರಿಸಿಕೊಳ್ಳು ಆಂಜನೇಯ ಕಣ್ಣು ಮುಚ್ಚಿ ಹಾಲು ಕುಡಿದರೆ ಗೂ ತಿಳಿಯುವುದಿಲ್ಲವೆಂದೇ ಭಾವಿಸಿದಂತಿದೆ.

ವಣಗೆರೆಯ ಗಾಂಧಿನಗರದಿಂದ ಫೀಲ್ಡ್‌ವರ್ಕ್ ಆರಂ ಆಂಜನೇಯ ಮೊದಲು ತಾನು ಪತ್ರಕರ್ತನೆಂದು ಂಡು ಶಾಮನೂರು ಬಂಟರ ಪಾಳೆಯದಲ್ಲಿ ಜಮೆ ಮುನಿಸಿಪಾಲಿಟಿ ಕೌನ್ಸಿಲರ್ ಆಗಿ, ತನ್ನ ಗಾಡ್‌ಫಾದರ್ ೂರ್‌ಗೆ ಸೈಡ್ ಹೊಡೆದು ಯುವ ಕಾಂಗ್ರೆ ಜಿಲ್ಲಾ ನಲ್ಲಿ ಗುರುತಿಸಿಕೊಂಡ. ಶಾಮನೂರರಂತಹ ಆಲದ ಕೆಳಗೆ ಬೆಳೆಯುವುದು ಕಷ್ಟವೆನಿಸಿ ನಿಯ ಕಡೆ ಪ್ರಯಾಣ ಬೆಳೆಸಿ, ಲ್ ಲಿಂಕುಗಳ ಕೃಪಾಕಟಾಕ್ಷದಿಂದ ಯುವ ಕಾಂಗ್ರೆ ಅಧ್ಯಕ್ಷನಾದ. ಾಂಡ್‌ನಲ್ಲಿ ದೊಂಬಿ ರಾಜಕಾರಣ ೇ ಚಲಾವಣೆಯಲ್ಲಿದ್ದ ಆಂಜ ತನ್ನ ನಟೋರಿಯಸ್ ಹಿನ್ನೆಲೆ ಲೇ ಟಿಕೆಟ್ ಪಡೆದು ಎರಡು ಸೋತಿದ್ದ. ಈತ ಪಕ್ಷ ಸಂಘಟಿಸಿ ಪಡೆದಿದ್ದಕ್ಕಿಂತಾ ಪುಂಡಾಟಿಕೆ ಖ್ಯಾತಿ ಪಡೆದಿದ್ದೇ ಹೆಚ್ಚು. ದ್ದ ದಲಿತಪರ ಇಮೇಜು, ನಟೋ ಹಿನ್ನೆಲೆ, ಶಾಮನೂರರ ಅವ ಕಾರಣದಿಂದ ಎರಡು ಬಾರಿಯೂ ಗೆಲುವನ್ನು ಾಗಿರಲಿಲ್ಲ. ಎರಡನೆ ಬಾರಿಯ ಸೋಲಿನಿಂದಾಗಿ ಜಕೀಯ ಅಸ್ತಿತ್ವವೇ ಕುಸಿದಂತಾಗಿ ತಿಂಗಳಾನುಗಟ್ಟಲೆ ಹಿಡಿದಿದ್ದ. ಎಸ್.ಎಂ. ಕೃಷ್ಣರ ಆಡಳಿತದ ಕೊನೆಯ ಲ್ಲಿ ಕಾಡಿ ಬೇಡಿ ಪಡೆದ ಎಸ್ಸೀಎಸ್ಟಿ ಅಭಿವೃದ್ಧಿ ದ ಅಧ್ಯಕ್ಷಗಿರಿ ಈತನಿಗೆ ಒಂದಿಷ್ಟು ಪ್ರಾಣವಾಯು ದರೂ ಅವಧಿಗೆ ಮುನ್ನವೇ ಚುನಾವಣೆ ಘೋಷಿಸಿದ್ದ ಕಂಗಾಲಾಗಿದ್ದ. ಕಳೆದ ಚುನಾವಣೆಯಲ್ಲಿ ಮತ್ತೆ ಿಂದ ಸ್ಪರ್ಧಿಸಲು ಟಿಕೆಟ್‌ಗಾಗಿ ಹರಸಾಹಸಗಳನ್ನು ದರೂ ಪ್ರಯೋಜನವಾಗಲಿಲ್ಲ. ಎಸ್.ಎಂ. ಕೃಷ್ಣ ಗೆರೆಗೆ ಬಂದಾಗ ತನ್ನ ಬೆಂಬಲಿಗರಿಂದ ಆಂಜನೇಯ ಕೆಟ್ ಕೊಡುವಂತೆ ಒತ್ತಾಯಿಸಿ ದೊಂಬಿ ಎಬ್ಬಿಸಿದ್ದ. ಂಬಿಯಲ್ಲಿ ಎಸ್.ಎಂ. ಕೃಷ್ಣರ ಕಾರಿಗೂ ಕಲ್ಲುಗಳನ್ನು ಗಿತ್ತು, ಇದನ್ನು ಗಂಭೀರವಾಗಿ ಪರಿಗಣಿಸಿ ಆಂಜನೇಯ ಅಮಾನತುಗೊಳಿಸಿ ತಲೆದಂಡ ಪಡೆಯಲಾಗಿತ್ತು. ವೂ ತನಗಿದ್ದ ಜಮಾನಾದ ಪ್ರಭಾವ, ಲಿಂಕುಗಳನ್ನೆಲ್ಲಾ ಜನಾರ್ಧನ ಪೂಜಾರಿಯವರ ಬಳಿ, ದೆಹಲಿ ನಾಯಕ ಳ ಬಳಿ ಎಡತಾಕಿದರೂ ಟಿಕೆಟ್ ತರುವ ಪ್ರಯತ್ನ ಇಲ್ಲ!

ದಾರ ಚನ್ನಯ್ಯ ಶ್ರೀಗಳ ಸಹಾಯ ಹಸ್ತ

ದಾಗಲೇ ಮಾದಾರ ಗುರುಪೀಠದ ಕಾರ್ಯದರ್ಶಿಯೂ ಆಂಜನೇಯರ ಪರವಾಗಿ ಖುದ್ದು ಮಾದಾರ ಚನ್ನಯ್ಯ ಜನಾರ್ಧನ ಪೂಜಾರಿಯವರ ಬಳಿ ಹೋಗಿ ನೀಡಬೇಕೆಂದು ಕೇಳಿದರೂ ಪ್ರಯೋಜನವಾಗಿರಲಿಲ್ಲ. ಇದೇ ಮಾದಾರ ಚನ್ನಯ್ಯ ಶ್ರೀಗಳ ಸಲಹೆ ಸಂಯುಕ್ತ ಜನತಾದಳ ಸೇರಲು ನೋಡಿದರೂ ಹಾದಿ ಸುಗಮವಾಗಿರಲಿಲ್ಲ. ಕೇವಲ ಆರು ತಿಂಗಳ ನಡೆದಿದ್ದ ವಿಧಾನ ಪರಿಷತ್ ಚುನಾವಣೆಯಲ್ಲಿ ಈ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಬಿ.ಟಿ. ಚನ್ನಬಸಪ್ಪನ ಕಾಂಗ್ರೆಸ್ ಪರವಾಗಿ ಸಕಲಿ ಮತದಾನ ಮಾಡಿಸಿ ಕಗ್ಗೆಗಳಲ್ಲಿ ಮರುಚುನಾವಣೆಗೆ ಕಾರಣಕರ್ತರಾಗಿದ್ದ [illegible] ಟಿಕೆಟ್ ಕೇಳುವ ನೈತಿಕತೆ ಉಳಿದುಕೊಂಡಿರಲಿಲ್ಲ.

[illegible] ಕೆರಳಿದ ಮಾದಾರ ಶ್ರೀಗಳು ಹೇಳಿದುದಕ್ಕೆಲ್ಲಾ ಮರೆತು ಜೆಡಿಯುನಿಂದ [illegible]

ಲಾಭ ಪಡೆದು ಎರಡು ಅವಧಿಯ ಕಾಲ ಶಾಸಕನಾಗಿದ್ದ ಚಂದ್ರಪ್ಪ ತನ್ನ ಹುಂಬತನ, ಧಿಮಾಕಿನ ನಡವಳಿಕೆಯಿಂದ ಬಿ.ಟಿ.ಸಿ. ಕ್ಯಾಂಪಿನಿಂದ ದೂರವಾಗಿ ಕಾಂಗ್ರೆಸ ಅಂಗಳಕ್ಕೆ ಜಿಗಿದಿದ್ದರಿಂದ ಬಿ.ಟಿ.ಸಿ. ಕ್ಯಾಂಪು ಚಂದ್ರಪ್ಪನ ವಿರುದ್ಧ ಗೆಲ್ಲಬಹುದಾದ ಅಭ್ಯರ್ಥಿಯೊಬ್ಬರ ಹುಡುಕಾಟದಲ್ಲಿತ್ತು, ಭರಮಸಾಗರ ಕ್ಷೇತ್ರದಲ್ಲಿ ಎರಡು ಬಾರಿ ಸೋತವನೆಂಬ ಅನುಕಂಪವೂ ಆಂಜನೇಯರ ಕಡೆಗಿತ್ತಾದ್ದರಿಂದ ಅದೃಷ್ಟ ಕೂಡಿ ಬಂದಿತ್ತು.

ಬಿ.ಟಿ.ಸಿ. ಹಣಬಲ- ದಲಿತರ ಓಟಿನ ಬಲ

ಬಿ.ಟಿ. ಚನ್ನಬಸಪ್ಪನವರ ಹಣ ಬಲ, ದಲಿತರ ಓಟಿನ ಬಲ ಏಕಕಾಲಕ್ಕೆ ಒದಗಿ ಬಂತು. ಮಾದಾರ ಚನ್ನಯ್ಯ ಶ್ರೀಗಳು ತಾವೊಬ್ಬ ಧರ್ಮಗುರು ಎಂಬುದನ್ನೂ ಮರೆತು ಹಗಲು-ರಾತ್ರಿ ತಿರುಗಾಡಿ ಚುನಾವಣಾ ನಿಧಿ ಸಂಗ್ರಹಿಸಿದರು. ಮಾದಿಗರ ಮುಖಂಡರ ಸಭೆ ಕರೆದು "ಇದು ಕೊನೆ ಅವಕಾಶ. ನಮ್ಮ ಜನಾಂಗಕ್ಕೆ ಮತ್ತೆಂದೂ ಇಂತಹ ಅವಕಾಶ ಸಿಗುವುದಿಲ್ಲ. ಪಕ್ಷ ಯಾವುದಾದರೂ ಆಗಲಿ ಆಂಜನೇಯರನ್ನು ಗೆಲ್ಲಿಸಿ" ಎಂದು ಭಿನ್ನವಿಸಿಕೊಂಡರು. ಮಾದಿಗರ ಕೇರಿಗಳನ್ನೆಲ್ಲ ಎಡತಾಕಿದರು. ಭೀಮಸಮುದ್ರದ ಅಡಿಕೆ ಧಣಿಗಳ ಒತ್ತಾಸೆಯಿಂದ ಮೇಲ್ಜಾತಿಗಳ ಓಟು ಬಂದರೆ, ಇತ್ತ ಮಾಜಿ ಸಚಿವ ಶಿವಮೂರ್ತಿ ನಾಯ್ಕ, ಶಾಸಕ ಚಂದ್ರಪ್ಪನ ದಲಿತ ವಿರೋಧಿ-ಅದರಲ್ಲೂ ಮಾದಿಗ ಸಮುದಾಯ ವಿರೋಧಿ-ಧೋರಣೆಗಳಿಂದ ಬೇಸತ್ತಿದ್ದ, ಅಭಿವೃದ್ಧಿಯ ಯಾವ ಫಲವೂ ಕೈಗೆ ಸಿಗದೆ ಅವಕಾಶ ವಂಚಿತರಾಗಿದ್ದ ಮಾದಿಗ ಸಮುದಾಯ ಹಿಂದೆಂದೂ ಇಲ್ಲದ ಒಗ್ಗಟ್ಟನ್ನು ಪ್ರದರ್ಶಿಸಿ ಆಂಜನೇಯರ ಗೆಲುವನ್ನು ನಿರ್ಣಾಯಕವಾಗಿಸಿದವು.

ಆಂಜನೇಯ ಗೆದ್ದ ನಂತರ ಮಾದಿಗ ಸಮುದಾಯದ ಕಷ್ಟನಷ್ಟಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸುವ ಬದ್ಧತೆ ತೋರಿಸಬೇಕಿತ್ತು. ಹಾಗಾಗದೇ ಅಡಿಕೆ ಧಣಿಗಳು, ಮೇಲ್ಜಾತಿಯ ನಾಯಕರೊಂದಿಗಿನ ಒಡನಾಟಗಳೇ ಮೇಲುಗೈ ಪಡೆದು ದಲಿತರನ್ನು ನಿರ್ಲಕ್ಷಿಸತೊಡಗಿದರು. ಮಾದಿಗರ ಪರ ಕೆಲಸ ಮಾಡಿದರೆ ಮಾದಿಗರ ಪರ ಎಂಬ ಹಣೆ ಪಟ್ಟಿ ಬೀಳುತ್ತದೆ ಎಂದು ಭಾವಿಸಿ ಮೇಲ್ಜಾತಿಯ ಅದರಲ್ಲೂ ಲಿಂಗಾಯತರ ಓಲೈಕೆಗೆ ಮುಂದಾದರು. ಅವರ ಮಾತುಗಳೇ ವೇದವಾಕ್ಯ. ಹೋದಲ್ಲಿ ಬಂದಲ್ಲಿ ಅವರದೇ ಕಾರುಬಾರು. ಕ್ಷೇತ್ರದಲ್ಲಿ ಏನು ಮಾಡಬೇಕು, ಏನು ಮಾಡಬಾರದು ಎಂಬುದನ್ನು ತೀರ್ಮಾನಿಸುವವರೂ ಅವರೇ ಆದರು.

ಸಹಾಯ, ಸಹಕಾರ, ಸವಲತ್ತು ಕೇಳಿ ಬರುವ ದಲಿತರಿಗೆ ಬಾಯಿ ಪ್ರಚಾರದ ಮಾತುಗಳು, ಹುಸಿಭರವಸೆಗಳು ಪುಂಖಾನುಪುಂಖವಾಗಿ ಸಿಕ್ಕವು. ಖಾರವಾಗಿ ಪ್ರಶ್ನಿಸುವವರಿಗೆ ಎಕ್ಕಾಮಕ್ಕಾ ಬೈಗುಳಗಳ ಸುರಿಮಳೆ ಆಗಲಾರಂಭಿಸಿತು. ದಲಿತರ ಹಿತಾಸಕ್ತಿಗಳು ವ್ಯವಸ್ಥಿತವಾಗಿ ಮೂಲೆಗೆ ತಳ್ಳಲ್ಪಟ್ಟವು. ಭರಮಸಾಗರದ ಕ್ಷೇತ್ರದ ಸ್ಥಿತಿಗತಿಗಳನ್ನು ದಲಿತರ ಕೇರಿಗಳ ಹಿಂದುಳಿದಿರುವಿಕೆಯನ್ನು ನೋಡಲು ಸಾಕ್ಷಾತ್ ಸಮೀಕ್ಷೆಗೆ ಹೋಗಬೇಕು.

ಇಡೀ ಕ್ಷೇತ್ರದಾದ್ಯಂತ ಮಂಜೂರಾಗುವ ಕೋಟ್ಯಂತರ ರೂಪಾಯಿ ಅಭಿವೃದ್ಧಿ ಕಾಮಗಾರಿಗಳ ಗುತ್ತಿಗೆಗಳನ್ನು ಮೇಲ್ಜಾತಿಯ ಪ್ರಭಾವಿಗಳಿಗೆ, ತನ್ನ ಬಾಲಬಡುಕರಿಗೆ, ಕೆಲಸ ಮಾಡದೆ ಪರ್ಸೆಂಟೇಜ್ ಕೊಡುವವರಿಗೆ ದಯಪಾಲಿಸಲಾರಂಭಿಸಿದರು. ಇತ್ತ ಚಿತ್ರದುರ್ಗ, ಅತ್ತ ದಾವಣಗೆರೆ ತಾಲ್ಲೂಕು ಆಫೀಸುಗಳಲ್ಲಿ ತನ್ನ ಕಾರುಬಾರು ಸ್ಥಾಪಿಸಲು ಮುಂದಾದರು. ಇದೇ ಕಾರಣಕ್ಕೆ ಚಿತ್ರದುರ್ಗ ಶಾಸಕ ತಿಪ್ಪಾರೆಡ್ಡಿಯೊಂದಿಗೆ ಸಂಘರ್ಷಕ್ಕೆ ಇಳಿದರು. ಅಧಿಕಾರಿಗಳ [illegible] ಕನ್ನದ ಅಧಿಕಾರಿಗಳಿಗೆ ಧಮಕಿ ಹೊಡೆಯಲಾರಂಭಿಸಿದರು. ತಿಪ್ಪಾರೆಡ್ಡಿಗೆ ಮಣೆ ಹಾಕುವ ಅಧಿಕಾರಿಗಳನ್ನ ಕಾಡಲಾರಂಭಿಸಿದರ.

ಬದಲಾದ ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಜೆಡಿಯುನ ಬಿ.ಟಿ. ಚನ್ನಬಸಪ್ಪ ಜೆಡಿಎಸ್‌ಗೆ ಸೇರಿದರೂ ಆಂಜನೇಯ ಜೆಡಿಯೂನಲ್ಲೇ ಉಳಿದರು. ಜೆಡಿಎಸ್ ಸೇರ್ಪಡೆಯಿಂದ ಲಾಭವಿಲ್ಲ ಎಂಬ ಗ್ರಹಿಕೆಯೇ ಇದಕ್ಕೆ ಕಾರಣವಾಗಿತ್ತು. ಈ ಮಧ್ಯೆ ಬಿ.ಟಿ. ಚನ್ನಬಸಪ್ಪ ಮತ್ತು ಜಿ.ಎಂ. ಸಿದ್ದೇಶ್ ನಡುವಿನ ಭಿನ್ನಾಭಿಪ್ರಾಯಗಳು ತಲೆಯಿತ್ತಿದಾಗ ಈ ಆಂಜನೇಯ ತನ್ನನ್ನು ರಾಜಕೀಯವಾಗಿ ಪೊರೆದ ಬಿ.ಟಿ. ಚನ್ನಬಸಪ್ಪನವರಿಗೆ ಕೈಕೊಟ್ಟು ಜಿ.ಎಂ. ಸಿದ್ದೇಶ್ ತೆಕ್ಕೆಗೆ ಬಿದ್ದರು. ಆಂಜನೇಯರ ಈ ಹಾವು ಏಣಿ ಆಟದ ರಾಜಕೀಯ, ದಲಿತರ ಬಗೆಗಿನ ನಿರ್ಲಕ್ಷ್ಯದ ಧೋರಣೆ ಕ್ಷೇತ್ರದ ಜನರಲ್ಲಿ ಅಸಹನೆಯನ್ನುಂಟು ಮಾಡಿತ್ತು. ಪರಿಣಾಮ ಕಳೆದ ಜಿ.ಪಂ., ತಾ.ಪಂ. ಚುನಾವಣೆಗಳಲ್ಲಿ ತನ್ನ ಅಭ್ಯರ್ಥಿಗಳ ಪರ ಮತ ಕೇಳಲು ಹೋದ ಆಂಜನೇಯ ಬಹಳಷ್ಟು ಕಡೆ ಪ್ರತಿರೋಧ ಎದುರಿಸಬೇಕಾಯಿತು. ಜನ ಹಿಗ್ಗಾ-ಮುಗ್ಗಾ ತರಾಟೆಗೆ ತೆಗೆದುಕೊಂಡರು. ದಲಿತರ ಕೇರಿಗಳಲ್ಲಂತೂ ನಮಗಾಗಿ ಏನು ಮಾಡಿದ್ದೀರಿ? ನಮ್ಮ ಜನಾಂಗದ ಉದ್ಧಾರ ಮಾಡ್ತೀನಿ ಅಂತಾ ಓಟು ಹಾಕಿಸ್ಕೊಂಡು ಹೋದ್ರಲ್ಲಾ. ಆಮೇಲೆ ಈ ಕಡೆ ತಿರುಗಿ ಸಹಾ ನೋಡಿಲ್ಲ ಎಂದು ಎಕ್ಕಾಮಕ್ಕಾ ಚಾರ್ಜ್ ಮಾಡಿದರು.

ಚುನಾವಣೆಗೆ ಸ್ಪರ್ಧಿಸಿದ್ದ ಅಭ್ಯರ್ಥಿಗಳಿಗೆ ನೇರವಾಗಿ ನೀವು ಶಾಸಕರ ಜೊತೆ ಬಂದರೆ ಓಟು ಹಾಕುವುದಿಲ್ಲ ಎಂದು ಮುಖಕ್ಕೆ ಹೊಡೆದಂತೆ ಹೇಳಿದರು. ಇದರ ಪರಿಣಾಮವೇ ಒಂದಿಬ್ಬರು ಹೊರತುಪಡಿಸಿ ಮಕಾಡೆ ಮಲಗಿದರು.

ಜಿ.ಎಂ. ಸಿದ್ದೇಶ್ ಕ್ಯಾಂಪಿಗೆ ಬಿದ್ದಾಕ್ಷಣ ತಾನಿನ್ನು ರಾಜಕೀಯವಾಗಿ ಸೇಫ್ ಎಂದು ಬೀಗುತ್ತಿರುವಾಗಲೇ ಜೆಡಿಎಸ್-ಬಿಜೆಪಿ ಮೈತ್ರಿಕೂಟದ ಸರ್ಕಾರ ಆಡಳಿತದ ಚುಕ್ಕಾಣಿ ಹಿಡಿಯುವ ಸನ್ನಿವೇಶ ನಿರ್ಮಾಣವಾಗಿ ಜೆಡಿಎಸ್ ಸೇರದೆ ತಪ್ಪು ಮಾಡಿದೆನೆಂದು ಹಪಾಹಪಿಸ ತೊಡಗಿದರು. ಶಿವರಾತ್ರಿ ಪೂಜೇಲಿ ಕರಡಿಬಿಟ್ಟಂತೆ ಮೈತ್ರಿ ಸರ್ಕಾರ ರಚನೆಯ ಉತ್ಸಾಹದಲ್ಲಿ ಜೆಡಿಎಸ್-ಬಿಜೆಪಿ ಶಾಸಕರು ಸಭೆ ನಡೆಸುತ್ತಿದ್ದ ಹೋಟೆಲು-ರೆಸಾರ್ಟುಗಳಿಗೆಲ್ಲಾ ಹೋಗಿ ಜೆಡಿಯು ಬೆಂಬಲ ತಗೊಳ್ಳಿ ಎಂದು ದುಂಬಾಲು ಬಿದ್ದು ಹಾಸ್ಯಾಸ್ಪದರಾದರು. ಆದರೂ ಗೂಟದ ಕಾರಿನ ಕನಸು ನನಸಾಗಲಿಲ್ಲ.


ಅಂಬೇಡ್ಕರ್-ಬಸವಣ್ಣನೆಂಬ ಆಪದ್ಬಾಂದವರು

ಹಿಂದುಳಿದ ವರ್ಗಗಳ ಉದ್ಧಾರ, ಸಾಮಾಜಿಕ ನ್ಯಾಯದ ಬಗ್ಗೆ ಸೊಗಸಾಗಿ ಮಾತನಾಡುವ ಆಂಜನೇಯರಿಗೆ ಅಂಬೇಡ್ಕರ್-ಬಸವೇಶ್ವರರಿಬ್ಬರೂ ಆಪದ್ಬಾಂದವರಾಗಿಬಿಟ್ಟದ್ದಾರೆ. ದಲಿತರು ಬಂದಾಗ ಅಂಬೇಡ್ಕರ್ ಅಪರಾವತಾರದಂತೆ ಮಾತನಾಡಿದರೆ, ಲಿಂಗಾಯತರು ಬಂದಾಗ ಸಾಕ್ಷಾತ್ ಬಸವೇಶ್ವರರೇ ಪರಕಾಯ ಪ್ರವೇಶ ಮಾಡಿದಂತಾಗಿ ವಚನಗಳ ಅಣಿಮುತ್ತುಗಳನ್ನು ಉದುರಿಸಲಾರಂಭಿಸುತ್ತಾರೆ. ಲಿಂಗಾಯತರು-ದಲಿತರು ಒಟ್ಟಿಗೆ ಬಂದಾಗ ಅಂಬೇಡ್ಕರ್‌ರನ್ನು ಗೌಣವಾಗಿಸಿ ಬಸವೇಶ್ವರತ್ತ ವಾಲುತ್ತಾರೆ. ಈ ದ್ವಿಪಾತ್ರಭಿನಯದ ಸಂದರ್ಭ ಬಂದಾಗ ಆಂಜನೇಯರ ಚಡಪಡಿಕೆಯನ್ನು ಖುದ್ದಾಗಿ ನೋಡಿಯೇ ಆನಂದಿಸಬೇಕು.

ಸ್ವಭಾವತಃ ಜಿಪುಣಾಗ್ರೇಸರನಾಗಿರುವ ಆಂಜನೇಯರಿಗೆ ಬಸವಣ್ಣನವರ ಸರಳತೆ ಮೋಡಿ ಮಾಡಿ ಬಿಟ್ಟಿದೆ. ಸರಳತೆಯ ಬಗ್ಗೆ ಉದ್ದಾನುದ್ದ ಮಾತನಾಡುತ್ತಲೇ ಬೆಂಗಳೂರಿನ ತಿಪ್ಪಸಂದ್ರ ಕಾಲೋನಿಯಲ್ಲಿ ಕೇವಲ ಒಂದು ಕೋಟಿ ಬೆಲೆಬಾಳುವ ಮನೆ ಕಟ್ಟಿಸಿದ್ದಾರೆ. ಶಾಸಕರಾಗಿ ಎರಡು ವರ್ಷಗಳಾಗುವ ಹೊತ್ತಿಗೆ ಎರಡು ತಲೆಮಾರುಗಳಿಗಾಗುವಷ್ಟು ಸಂಪತ್ತು ಮಾಡಿದ್ದಾರೆ. ಈ ಸಂಪತ್ತನ್ನು ಲೋಕಾಯುಕ್ತರ ತಂಡಕ್ಕೂ ತಲಾಶ್ ಮಾಡುವುದು ಕಷ್ಟ ಎಂದೇ ಹೇಳಲಾಗುತ್ತಿದೆ.

ಏನಾದರಾಗಲೀ ತಮ್ಮ ರಾಜಕೀಯ ಜೀವಿತಾವಧಿಯುದ್ದಕ್ಕೂ ಭಟ್ಟಂಗಿ ರಾಜಕಾರಣದ ಪ್ರತಿನಿಧಿಯಾಗಿ, ಶಕ್ತಿ ರಾಜಕಾರಣದ ದಾಳವಾಗಿ ಬೆಳೆಯುತ್ತಾ ಬಂದ ಆಂಜನೇಯ ಭರಮಸಾಗರ ಕ್ಷೇತ್ರದ ಜನರನ್ನು ಉದ್ಧಾರ ಮಾಡದಿದ್ದರೂ ತಾವು ಮಾತ್ರ ಭದ್ರ ನೆಲೆ ಕಂಡುಕೊಂಡಿದ್ದಾರೆ. ಭರಮಸಾಗರ ಕ್ಷೇತ್ರದ ಜನರ ಆಶೀರ್ವಾದ ಆಂಜನೇಯರ ಬದುಕು-ಭವಿಷ್ಯದ ಅನಿಶ್ಚಿತತೆಗಳನ್ನೆಲ್ಲಾ ಹೋಗಲಾಡಿಸಿದೆ. ಆಂಜನೇಯ ಸುಖವಾಗಿದ್ದಾರೆ [illegible]

-[illegible]



ಮಲೆನಾಡು

ಗಣಿಗಾರಿಕೆಯ ಹೂಳು, ಭದ್ರಾ ಡ್ಯಾಮ್ ಹೋಳು?

ಹೌದು, ಈಗ ಇಂತಹ ಒಂದು ಆತಂಕ ಹೆಚ್ಚುತ್ತಿದೆ. ಕುದುರೆಮುಖ ಗಣಿಗಾರಿಕೆಯಿಂದ ಲಕ್ಯಾ ಡ್ಯಾಮ್‌ನಲ್ಲಿ 450 ದಶಲಕ್ಷ ಟನ್‌ಗಳಿಗೂ ಹೆಚ್ಚು ಹೂಳು ಸೇರಿಕೊಂಡಿದ್ದು, ಈ ಸಾರಿ ಬೀಳಲಿರುವ ಮಳೆ ಗುಡ್ಡಗಳ ಮೇಲಿರುವ ಲಕ್ಷಾಂತರ ಟನ್ ಮಣ್ಣನ್ನು ಹೊತ್ತು ತಂದುಬಿಟ್ಟರೆ? ಭದ್ರಾ ಸ್ಫೋಟಿಸಿಬಿಟ್ಟರೆ? ಲಕ್ಯಾ ಡ್ಯಾಮ್ ಛಿದ್ರಗೊಂಡರೆ? ಎಂಬ ಪ್ರಶ್ನೆಗಳು ಏಳಲು ಕಾರಣವಾಗಿದ್ದು ಕುದುರೆಮುಖ ಗಣಿಗಾರಿಕೆ ಕಂಪನಿಯೇ..36 ವರ್ಷಗಳ ಕಾಲ ಪರಿಸರ ಸಂರಕ್ಷಣೆ ಕುರಿತು ಕಿಂಚಿತ್ತೂ ಗಮನ ಹರಿಸದೇ ಭೂಗರ್ಭವನ್ನು ಗೆಬರುತ್ತಾ, ಹಸಿರು ಗುಡ್ಡಗಳನ್ನು ಬೋಳಿಸುತ್ತಾ ಸಾಗಿದ್ದರ ಪರಿಣಾಮದಿಂದ ಭದ್ರಾ ನದಿಯ ಜೀವಂತಿಕೆಗೇ ಕುತ್ತು ಬಂದಿದೆ.

ಕುದುರೆಮುಖ ಸಮೀಪದ ನೆಲ್ಲಿಬೀಡು, ಗಂಗಡಿಕಲ್ಲು ಬೆಟ್ಟಗಳ ಮಧ್ಯೆ ಹುಟ್ಟುವ ತುಂಗ-ಭದ್ರ ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ, ಹಾವೇರಿ, ಗದಗ, ಬಳ್ಳಾರಿ, ಕೊಪ್ಪಳ, ರಾಯಚೂರು ಸೇರಿದಂತೆ ಆಂಧ್ರದ ಪ್ರಕಾಶಂ ಜಿಲ್ಲೆವರೆಗೂ ಹರಿಯುತ್ತದೆ ; 25 ಲಕ್ಷ ಎಕರೆಗೂ ಅಧಿಕ ಭೂಮಿಗೆ ನೀರುಣಿಸುತ್ತದೆ. ಇಂತಹ ನದಿಯ ಉಗಮ ಪ್ರದೇಶದಲ್ಲಿ ಕೆ.ಐ.ಓ.ಸಿ.ಎಲ್ 15 ಸಾವಿರ ಹೆಕ್ಟೇರ್‌ಗೂ ಹೆಚ್ಚು ಅರಣ್ಯ ನಾಶ



ಮಾಡಿ ಗುಡ್ಡಗಳನ್ನು ಅಗೆದಿದೆ. ಅಗೆದ ಲಕ್ಷಾಂತರ ಟನ್ ಮಣ್ಣು ಹಾಗೇ ಬಿದ್ದಿದೆ. ಈ ಎರಡು ತಿಂಗಳಲ್ಲಿ ಸುರಿಯುವ ಮಳೆಯಿಂದ ಈ ಮಣ್ಣೆಲ್ಲಾ ಭದ್ರಾ ನದಿಗೆ ಬಂದು ಸೇರಲಿದೆ. ಈಗಾಗಲೇ ಭದ್ರಾ ಮೂಲ ಮತ್ತು ಭದ್ರಾ ಜಲಾಶಯ (ಲಕ್ಯವಳ್ಳಿ ಡ್ಯಾಮ್) ಹೂಳಿನಿಂದ ತುಂಬಿಹೋಗಿದೆ. ಪ್ರತಿ ವರ್ಷ ಸುರಿಯುವ 200-300 ಇಂಚಿನ ಮಳೆ ಗುಡ್ಡಗಳ ಮೇಲಿನ ಮಣ್ಣನ್ನು ಹೊತ್ತು ತಂದು ಭದ್ರೆಯ ಒಡಲಿಗೆ ಹಾಕುತ್ತಲೇ ಇದೆ. ಗಣಿಗಾರಿಕೆಯ ಪಾಪದ ಪಿಂಡಗಳಾದ ಸೀಸ, ಪಾದರಸ, ಆರ್ಸೆನಿಕ್, ಕಾಡ್ಮಿಯಂ ಮುಂತಾದ ವಿಷಕಾರಿ ಲೋಹಗಳು ಭದ್ರೆಯ ಉದರದೊಳಗೆ ಬೀಡುಬಿಟ್ಟಿರುವುದರಿಂದ ಈ ಪ್ರದೇಶದಲ್ಲಿ ಭದ್ರೆಯ ನೀರು ಕುಡಿಯಲು ಅಯೋಗ್ಯವಾಗಿ ಹೋಗಿದೆ. ಕಳಸದ ಜನ ಭದ್ರೆಯ ಉಪನದಿ 'ಸೀತೆ'ಯಿಂದ ಕುಡಿವ ನೀರು ಪಡೆದರೆ, ಬಾಳೆಹೊನ್ನೂರಿನ ಜನ ಬೋರ್‌ವೆಲ್‌ಗಳ ಮೊರೆ ಹೋಗಿದ್ದಾರೆ. ನಿತ್ಯ 5 ಟಿ.ಎಂ.ಸಿ ಭದ್ರೆಯ ನೀರನ್ನು ಸುರಂಗದ ಮೂಲಕ ಮಂಗಳೂರು ಕಾರ್ಖಾನೆಗೆ ಸಾಗಿಸುವುದರಿಂದ ಇಲ್ಲಿ ನೀರಿನ ಪ್ರಮಾಣ ಕಡಿಮೆ ಆಗುತ್ತಲೇ ಇದೆ. ಮಲೆನಾಡಿನ ಗುಡ್ಡಗಳಲ್ಲಿರುವ ಶೋಲಾ ಹುಲ್ಲುಗಾವಲು, ಅರಣ್ಯಗಳು ಗಣಿಗಾರಿಕೆಯ ಹೊಡೆತಕ್ಕೆ ತತ್ತರಿಸಿ ಸಮಾಧಿಯಾಗಿವೆ.

ಇನ್ನು ಎರಡು ವರ್ಷ ಗಣಿಗಾರಿಕೆ ನಡೆಯಲಿ ಎನ್ನುತ್ತಿರುವ ಖಾಯಂ ನೌಕರರು ಈ ಎರಡು ವರ್ಷಗಳಲ್ಲಿ ಬೆಟ್ಟಗಳ ಮೇಲಿರುವ ಮಣ್ಣನ್ನು ತೆರವುಗೊಳಿಸಬಹುದು ಎಂಬ ಸುಳ್ಳಿನ ಕತೆ ಹೆಣೆಯುತ್ತಿದ್ದಾರೆ.

ಲಕ್ಯಾ ಡ್ಯಾಮ್ ಪಕ್ಕದ ಮೂರು ಬೆಟ್ಟಗಳಾಗಲೇ ಕುಸಿದು ಹೋಗಿವೆ. ಗಣಿಗಾರಿಕೆಯ ಫಲದಿಂದ [illegible] ಈ ಸಲದ ಮಳೆಯಿಂದ ಲಕ್ಷಾಂತರ ಟನ್ ಮಣ್ಣು [illegible]?

[illegible]



ಸೈಟು ಕದಿಯುವ ಕೌನ್ಸಿಲರ್ಸ್

ಗಂಗಾವತಿ ಜನ ಈಗ ಮೂಗು, ಬಾಯಿ, ಕಣ್ಣು ಮೂರೂ ಮುಚ್ಚಿಕೊಂಡು ಅಡ್ಡಾಡುತ್ತಿದ್ದಾರೆ. ಅದಕ್ಕೆ ಕಾರಣ, ಗಂಗಾವತಿ ನಗರಸಭೆಯಲ್ಲಿ ಮೂರೂ ಬಿಟ್ಟವರ ಮೈಯಿಂದ ಹೊರಟಿರುವ ಭ್ರಷ್ಟತೆಯ, ಅಕ್ರಮದ ದುರ್ವಾಸನೆ!

ನಗರಸಭೆ ಕಮಿಷನರ್ ಜಯಣ್ಣ ಮುಂಜಾನೆ ಹೊತ್ತು ಕೌನ್ಸಿಲರ್‌ಗಳೆಲ್ಲ ಎಷ್ಟೆಷ್ಟು ನಕಲಿ ಬಿಲ್ ಕೊಟ್ಟರು ಎಂಬುದನ್ನು ಹೇಳಿದರೆ, ಸಂಜೆ ಕೌನ್ಸಿಲರ್‌ಗಳು ಸೇರಿ ಜಯಣ್ಣ ತಿಂದಿದ್ದು, ನುಂಗಿದ್ದು, ಎಲ್ಲವನ್ನು ಡಂಗುರ ಸಾರುತ್ತ ಹೊರಟುಬಿಡುತ್ತಾರೆ. ಅಷ್ಟೇ ಅಲ್ಲ ಕಮಿಷನರ್ ಜಯಣ್ಣನ ವಿರುದ್ಧ ಅಧ್ಯಕ್ಷ ಕೊಳಗದ ವಾಸುನೇ ಕೌನ್ಸಿಲರ್‌ಗಳನ್ನು ಕಟ್ಟಿಕೊಂಡು ಸ್ಟ್ರೈಕ್ ಕುಂತಿದ್ದಾನೆ. ನಗರಸಭೆ ಒಳಗಿರಬೇಕಾದವನು ಹೊರಗೆ ಕುಂತಿದ್ದಾನೆ ಪಾಪ! ಇಂತಹ ಭ್ರಷ್ಟರನ್ನು ಆಯ್ಕೆ ಮಾಡಿದ ತಪ್ಪಿಗೆ ಜನ ಒದ್ದಾಡುತ್ತಿದ್ದಾರೆ. ಹೀಗೆ ದಿನವೂ ಒಬ್ಬರ ಮೇಲೊಬ್ಬರು ರಾಡಿ ಎರಚುತ್ತ ಮಾನ ಮರ್ಯಾದೆ ಇಲ್ಲದವರಂತೆ ವರ್ತಿಸಲು ಮೂಲ ಕಾರಣವೇ ಬೇರೆ.

ಸೈಟು ಹಗರಣ

ಅಂವ ತಿಂದಾನ, ಇಂವ ನುಂಗ್ಯಾನ ಇಂತಹ ಆರೋಪಗಳನ್ನು ಹಿಂಬಾಲಿಸಿ ಹೊರಟರೆ ಗಂಗಾವತಿ ಊರಲ್ಲೇ ಎದುರಾಗುತ್ತದೆ ಸಿದ್ದಾಪುರ ಬಡಾವಣೆಯ ಸೈಟು ಹಗರಣ.

ಗಂಗಾವತಿ ನಗರಸಭೆ ವ್ಯಾಪ್ತಿಯ ಸರ್ವೆ ನಂ. 293/1 ರಿಂದ 11ರವರೆಗೆ ಒಟ್ಟು 12.20 ಎಕರೆ ಪ್ರದೇಶಕ್ಕೆ ಆಗಿನ ರಾಯಚೂರು ಡಿಸಿ ಭೂ ಪರಿವರ್ತನೆ ಮಾಡಿ ಜೊತೆಗೆ ಗಂಗಾವತಿ ನಗರ ಯೋಜನಾ ಪ್ರಾಧಿಕಾರ 2003ರಲ್ಲಿ ಒಪ್ಪಿಗೆ ನೀಡಿದ ಲೇಔಟ್‌ನಲ್ಲಿ ಪಾರ್ಕ್ ಮತ್ತು ಸಾರ್ವಜನಿಕ ಉಪಯೋಗಕ್ಕಾಗಿ ಸ್ವಲ್ಪ ಬಿಟ್ಟು ಒಟ್ಟು 151 ಸೈಟುಗಳಿಗೆ ಒಪ್ಪಿಗೆ ನೀಡಿತ್ತು. ಹಿಂದಿನ ಅಧ್ಯಕ್ಷರ ಅವಧಿಯಲ್ಲಿ ಲೇಔಟನ್ನು ಮರುವಿನ್ಯಾಸಗೊಳಿಸಿ ಇಡೀ ಖಾಲಿ ಜಾಗವನ್ನು ನುಂಗಿ ಹಾಕಲಾಗಿದೆ. ನಿವೇಶನ ಸಂಖ್ಯೆ 152ರಿಂದ 207ರವರೆಗೆ ಒಟ್ಟು 55 ಸೈಟುಗಳನ್ನು ಮಾಡಿ ಅಕ್ರಮವಾಗಿ ನೊಂದಣಿ ಮಾಡಲಾಗಿದೆ. ಇವುಗಳಲ್ಲಿ ಕೆಲವು ಮಾರಾಟವಾಗಿರುವುದು ಗಂಗಾವತಿಯ ವಿಐಪಿಗಳಿಗೇ.



ಯಾರ್ಯಾರಿಗೆ?

ಸಿದ್ದಾಪುರ ಬಡಾವಣೆಯ ಪಾರ್ಕ್ ಮತ್ತು ಸಾರ್ವಜನಿಕ ಜಾಗವನ್ನು ಪ್ಲಾಟ್ ಮಾಡಿಸಿ ಅವುಗಳನ್ನು ಖರೀದಿಸಿದವರು ಗಂಗಾವತಿಯ ಶ್ರೀಮಂತರು. ಈ ಶ್ರೀಮಂತರಲ್ಲಿ, ಗಂಗಾವತಿಯ ಕಾಂಗ್ರೆಸ್, ಜೆಡಿಎಸ್, ಬಿಜೆಪಿಯವರೂ ಸೇರಿದ್ದಾರೆ. ಬಸವರಾಜ ಶರಣಪ್ಪ 9 ಸೈಟು, ಪರಗಿ ನಾಗರಾಜ 7 ಸೈಟು, ಮಾಜಿ ಸಚಿವ ನಾಗಪ್ಪ ಸಾಲೋಣಿ 1, ಕೊಲ್ಲಿ ನಾಗೇಶ್ವರ ರಾವ್, ಸಿರಿಗೇರಿ ಸುನೀಲ, ಶಿವರಾಮನಗೌಡ ಪತ್ನಿ ರೇಣುಕಾ, ಗಂಗಾವತಿ ಸಿಬಿಎಸ್ ಬ್ಯಾಂಕ್ ಡೈರೆಕ್ಟರ್ ಗುರುಪಾದನಗೌಡ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರೆಡ್ಡಿ... ಹೀಗೆ ಅನೇಕರಿಗೆ ಸೈಟು ಸಿಕ್ಕಿವೆ. ನೀರಾವರಿ ಪ್ರದೇಶವಾದ ಗಂಗಾವತಿಯಲ್ಲಿ ಇಂಚಿಂಚು ನೆಲಕ್ಕೆ ಬಂಗಾರದ ಬೆಲೆ ಇದೆ.

ಸೈಟು ಖರೀದಿಸಿದವರು


ಇಂತಹ ಅಕ್ರಮ ಸೈಟುಗಳನ್ನು ಖರೀದಿಸಿದವರು ಯಾರು ಅವಿದ್ಯಾವಂತರಲ್ಲ, ಕೌನ್ಸಿಲರ್‌ಗಳು, ಅಧ್ಯಕ್ಷರು ಎಲ್ಲ ಸೇರಿದ್ದಾರೆ. ಸರ್ವೆ ನಂಬರ್ 1-3 -174/152, 53, 74, 75ರ ಸೈಟುಗಳು ಪರಗಿ ನಾಗರಾಜ ಹೆಸರಿನಿಂದ ನಗರಸಭೆ ಅಧ್ಯಕ್ಷ ವಾಸು ಕೊಳಗದ ಪತ್ನಿ ಪ್ರೇಮಾ ಹೆಸರಿಗೆ ಖರೀದಿಯಾಗಿದೆ. ಅದರಂತೆ 1-3-174/176ರ ಪ್ಲಾಟ್‌ನ್ನು ಅಧ್ಯಕ್ಷನೇ ಖರೀದಿಸಿದ್ದಾನೆ. ಸಿದ್ದಾಪುರ ಬಸವರಾಜ ಹೆಸರಿನ ಪ್ಲಾಟ್ ನಂ 156, 157, 158 ಮತ್ತು 169, 170, 171, 172, 173 ಪ್ಲಾಟ್‌ಗಳಲ್ಲಿ ನಗರಸಭೆ ಮಾಜಿ ಅಧ್ಯಕ್ಷ ರಾಘವೇಂದ್ರ ಶ್ರೇಷ್ಠಿ ಹೆಸರಿಗೆ ಎರಡು, ಕೌನ್ಸಿಲರ್ ನಾಗಲಿಂಗಪ್ಪ ಪತ್ತಾರನ ಪತ್ನಿ ಜಯಶ್ರೀ ಹೆಸರಿಗೆ ಎರಡು, ಕೌನ್ಸಿಲರ್ ಶ್ರೀನಿವಾಸ್‌ಗೆ ಒಂದು, ಆರಳಿ ಮಲ್ಲಿಕಾರ್ಜುನನ ಹೆಸರಿಗೆ ಎರಡು, ಗಂಗಾವತಿಯ ಡಾಕ್ಟರ್‌ಗಳಿಗೆ, ದಣಾಯಿತರುಗಳಿಗೆ, ಅವರಿಗೆ-ಇವರಿಗೆ ಅಂ... ಒಟ್ಟು 55 ಸೈಟುಗಳ ಹಗರಣ ಮಾಡಿಬಿಟ್ಟಿದ್ದಾರೆ...

ಈ ಅನಧಿಕೃತ ನಿವೇಶನಗಳನ್ನು ರದ್ದು ಮಾಡ್ತೀ... ಅಂತ ಕುಂತಿರುವುದು ಕಮಿಷನರ್ ಜಯಣ್ಣ. "ಇವ... ಹೇಳಿದ್ದೇ ತಡ ಮುಕ್ಕಾಲು ಪಾಲು ಕೌನ್ಸಿಲರ್‌ಗಳು... ಕಮಿಷನರ್ ಎತ್ತಂಗಡಿಗೆ ಆಗ್ರಹಿಸಿ ಸತ್ಯಾಗ್ರಹ ಕುಂತಿದ್ದಾ... ಕಚೇರಿಗೆ ಬೀಗ ಜಡಿದಿದ್ದಾರೆ. ಮಂಗಳವಾರ ಜಯಣ್ಣ... ಶವದ ಪ್ರತಿಕೃತಿಯನ್ನು ಹೊತ್ತು ಊರತುಂಬ ಲಬಲ... ಬಡ್ಕೊಂಡು ತಿರುಗಿದ್ದಾರೆ. ಪಾಪ ಅವರಾದರೂ ವಿ... ಮಾಡಿಯಾರು? ಈಗ ಅವರ ಸ್ಥಿತಿಯೇ ಹಾಗಿದೆ.

ಜಯಣ್ಣ ಎಂಬ ನುಂಗಣ್ಣ

ಕೌನ್ಸಿಲರ್‌ಗಳ ಸೈಟು ರದ್ದು ಮಾಡ್ತೀನಿ ಅಂ... ಹೇಳಿ ತಾನು ಸತ್ಯ ಹರಿಶ್ಚಂದ್ರನ ಕಲಿಯುಗದ ಅವತಾ... ಎಂಬಂತೆ ಪೋಸು ಕೊಡುತ್ತಿರುವ ಕಮಿಷನರ್ ಜಯಣ್ಣ... ಭ್ರಷ್ಟಾಚಾರವೇನು ಕಮ್ಮಿ ಇಲ್ಲ. ಹಿಂದೆ ಕೆಲ... ಮಾಡಿದಲ್ಲೆಲ್ಲ 10 ತಿಂಗಳಿಗಿಂತ ಹೆಚ್ಚು ಕಾಲ ಇರದೆ... ಇಲ್ಲದ ರಗಳೆ ಮಾಡಿಕೊಂಡು ಬಂದ ಕಮಿಷನರ... ಈತ. ಕಸ ಸಾಗಿಸಲು ಫೆ. 4, 2005ರಂದು ಸಭೆಯ... ನಿಯಮಾವಳಿಯಂತೆ ಫಾರ್ಗುಸನ್ ಕಂಪನಿ ಟ್ರ್ಯಾಕ್ಟರ್... ಖರೀದಿಸಲು ನಿರ್ಧರಿಸಿಯಾಗಿತ್ತು. ಆದರೆ 50 ಸಾವಿ... ಕಮಿಷನ್ ಆಸೆಗೆ ಸೋನಾಲಿಕಾ ಟ್ರ್ಯಾಕ್ಟರ್ ಖರೀದಿಸಿದ... ಒಂದು ವೇಳೆ ಮಾಮೂಲು ನೀಡಲಿಲ್ಲ ಅಂದ್ರೆ ಕಿರಿಕಿ... ಕೊಡುವುದು ಗ್ಯಾರಂಟಿ. ಹೀಗೆ ಲಂಚ ಕೊಡಲಿ... ಅಂತ ನಾಗಲಿಂಗನಗೌಡ ಎಂಬುವವರ ಪ್ಲಾಟ್‌ಗೆ 1... ಸಾವಿರ ರೂ. ಅಭಿವೃದ್ಧಿ ಶುಲ್ಕ ಕಕ್ಕಿಸಿದ್ದಾನೆ. ಇನ್ನೊಂದೆ... ಲಂಚ ಕೊಟ್ಟ ಜಯಲಕ್ಷ್ಮಿಯ ಸೈಟಿಗೆ ಅಭಿವೃದ್ಧಿಯ... ಶುಲ್ಕವೇ ಇಲ್ಲ.

ಜಯನಗರದ ಪ್ಲಾಟ್ ನಂ. 21 ಮೊದಲ... ಪಾರ್ಕ್‌ಗೆ ಅಂತ ಬಿಟ್ಟ ಜಾಗ. ಅದನ್ನು ಮಮ... ಮನೋಹರ ಎಂಬಾಕೆಯ ಹೆಸರಿಗೆ ಖಾತಾ ವರ್ಗಾವಣ...


'ಸುಮ್ಮನೆ' ಸಿದ್ಧ

ದಾವಣಗೆರೆ

ಅವನು 'ಸುಮ್ಮನೆ' ಇವನು 'ಹನ್ನೆರಡ್‌ಮನೆ'



'ಹನ್ನೆರಡ್ ಮನೆ' ಹನುಮಂತ

'ಸುಮ್ಮನೆ' ಸಿದ್ದಪ್ಪನೆಂದು ಈಗ ಕುಖ್ಯಾತನಾಗಿರುವ ಕಡುಭ್ರಷ್ಟ ಅಧಿಕಾರಿಯ ಮನೆಯ ಮೇಲೆ ಲೋಕಾಯುಕ್ತ ಪೋಲೀಸರು 2005ರ ನವೆಂಬರ್ ತಿಂಗಳಲ್ಲಿ ರೇಡು ಮಾಡಿ ಅವನ ಎರಡು ಕೋಟಿ ಮೌಲ್ಯದ ಅಕ್ರಮ ಆಸ್ತಿ ಬಹಿರಂಗ ಪಡಿಸಿದ್ದನ್ನು ದಾವಣಗೆರೆಯ ಜನ ಇನ್ನೂ ಮೆಲುಕು ಹಾಕುತ್ತಿರುವಾಗಲೇ, ಮತ್ತೊಬ್ಬ ಮಹಾನ್ ಭ್ರಷ್ಟ ಅಧಿಕಾರಿ ಕೆ. ಹನುಮಂತರೆಡ್ಡಿ ಎಂಬ ಜೂನಿಯರ್ ಎಂಜಿನಿಯರ್ ಮನೆಯ ಮೇಲೆ ಇದೇ ಲೋಕಾಯುಕ್ತ ಪೋಲೀಸರು ದಾಳಿ ಇಟ್ಟಿದ್ದಾರೆ. ಲೋಕಾಯುಕ್ತರ ಬಲೆಗೆ ಬಿದ್ದು ಲಬೊಲಬೊ ಎಂದು ಬೋರ್ಲಾಡಿ ಅತ್ತಿದ್ದ ಅಸಿಸ್ಟೆಂಟ್ ಕಮಿಷನರ್ ಸಿದ್ದಪ್ಪ ತನ್ನ ಅರಮನೆಯಂತಹ ಮನೆಗೆ 'ಸುಮ್ಮನೆ' ಎಂಬ ಹೆಸರನ್ನಿಟ್ಟುಕೊಂಡಿದ್ದ. ಈಗ ಲೋಕಾಯುಕ್ತರ ಬಲೆಗೆ ಬಿದ್ದಿರುವ ಹನುಮಂತರೆಡ್ಡಿಗೆ ಸಂಬಂಧಿಸಿದ ಹನ್ನೆರಡು ಮನೆಗಳು ಬೆಳಕಿಗೆ ಬಂದಿವೆಯಾದ್ದರಿಂದ ದಾವಣಗೆರೆಯ ಜನರು ಇವನನ್ನು ಇನ್ನು ಮುಂದೆ 'ಹನ್ನೆರಡ್‌ಮನೆ' ಎಂದು ಕರೆಯಬಹುದು.

ಬಲೆಗೆ ಬಿದ್ದ ಹನುಮಂತ

ದಾವಣಗೆರೆಯ ಆಂಜನೇಯ ಬಡಾವಣೆಯಲ್ಲಿನ ಮೂರಂತಸ್ತಿನ 'ರಾಘವೇಂದ್ರ ನಿಲಯ'ವೆಂಬ ಹನುಮಂತರೆಡ್ಡಿಯ ಅಪಾರ್ಟ್‌ಮೆಂಟಿನ ಮೇಲೆ ಮುಗಿಬೀಳಲು ಲೋಕಾಯುಕ್ತ ಎಸ್ಪಿ ಕೆ.ಎಸ್. ನಾಯಕ್‌ರ ತಂಡವು ಮಾರ್ಚ್ ತಿಂಗಳ 24ರ ಶುಕ್ರವಾರ ಬೆಳಿಗ್ಗೆ ಆರು ಗಂಟೆಗೇ ಕಾದು ನಿಂತಿತ್ತು, ಅದೇ ಹೊತ್ತಿಗೆ ಈ ಚಾಲಾಕಿಯಾದ ಹನುಮಂತ ತನ್ನ ನಾಯಿಯೊಡನೆ ವಾಕಿಂಗ್ ಹೊರಡಲು ಮುಂದಾಗಿದ್ದ. ಅಷ್ಟರಲ್ಲಿಯೇ ಎದುರಾದ ತಂಡವನ್ನು ಕಂಡು ಹನುಮಂತರೆಡ್ಡಿ ರೋಪು ಹೊಡೆಯಲು ಪ್ರಾರಂಭಿಸಿದಾಗಲೇ ಲೋಕಾಯುಕ್ತ ಎಸ್ಪಿ ನಾಯಕ್‌ರವರು ತಮ್ಮನ್ನು ಪರಿಚಯಿಸಿಕೊಂಡು 'ಸರ್ಚ್ ವಾರೆಂಟ್' ತೋರಿಸಿದ್ದಾರೆ. ಬಂದವರು ಲೋಕಾಯುಕ್ತ ಪೋಲೀಸರೆಂದು ತಿಳಿದ ತಕ್ಷಣ 'ನಾನೇನೂ ಅಂತಾ ಆಸ್ತಿ ಮಾಡಿಲ್ಲ' ಎಂದು ಬಡಬಡಿಸಿ, ತಾನು ಟ್ರ್ಯಾಪ್ ಆಗಿರುವುದು ಅರ್ಥವಾಗಿ ಗರಬಡಿದವನಂತಾಗಿದ್ದಾನೆ. ನಂತರ ಬಹಳ ಸಭ್ಯನಂತೆ ಲೋಕಾಯುಕ್ತರಿಗೆ ಸಹಕರಿಸಿದ್ದಾನೆ. ಬೆಳಿಗ್ಗೆ ಆರು ಗಂಟೆಯಿಂದ ಮಧ್ಯಾಹ್ನದವರೆಗೆ ಇವನ ಮನೆಯನ್ನು ಶೋಧಿಸಿದಾಗ ಸಿಕ್ಕಿಬಿದ್ದಿದ್ದು ಅನಾಮತ್ತು ಒಂದು ಕೋಟಿ ಮೌಲ್ಯದ ಅಕ್ರಮ ಆಸ್ತಿ!

ಕೆಲಸ ಅಲ್ಲಿ, ವಾಸ ಇಲ್ಲಿ


ತಗಡು ಹನುಮಂತನ ಬೆಳ್ಳಿ ಪಾತ್ರೆಗಳು

ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಅರಸನಾಳು ಗ್ರಾಮದವನಾದ ಹನುಮಂತರೆಡ್ಡಿಯು ಹಾವೇರಿ ಜಿಲ್ಲಾ ಪಂಚಾಯ್ತಿಯ ರಾಣೆಬೆನ್ನೂರು ಉಪ ವಿಭಾಗದಲ್ಲಿ ಕೆಲಸ ಮಾಡುತ್ತಾ ದಾವಣಗೆರೆಯಲ್ಲಿ ಸೆಟಲ್ ಆಗಿದ್ದಾನೆ. 1985ರಲ್ಲಿ ಕೆಲಸಕ್ಕೆ ಸೇರಿ ಈ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಸುಳ್ಳ, ಹರಪನಹಳ್ಳಿ, ಕೊಟ್ಟೂರು, ರಾಣೆಬೆನ್ನೂರುಗಳಲ್ಲಿ ತನ್ನ ಭ್ರಷ್ಟತೆಯ "ಅಮೋಘ ಸೇವೆ"ಯನ್ನು ಸಲ್ಲಿಸಿದ್ದಾನೆ.

ಈ ಫಲವತ್ತಾದ ಇಲಾಖೆಯಲ್ಲಿ ಪೊಗದಸ್ತಾಗಿ ಉಂಡು ಅರಗಿಸಿಕೊಳ್ಳುವ ಹಂತದಲ್ಲೇ ಹೀನಾಯವಾಗಿ ಸಿಕ್ಕುಬಿದ್ದಿರುವ ಇವನಿಗೆ ತಿಂಗಳ ಸಂಬಳ ಸಿಗುವುದು ಮಾತ್ರ ಕೇವಲ ಹದಿನಾರು ಸಾವಿರ ರೂಪಾಯಿ! ಆದರೆ ಇವನು ಹೊಂದಿರುವ ಆಸ್ತಿ ಇವನ ಸಂಬಳಕ್ಕಿಂತ ನೂರು ಪಟ್ಟು ಹೆಚ್ಚಾಗಿದೆ. ದಾವಣಗೆರೆಯ ರಾಘವೇಂದ್ರ ಅಪಾರ್ಟ್‌ಮೆಂಟಿನ ಹತ್ತು ಮನೆಗಳು, ಅರಸನಾಳು ಹಾಗೂ ಕೊಟ್ಟೂರಿನ ಎರಡು ಮನೆಗಳು ಹೀಗೆ ಒಟ್ಟು ಹನ್ನೆರಡು ಮನೆಗಳ ಮತ್ತು ಅಪಾರ ಆಸ್ತಿಯ ಅ(ನ)ಧಿಕೃತ ಒಡೆಯನಿವನು! ಈ ಒಡೆತನವು ಇವನ ಪಿತ್ರಾರ್ಜಿತ ಆಸ್ತಿಯಿಂದ ಬಂದದ್ದಂತೂ ಅಲ್ಲವೇ ಅಲ್ಲ. ಸಿಕ್ಕಿದ್ದನ್ನು ಸಿಕ್ಕಹಾಗೇ ಮುಕ್ಕುವ ಹೀನ ಚಾಳಿಯಿಂದಲೇ ಈ ಒಡೆತನ ಪ್ರಾಪ್ತವಾಗಿದೆ. ದಾವಣಗೆರೆಯ ಇವನ ಭವ್ಯ ಅಪಾರ್ಟ್‌ಮೆಂಟ್ ಒಟ್ಟು ಹತ್ತು ಮನೆಗಳನ್ನು ಒಳಗೊಂಡಿದೆ. ಈ ಅಪಾರ್ಟ್‌ಮೆಂಟಿನ ಒಂದು ಮನೆಯಲ್ಲಿ ಇವನು ವಾಸವಿದ್ದಾನೆ. ಉಳಿದ ಒಂಭತ್ತು ಮನೆಗಳನ್ನು ಬಾಡಿಗೆಗೆ ನೀಡಿದ್ದಾನೆ. ಇವುಗಳ ಬಾಡಿಗೆಯೇ ತಿಂಗಳಿಗೆ ಇಪ್ಪತ್ತೈದು/ಮೂವತ್ತು ಸಾವಿರ ಬರುತ್ತದೆ.

ಲೋಕಾಯುಕ್ತರು ಈ ಮನೆಯ ಮೌಲ್ಯವನ್ನು 40 ಲಕ್ಷವೆಂದು ಅಂದಾಜಿಸಿದ್ದಾರೆ. ಅಕ್ಕಪಕ್ಕದವರು ಮಾತ್ರ 50 ಲಕ್ಷ ಬೆಲೆಬಾಳುತ್ತದೆಂದು ಹೇಳುತ್ತಾರೆ. ಈ ಮನೆಯಲ್ಲಿ ಶೋಧನೆ ನಡೆಸಿದಾಗ 1.54 ಲಕ್ಷ ರೂ. ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಭರಣಗಳು, 2 ಲಕ್ಷ ರೂ. ಮೌಲ್ಯದ ಪೀಠೋಪಕರಣಗಳು, ಒಂದು ಜೆನ್ ಕಾರು, ಹೊಂಡಾ ಆಕ್ಟಿವ ಬೈಕು, ಫ್ಲಾಟ್... ಟಿ.ವಿ., ಕಂಪ್ಯೂಟರ್, ಎರಡು ಲಕ್ಷ ರೂ. ಬೆಲೆಬಾಳುವ ದಾವಣಗೆರೆಯಲ್ಲಿನ ಎರಡು ಸೈಟುಗಳು ಸೇರಿದಂತೆ ಈತನ ಸ್ವಗ್ರಾಮದಲ್ಲಿ ಎಂಟು ಲಕ್ಷ ಮೌಲ್ಯದ ಮನೆ, 20 ಲಕ್ಷ ಮೌಲ್ಯದ 40 ಎಕರೆ ಜಮೀನು, ಟ್ರ್ಯಾಕ್ಟರ್, ಬಳ್ಳಾರಿ ಜಿಲ್ಲೆ ಕೊಟ್ಟೂರಿನಲ್ಲಿ 20 ಲಕ್ಷ ಮೌಲ್ಯದ ಮನೆ ಸೇರಿದಂತೆ ಒಂದು ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆಯಾಗಿದೆ. ಹರಿಹರ ಅರ್ಬನ್ ಬ್ಯಾಂಕು, ಬಾಪೂಜಿ ಬ್ಯಾಂಕು, ಇಂಡಿಯನ್ ಓವರಸೀಸ್ ಬ್ಯಾಂಕು, ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕು ಮುಂತಾದ ಒಟ್ಟು ಆರು ಬ್ಯಾಂಕುಗಳ ಶಾಖೆಗಳಲ್ಲಿ ಇವನ ಖಾತೆಗಳಿವೆ. ಈ ಬ್ಯಾಂಕುಗಳ ಲಾಕರ್‌ಗಳಲ್ಲಿ ಅಪಾರ ಪ್ರಮಾಣದ ಚಿನ್ನ ಹಾಗೂ ಇತರೆ ದಾಖಲೆಗಳು ಲಭ್ಯವಾಗಬಹುದೆಂದು ಹೇಳಲಾಗುತ್ತಿದೆ.

ಸ್ವಲ್ಪ ಸ್ವನಾಮಿ -ಹಲವು ಬೇನಾಮಿ

ಎಲ್ಲಾ ಭ್ರಷ್ಟ ಅಧಿಕಾರಿಗಳಂತೆ ಹನುಮಂತರೆಡ್ಡಿಯೂ ತನ್ನ ಅಕ್ರಮ ಆಸ್ತಿಯಲ್ಲಿನ ಕೆಲವನ್ನು ಮಾತ್ರ ತನ್ನ ಹೆಸರಿನಲ್ಲಿರಿಸಿಕೊಂಡು, ಉಳಿದ ಹಲವನ್ನು ಬೇನಾಮಿ...

ಬುದ್ಧಿಯೇ ಸಾರಥಿ, ಇಂದ್ರಿಯಗಳೇ ಅಶ್ವಗಳು-ವೆಂಕಟಕೃಷ್ಣಯ್ಯ

...ವಿಕೊಟ್ಟಿದ್ದಾನೆ ಜುಂಗ್ಲ್ಯಾ ಜಯಣ್ಣ,

ರೊಕ್ಕ ಕೊಡ್ರಿ, ಬೇಕಾದ್ದು ಮಾಡ್ರಿ,

...ಗಂಗಾವತಿ ಸರ್ವೆ ನಂ. 189/1ರಲ್ಲಿರುವ 31ನೇ ...ಸ್ ವಸತಿ ಉದ್ದೇಶದ್ದು. ಅದರ ಮಾಲೀಕ ಉಮಾ ...ಶ್ವರಿ ರಾವ್. ಅದನ್ನು ವಸತಿಯಿಂದ ವಾಣಿಜ್ಯ ...ಶಕ್ಕೆ ಪರಿವರ್ತಿಸುವಾಗ ಪಕ್ಕದ ಪ್ಲಾಟ್‌ನ್ನು ಸೇರಿಸಿ ...ಟ್ಟಿದ್ದಾನೆ ಕಮಿಷನರ್. ಈಗ ಅಲ್ಲಿ ಗ್ಯಾಸ್ ಸಿಲಿಂಡರ್ ...ಡೌನ್ ಕಟ್ಟಲಾಗುತ್ತಿದೆ. ನಿತ್ಯ 20 ಸಾವಿರ ರೂಪಾಯಿ ...ಗೆ ಇಳಿಸದೆ ಚೇಂಬರ್ ಬಾಗಿಲು ಹಾಕದ ಜಯಣ್ಣ ...ಚ ಸ್ವೀಕಾರದ ಜವಾಬ್ದಾರಿಯನ್ನು ಬಸವರಾಜ ...ಬ ನೌಕರನಿಗೆ ವಹಿಸಿದ್ದಾನೆ. ಲಕ್ಷ ಜನಸಂಖ್ಯೆಯ ...ಾವತಿಯಲ್ಲಿ 10 ಸಾವಿರ ನಳ ಇದ್ದರೆ ದಾಖಲೆಯಲ್ಲಿ ...ರೇ ಸಾವಿರ ಇವೆ. ಉಳಿದ ಅನಧಿಕೃತ ನಳಗಳ ...ದ್ದು ಜಯಣ್ಣನಿಗೆ.

ತನಿಖೆ ಆಗಬೇಕು


ರಾಜೊಳ್ಳಿ ಪ್ರಭಾಕರ ಮತ್ತು ಎಸ್. ವೆಂಕಟೇಶ ...ಬುವವರು ಸಿದ್ದಿಕೇರಿ ಮತ್ತು ಶರಣಬಸವೇಶ್ವರ ...ಪಿನಲ್ಲಿ ಚರಂಡಿ ಮತ್ತು ಹೈಫ್ ಕ್ಲೀನ್ ಕೆಲಸವನ್ನು ಹಿಂದೆ ಕೂಲಿಗಾಗಿ ಕಾಳು ಯೋಜನೆಯಲ್ಲಿ ಮಾಡಿದ್ದಾರೆ. ಅದೇ ಕಾಮಗಾರಿ ಹೆಸರಲ್ಲಿ ನಕಲಿ ಬಿಲ್ ಹಾಕಿರುವ ಬಗ್ಗೆ ಪತ್ತೆಯಾಗಿದೆ. ಒಮ್ಮೆ ಲೋಕಾಯುಕ್ತ ವೆಂಕಟಾಚಲರು ಗಂಗಾವತಿ ನಗರಸಭೆಗೆ ಬಂದು ಹೋಗಲಿ.

ಹಾಲಿ ಸದಸ್ಯರು ಸೇರಿ ಮಾಡಿರುವ 55 ಸೈಟುಗಳ ಹಗರಣ ಅಲ್ಲದೇ ನಗರಸಭೆ ಹುಟ್ಟಿದಾಗಿನಿಂದ 50ಕ್ಕೂ ಲೇಔಟ್‌ಗಳು ಎದ್ದಿವೆ. ಅವುಗಳ ಪಾರ್ಕ್ ಮತ್ತು ಪಬ್ಲಿಕ್ ಜಾಗ ಇದೇ ರೀತಿ ಕಬಳಿಕೆಯಾಗಿದೆ. ಹೀಗಾಗಿ ಭೂ ಹಗರಣ ತನಿಖೆ ಬೆಂಗಳೂರಿಗೆ ಸೀಮಿತವಾಗದೇ ಕೊಪ್ಪಳ ಜಿಲ್ಲೆಗೂ ಬಂದು 10 -15 ಕೋಟಿ ರೂಪಾಯಿಗಳ ಸೈಟು ಹಗರಣ ಬಯಲಿಗೆ ಬಂದೇ ಬರುತ್ತವೆ.

ಊರು ಸ್ವಚ್ಛ ಇಡಬೇಕಾದ ನಗರಸಭೆಯ ಒಳಗಿನಿಂದಲೇ ಭ್ರಷ್ಟಾಚಾರದ ದುರ್ವಾಸನೆ ಹೊರಬದ್ದಿರುವಾಗ ಗಂಗಾವತಿ ಜನ ಮಾತ್ರ ಜೂನ್‌ನಲ್ಲಿ ಬರುವ ನಗರಸಭೆ ಚುನಾವಣೆಯತ್ತ ನೋಡುತ್ತ ಮೂಗು ಮುಚ್ಚಿಕೊಂಡು ತಿರುಗುತ್ತಿದ್ದಾರೆ.

-ವರದಿಗಾರ

ಕೊಳಗದ ಎಂಬ ಕೊಳಕ


ಕೊಳಕು ಕೊಳಗದ

2001ರಿಂದ ನಗರಸಭೆ ಅಧ್ಯಕ್ಷರಾದವರು ಚೆನ್ನಾಗಿ ತಿಂದು-ತೇಗಿ ಕುರ್ಚಿ ಬಿಟ್ಟು ಇಳಿದಿದ್ದಾರೆ. ಈಗ ನಗರಸಭೆ ಅಧ್ಯಕ್ಷರಾಗಿರುವ ವಾಸು ಕೊಳದ ಕಾರ್ಮಿಕ ಮಂತ್ರಿ ಇಕ್ಬಾಲ್ ಅನ್ಸಾರಿಯ ಬೆಂಬಲಿಗ. ಇತ್ತೀಚೆಗೆ ಅಧ್ಯಕ್ಷ ಗಾದಿಗೆ ಬರಲು ಹಾಕಿದ ಬಂಡವಾಳದಲ್ಲಿ ನಯಾಪೈಸೆ ಬಂದಿಲ್ಲ. ಅವಧಿ ನೋಡಿದರೆ ಮೇನಲ್ಲಿ ಮುಕ್ತಾಯ. ತಿನ್ನಲೂ ಆಸ್ಪದವಿಲ್ಲ, ಈಗ ಇದೇ ಸೈಟಗೂ ಸಂಚಕಾರ ತರುತ್ತಿರುವ ಜಯಣ್ಣನನ್ನು ಎತ್ತಿಸಲು ವಾಸು ಕೊಳಗದ ಕೌನ್ಸಿಲರ್‌ಗಳನ್ನು ಕಟ್ಟಿಕೊಂಡು ವಿಧಾನಸೌಧದ ಮೂರು ಮಹಡಿಗಳಲ್ಲಿ ಓಡಾಡಿ ಫೇಲಾಗಿದ್ದಾನೆ.


ಕೊನೆಗೆ ಕಾರ್ಮಿಕ ಮಂತ್ರಿ ಅನ್ಸಾರಿ ಬಳಿ "ಜಯಣ್ಣನನ್ನು ಟ್ರಾನ್ಸ್‌ಫರ್ ಮಾಡಿಸಿರಿ" ಅಂದಿದ್ದಾನೆ. ಆಗ ಅನ್ಸಾರಿ ರಾಜಕೀಯ ಮಾಡುವುದನ್ನು ಬಿಟ್ಟು ಕೆಲಸ ಮಾಡೋದನ್ನು ಕಲಿಯಿರಿ... ನಡಿ... ನಡೀರಿ ಅಂತ ಸಾಗಹಾಕಿದ್ದಾರೆ. ಈಗ ಜೆಡಿಎಸ್‌ನ್ನೇ ಬಿಡ್ತೀವಿ ಅಂತ ಧಮಕಿ ಹಾಕಿ ಬಂದಿದ್ದಾರೆ. ಕಮಿಷನರ್ ಜಯಣ್ಣ ಪುರಸಭೆ ಕಾಯ್ದೆ 1964ರ ಅಡಿಯಲ್ಲಿ ಈ ಅಕ್ರಮ ಸೈಟುಗಳನ್ನು ರದ್ದು ಮಾಡಲು 15 ದಿನ ಬಾಕಿ ಉಳಿದಿದೆ. ಅಷ್ಟರೊಳಗೆ ಜಯಣ್ಣ ಎತ್ತಂಗಡಿಯಾಗದಿದ್ದರೆ ಸೈಟುದಾರರಿಗೆ ಮುಳುಗು ನೀರು ಗ್ಯಾರಂಟಿ. ಈ ಪ್ರಕರಣ ಎಲ್ಲಿಗೆ ಹೋಗಿ ಮುಟ್ಟುವುದೋ ಗೊತ್ತಿಲ್ಲ.

...ರುಗಳಲ್ಲಿ ಉದಾ : ಕೊಟ್ಟೂರಿನ 20 ಲಕ್ಷ ರೂ. ...ಲ್ಯದ ಮನೆಯನ್ನು ಸೋದರ ಬಸವರಾಜನ ಹೆಸರಲ್ಲಿ, ...ಾಮವಾದ ಅರಸನಾಳಿನ 8 ಲಕ್ಷ ರೂ. ಮೌಲ್ಯದ ...ನೆಯನ್ನು ತನ್ನ ತಂದೆ ಚಂದ್ರಶೇಖರ ರೆಡ್ಡಿಯ ಹೆಸರಿನಲ್ಲಿ ...ಪಡಿಸಿಕೊಂಡಿದ್ದಾನೆ. ಆದರೆ ಲೋಕಾಯುಕ್ತರ ಫಸ್ಟ್ ...ನಿಂದ ನುಣುಚಿಕೊಂಡ ಅದೆಷ್ಟೋ ಆಸ್ತಿಯ ...ರಗಳು ಇನ್ನೂ ಇರಬಹುದಲ್ಲವೇ? ಎಂದು ಜನರು ...ುಮಾನಪಡುತ್ತಿದ್ದಾರೆ.

... ಹನುಮಂತರೆಡ್ಡಿಯ ಮನೆ ಹಾಗೂ ...ೆಬೆನ್ನೂರಿನಲ್ಲಿರುವ ಈತನ ಕಛೇರಿಯ ಮೇಲೆ ...ಕಾಲದಲ್ಲಿ ದಾಳಿ ನಡೆದಿದೆ ಎಂದು ...ಳಲಾಗುತ್ತಿದ್ದರೂ, ...ತನ ...ೇರಿಯಲ್ಲಿ ...ಹತ್ವದ ...ಖಲೆಗಳು ...ಲ್ಲ, ಆದರೆ ...ನುಮಂತರೆಡ್ಡಿಗೆ ...ಬಂಧಿಸಿದ ...ಂಕ್ ...ತೆಗಳನ್ನು ...ಹಚ ...ಡಬಾರದು, ...ಕರ್ ...ಂದಿದ್ದರೆ ...ಗಳನ್ನು ...ಸುಲು ...ಕಾಶ ...ಡಬಾರದು ಎಂಬ ಮೆಸೇಜು ಈಗಾಗಲೇ ...ಂಕ್ ಅಧಿಕಾರಿಗಳಿಗೆ ಲೋಕಾಯುಕ್ತರಿಂದ ...ಹೋಗಿದೆ. ಹಾಗಾಗಿ ಭ್ರಷ್ಟಾಚಾರದ ಸಾಧನೆಯ ...ಲ್ಲಿ ಇಷ್ಟಷ್ಟು ಹೂತುಹೋಗಬಹುದೆಂಬ ... ಈಗ ಜೈಲು ಕಂಬಿ ಎಣಿಸುತ್ತಿರುವ ...ನುಮಂತರೆಡ್ಡಿಯನ್ನು ಕಾಡುತ್ತಿದೆ.

ಸಂಬಳ-ಮರೀಚಿಕೆ

... ಯಾವಾಗಲೇ ಭ್ರಷ್ಟ ಅಧಿಕಾರಿಯ ಮೇಲೆ ಈ ...ಂತಹ ದಾಳಿಗಳು ನಡೆದಾಗ ಜನರು ಸಂತಸದಿಂದ ...ತ್ತಾರೆ ಜನಸ್ನೇಹಿ, ನಿರಂತರವಾಗಿ ಹಿಂಸಿಸುವ ಅಧಿಕಾರಶಾಹಿಯ ಪತನದ ಬಗ್ಗೆ ಕನಸುಗಳನ್ನು ಕಾಣುತ್ತಾರೆ. ಆದರೆ ಮಾಲುಸಮೇತ ಸಿಕ್ಕಿಬಿದ್ದ ಅಧಿಕಾರಿಗಳು ಕೆಲವೇ ದಿನಗಳಲ್ಲಿ (ಜನರು ಉಗುಳಿದ್ದ ಉಗುಳನ್ನು ಒರೆಸಿಕೊಳ್ಳುವ ಗೋಜಿಗೂ ಹೋಗದೆ) ತಮ್ಮ ಎಂದಿನ ವರಸೆಯನ್ನು ಪ್ರಾರಂಭಿಸಿದಾಗ ಇಂತಹ ದಾಳಿಗಳ ಬಗ್ಗೆ ಭರವಸೆಗಳನ್ನೇ ಕಳೆದುಕೊಳ್ಳುತ್ತಾರೆ. ಹೀಗಾಗಿ ಲೋಕಾಯುಕ್ತ ವೆಂಕಟಾಚಲರು ತಮ್ಮ ಎಷ್ಟೋ ನಿಖರವಾದ ದಾಳಿಗಳ ನಂತರವೂ ತಮ್ಮ ಅಸಹಾಯಕತೆ ಮತ್ತು ಸಿಟ್ಟನ್ನು ಬಹಳ ತೀವ್ರವಾಗಿಯೇ ವ್ಯಕ್ತಪಡಿಸಿದ್ದಾರೆ. ಮೂರು ತಿಂಗಳ ಹಿಂದೆ ರಾಣೆಬೆನ್ನೂರಿನಲ್ಲಿಯೂ ಜೂನಿಯರ್ ಇಂಜಿನಿಯರನೊಬ್ಬ ಅಪಾರ ಆಸ್ತಿ ಸಮೇತ ಲೋಕಾಯುಕ್ತರ ಕೈಗೆ ಸಿಕ್ಕುಬಿದ್ದಿದ್ದ. ಈಗ ದಾವಣಗೆರೆಯಲ್ಲಿ ಸಿದ್ದಪ್ಪ, ಹನುಮಂತರೆಂಬ ಎರಡು ಭರ್ಜರಿ ಬೇಟೆಗಳು ಸಿಕ್ಕಿವೆ. ಮಧ್ಯ ಕರ್ನಾಟಕದಲ್ಲಿ ಇನ್ನೆಷ್ಟು ತಿಮಿಂಗಿಲಗಳಿವೆಯೋ ಯಾರು ಬಲ್ಲರು?



ಹನುಮಂತನ 'ರಾಘವೇಂದ್ರ ನಿಲಯ'

ಇದೇನೇ ಇರಲಿ, ಲೋಕಾಯುಕ್ತ ಎಸ್ಪಿ ಕೆ.ಎಸ್. ನಾಯಕ್‌ರವರು ಹನುಮಂತರೆಡ್ಡಿಯೆಂಬ ಭ್ರಷ್ಟನನ್ನು ದಾಖಲೆಗಳ ಸಮೇತ ಹಿಡಿದು ಕಟಕಟೆಯ ಮುಂದೆ ನಿಲ್ಲಿಸಿ ಜನರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಅದರಲ್ಲೂ ನಾಲ್ಕು ತಿಂಗಳ ಅಂತರದಲ್ಲೇ ಭ್ರಷ್ಟಾಚಾರದ ವಿರುದ್ಧದ ಎರಡನೇ ದೊಡ್ಡ ಮೊತ್ತದ ದಾಳಿ ಇದಾದುದರಿಂದ ಎಂದಿನಂತೆ ಜನರು ಸಂತಸಗೊಂಡಿದ್ದಾರೆ ಮತ್ತು ಹನುಮಂತರೆಡ್ಡಿಗೆ ಸೂಕ್ತ ಶಿಕ್ಷೆಯಾಗುವುದನ್ನು ಕಾಯುತ್ತಿದ್ದಾರೆ. ಆದರೆ ಲೋಕಾಯುಕ್ತರ ಇಂತಹ ಪ್ರಯತ್ನಗಳಿಗೆ ಇಂಬುಗೊಡುವ 'ಸರ್ಕಾರಿ ಸಂತತಿ' ಇನ್ನೂ ಉಳಿದಿದೆಯೇ ಎನ್ನುವುದನ್ನು ಕಾದುನೋಡಬೇಕು.


-ವರದಿಗಾರ

ಮಾನ್ವಿಯ ಮೂವರು ಮುಠ್ಠಾಳ ಮಾಸ್ತರು

ಲೆಕ್ಚರರ್ ವಸಂತ್‌ಗೆ ಒದೆ!


ವಾಕರಿಕೆ ವಸಂತ


ಅಡ್ನಾಡಿ ಅನಂತ


...ಳಿ ವಿಜಯ

ತನ್ನ 'ಟಚಿಂಗ್ ಟಚಿಂಗ್' ಚಪಲವನ್ನು ಯಾರೂ ಪ್ರಶ್ನಿಸಲಾರರು ಎಂದುಕೊಂಡಿದ್ದ ಕಾಮುಕ ಲೆಕ್ಚರರ್ ವಸಂತಕುಮಾರನಿಗೆ ವಿದ್ಯಾರ್ಥಿನಿಯರ ಪಾಲಕರೆಲ್ಲ ಮನೆಹೊಕ್ಕು ಹಿಗ್ಗಾಮುಗ್ಗಾ ಒದ್ದಿದ್ದಾರೆ. ಅಂದಂತೆ ಈ ವಾಕರಿಕೆ ವಸಂತನ ಇಸ್ಪೀಟು ಕಲೆಯ ಕುರಿತು 'ಲಂಕೇಶ್' ಈಗ್ಗೆ ಕೆಲ ವಾರಗಳ ಹಿಂದೆ ಬರೆದಿತ್ತು, ಈಗ ಇಸ್ಪೀಟಿನ ಬದಲು ಲಂಪಟತನಕ್ಕೆ ಒದೆ ಬಿದ್ದಿವೆ... ಅದೂ ಅವನ ಮನೆಯಲ್ಲಿ ಭಜನಾಮೇಳ ನಡೆಸುತ್ತಿದ್ದಾಗಲೇ! ಇವನಿಗೆ ಒದೆ ಬೀಳುವಾಗ ಬಿಡಿಸಿಕೊಳ್ಳಲು ಬಂದ ಇಸ್ಪೀಟು ಕ್ರೀಡಾಪಟು ಅನಂತರಾವ್ ಪಾಟೀಲನೂ ವಸಂತನ ಸಹೋದ್ಯೋಗಿಯೇ!

ಫಿಜಿಕ್ಸ್ ಬಿಟ್ಟು: 'ಫಿಜಿಕ್' ಮೇಲೆ ದೃಷ್ಟಿ ನೆಟ್ಟ!

ಸರಕಾರಿ ಕಾಲೇಜಿನಲ್ಲಿ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಫಿಜಿಕ್ಸ್ ಕಲಿಸೋ ವಸಂತಾ ಎಂದರೆ ಹುಡುಗಿಯರ ಫಿಜಿಕ್ ನೋಡ್ತೀನಿ ಎನ್ನುತ್ತಲೇ ಬಂದ ಈ 'ಸಂತ' ವಸಂತ. ಬೆಳಕಿನ (The light) ಬಗ್ಗೆ ಪಾಠ ಹೇಳುವಾಗ reflection (ಪ್ರತಿಫಲನ), refraction(ವಕ್ರೀಭವನ)ಗಳ ಕುರಿತು ಹೇಳುವ ಬದಲು, ಹುಡುಗಿಯರ ದೇಹಸೌಂದರ್ಯದ ಮೇಲೆ ಬೆಳಕು ಚೆಲ್ಲುತ್ತಾ ದೇಹದ ವಕ್ರರೇಖೆಗಳನ್ನು (curves) ಗಮನಿಸುತ್ತಲೇ ಇಷ್ಟು ದಿನ ಕಾಲ ಕಳೆದುಬಿಟ್ಟ worst fellow ವಸಂತಾ....


ಕಡ್ಡಿ ಕಟ್ಟಿ

ಕಾಂತತ್ವ (Magnetism) ಬಗ್ಗೆ ಹೇಳುವಾಗ 'ವಿರುದ್ಧ ಧ್ರುವಗಳು ಪರಸ್ಪರ ಆಕರ್ಷಿಸುತ್ತವೆ' ಎಂಬುದನ್ನು ಒತ್ತಿ ಒತ್ತಿ ಹೇಳುತ್ತಾ ಏನೇನೋ signals ತೋರಿಸುತ್ತಿತ್ತು ಈ ಭೌತಶಾಸ್ತ್ರದ ಭೂತ!!

ಮೊನ್ನೆ ಪಿ.ಯು.ಸಿ. ದ್ವಿತೀಯ ವಿಜ್ಞಾನ ತರಗತಿಯ ಪ್ರಾಕ್ಟಿಕಲ್ ಪರೀಕ್ಷೆಗೆ ನಿಯೋಜನೆಗೊಂಡಾಗ ತನ್ನ ಚಿಲ್ಲರೆ 'ಚಟ'ವಟಿಕೆಗಳನ್ನು ಪ್ರಾಕ್ಟಿಕಲ್ ಆಗಿ ಕಾರ್ಯರೂಪಕ್ಕೆ ತಂದುಬಿಟ್ಟ ಈ ಟಚ್ ಚಟದ ಚಕ್ರವರ್ತಿ. ವಿದ್ಯಾರ್ಥಿಗಳ ಪ್ರಾಯೋಗಿಕ ಪರೀಕ್ಷೆಯ ಮೇಜರ್‌ಮೆಂಟ್ಸ್, ರೀಡಿಂಗ್ಸ್ ನೋಡುವ ನೆಪದಲ್ಲಿ, ವಿದ್ಯಾರ್ಥಿನಿಯರ ದೇಹದ ಏರಿಳಿತಗಳ ಮೇಲೆ ಕೈಯಾಡಿಸಲು ಪ್ರಯತ್ನಿಸಿ ಭೌತಿಕ ಪರೀಕ್ಷೆ ನಡೆಸಲು ನೋಡಿದ. ಮಾನ್ವಿಯ ಸುತ್ತಮುತ್ತಲಿನ ಸಂಪನ್ನ ಹುಡುಗಿಯರೇನೋ ಸುಮ್ಮನಾದರು. ಆದರೆ ಇವನ ಸ್ಪರ್ಶದ ಸೋಗಲಾಡಿತನಕ್ಕೆ ಸಂಘರ್ಷದ ಹುಡುಗಿಯರು ಸುಮ್ಮನಾಗಲಿಲ್ಲ, ಸೀದಾ ಕಾಲೇಜಿನ ಉಪನ್ಯಾಸಕರು ಮತ್ತು ತಮ್ಮ ಪಾಲಕರಿಗೆಲ್ಲ 'ವಸಂತಗೀತ'ದ ಕುರಿತು ಕಂಪ್ಲೆಂಟ್ ನೀಡಿಬಿಟ್ಟಿದ್ದಾರೆ.

ಕೈಲಿ ಇಸ್ಪೀಟು ಎಲೆ-ಒದೆ ಬಿದ್ದವಲ್ಲೇ....

ಮೂಲತಃ ತುಮಕೂರಿನವನಾದ ಈ ಅಜೀವ ಕಾಮಿ ವಸಂತಕುಮಾರ್ ಈ ಹಿಂದೆ ಬಿಜಾಪುರದಲ್ಲಿ ಕೆಲಸ ಮಾಡುವಾಗಲೂ ಮಚ್ಚಮಚ್ಚಲೇ ಹೊಡೆಸಿಕೊಂಡೇ ಜೀವನ ಸಾಗಿಸಿದ್ದ. ತಾನು ಪ್ರಾಯೋಗಿಕ ಪರೀಕ್ಷೆಯಲ್ಲಿ ಎಂಜಾಯ್ ಮಾಡಿದ್ದನ್ನು ಸಹೋದ್ಯೋಗಿ ಉಪನ್ಯಾಸಕ ಅನಂತರಾವ್ ಪಾಟೀಲನಿಗೆ ವಿವರಿಸುತ್ತಾ ಇಸ್ಪೀಟು ಎಲೆ ತಟ್ಟುತ್ತಾ ಮನೆಯಲ್ಲಿ ಕುಳಿತಾಗಲೇ ವಿದ್ಯಾರ್ಥಿನಿಯರ ಪಾಲಕರೆಲ್ಲ ದಾಳಿ ಮಾಡಿದರು. ವಸಂತ ನಿಗೆ ಸಿಕ್ಕ ಸಿಕ್ಕ ಕಡೆ ಗುದ್ದಿದರು, ಒದ್ದರು, ಚಪ್ಪಲೀಲಿ ಚಟ್ ಚಟ್ ಅಂತಾ ಬಾರಿಸಿಬಿಟ್ಟರು. ಮಿತ್ರನನ್ನು ಕಾಪಾಡಲು ಬಂದ ಅನಂತರಾವ್ ಪಾಟೀಲನಿಗೂ ಒದೆ ಬಿದ್ದವು. ಈಗ ಡಿಡಿಪಿಐ ಕದೀರ್‌ವೇಲುಗೂ ದೂರನ್ನು ನೀಡಿದ್ದಾರೆ ವಿದ್ಯಾರ್ಥಿನಿಯರು.


ಭೋಜರಾಜ

ಅನಂತನ ಅವಾಂತರ

ಭೌತಶಾಸ್ತ್ರದ ಭೂತ ವಸಂತನಿಗಿಂತ ತಾನೇನು ಕಮ್ಮಿ ಎನ್ನುತ್ತಾನೆ ಈ ಗಣಿತದ ಅನಂತ.... ಈತನ ಮ್ಯಾಥ್ ಬುದ್ದಿಯೆಲ್ಲ ಹೆಂಡ್ತಿಯ ಎಲ್.ಐ.ಸಿ. ಏಜೆನ್ಸಿಯನ್ನು ಬೆಳೆಸುವುದಕ್ಕೆ ಖರ್ಚಾಗುತ್ತಿದೆ. ಅದಕ್ಕೆ ಮಾನ್ವಿಯ ಬಹುದೇಕ ವಿಜ್ಞಾನ ವಿದ್ಯಾರ್ಥಿಗಳಿಗೆ trignometry, calculusಗಳೆಂದರೆ ಕಬ್ಬಿಣದ ಕಡಲೆ ಆಗಿಬಿಟ್ಟಿವೆ. ಸದಾ ಬಾಯಲ್ಲಿ ತಂಬಾಕು-ತಾಂಬೂಲ ತುಂಬಿಕೊಂಡು ತಿರುಗುವ ಈ ಮಾಸ್ತರು ಹೆಂಡ್ತಿ ಹೆಸರಲ್ಲಿ ಮೆಡಿಕಲ್ ಕಂಪನಿಯೊಂದರ ಏಜನ್ಸಿ ಪಡೆದು, ಈ ಕಂಪನಿಯ ಪ್ರಾಡಕ್ಟ್‌ಗಳನ್ನು ಮಾರಲು ಮನೆ ಮನೆ ತಿರುಗುವ ತಿರಬೋಕಿಯಾಗಿಬಿಟ್ಟಿದ್ದಾನೆ. ಗಣಿತದ ಈ ಅಧ್ಯಾಪಕ ಮಾನ್ವಿಯ ವಿದ್ಯಾರ್ಥಿಗಳ ಪಾಲಿಗೆ ನಿತ್ಯ ಕಾಡುವ ತಗಣಿ!

'ಅಜ್ಜು' ಎಂಬ ಬಡ್ಡಿ ಮಗ!

ವಸಂತ, ಅನಂತರೆಂಬ ಕಾಲೇಜು ಮಾಸ್ತರರಿಗಿಂತ ತಾನೇನು ಕಮ್ಮಿ ಎನ್ನುತ್ತಾನೆ ಹೈಸ್ಕೂಲ್ ಮಾಸ್ತರು ಅಜ್ಜನಗೌಡ ಎಂಬ ಅಡ್ನಾಡಿ. ಇವನಿಗೊಬ್ಬ ಅಡ್ಡಕಸುಬಿ ಅಳಿಯ ಜಾತಪ್ಪ; ಇವನು ಖಾಸಗಿ ಹೈಸ್ಕೂಲಲ್ಲಿ ಮಾಸ್ತರಪ್ಪ! ಅಜ್ಜನಗೌಡ ತಾನು ದುಡಿದದ್ದನ್ನೆಲ್ಲಾ ಅನಾಡಿ ಅಳಿಯ ಜಾತಪ್ಪನ ಹೆಸರಲ್ಲಿ ಬಡ್ಡಿಗೆ ಬಿಟ್ಟಿದ್ದಾನೆ. ಸರ್ಕಾರಿ ಶಾಲೆಯಲ್ಲಿರುವ ಈ ಅಜ್ಜುಗೆ ಅಸಲು, ಬಡ್ಡಿ ಕುರಿತ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ಪಾಠ ಹೇಳಲು `interest' ಇಲ್ಲವಂತೆ! ಅದರ ಬದಲು ತನ್ನ ಬಂಡವಾಳಕ್ಕೆ ಬಡ್ಡಿ ದೋಚಲು ಮಾತ್ರ full interest ಅಂತೆ! ತನ್ನ ಬಳಿ ಟ್ಯೂಷನ್‌ಗೆ ಬರುವವರಿಗೆ ಈ ಅಜ್ಜ ಪರೀಕ್ಷೆಯಲ್ಲಿ help ಮಾಡುತ್ತಾನಂತೆ. ಇದನ್ನು ಸತ್ಯ ಎಂದು ನಂಬಿದ ಹಳ್ಳಿಯ ವಿದ್ಯಾರ್ಥಿಗಳು ಇವನ ಬಳಿ ಟ್ಯೂಷನ್ ಸೇರಲು ಪೈಪೋಟಿ ನಡೆಸುತ್ತಾರೆ. ಆದರೆ ಅಸಲಿಗೆ ಅಜ್ಜನಿಗೆ ಗೊತ್ತಿರುವ ಮ್ಯಾಥ್ಸ್ ಅಂದರೆ ಬಡ್ಡಿ, ಚಕ್ರಬಡ್ಡಿ ಮಾತ್ರ. So ಅಲ್ಲಿಗೆ ಇವನ ಬಳಿ ಟ್ಯೂಷನ್ ಹೋದವರಿಗೆ SSLC ಗಣಿತ ಪರೀಕ್ಷೆಯಲ್ಲಿ ಸಿಂಗಲ್ ಡಿಜಿಟ್ ಲಾಟರಿ ಹೊಡೆಯೋದು ಗ್ಯಾರಂಟಿ!

ವಸಂತಕುಮಾರನಂತೆ ಇವನು ಚಪಲಚನ್ನಿಗರಾಯನೇ. ಇಷ್ಟರಲ್ಲೇ ಇವನಿಗೂ ವಿದ್ಯಾರ್ಥಿನಿಯರ ಪಾಲಕರಲ್ಲ.... ವಿದ್ಯಾರ್ಥಿನಿಯರೇ ಮಂಗಳಾರತಿ ಮಾಡಲಿದ್ದಾರೆ.

ಮೇಲಿನ ಮೂವರು ಅಡ್ನಾಡಿ ಶಿಕ್ಷಕರಿರುವ ಸರ್ಕಾರಿ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯದ ಅಭಿವೃದ್ಧಿ ಸಮಿತಿಗೆ ಶಾಸಕ ಎನ್. ಎಸ್. ಭೋಜರಾಜ ಅಧ್ಯಕ್ಷನಾಗಿದ್ದಾಗಲೇ ಈ ಎಲ್ಲ ಹಡಬೆ ಕೆಲಸಗಳು ನಡೆದಿವೆ. ಆರ್.ಎಂ. ಮಾಡಲಗೇರಿ ಎಂಬ ಪ್ರಿನ್ಸಿಪಾಲ್ ಬಡ್ತಿ ಹೊಂದಿ ಗುಲ್ಬರ್ಗಾಕ್ಕೆ ಟ್ರಾನ್ಸ್‌ಫರ್ ಆದ ಕೂಡಲೇ ಪಿ.ಎನ್. ಕಟ್ಟಿ ಮತ್ತು ವಿಜಯರಾವ್ ಕುಪನೇಶಿ ಎಂಬ ಬ್ರಾಹ್ಮಣರಿಬ್ಬರು ಇನ್‌ಚಾರ್ಜ್ ಪ್ರಿನ್ಸಿಪಾಲ್ ಆಗಲು ರೋಡ್‌ರೋಡ್‌ನಲ್ಲಿ ಬಡಿದಾಡಿ, ಲಾಠಿಚಾರ್ಜ್ ಆಗುವಂತಹ ಪರಿಸ್ಥಿತಿ ಸೃಷ್ಟಿಸಿದ್ದರು. ಆದರೆ ಮೂರುವರ್ಷದಿಂದ ಪ್ರಿನ್ಸಿಪಾಲ್ ಆಗಿರುವ ಮಲ್ಲಿಕಾರ್ಜುನ ಇದ್ದುದರಲ್ಲಿ ಶಿಸ್ತಿನ ಮನುಷ್ಯ.... ಆದರೆ ಇಸ್ಪೀಟು, ಬಡ್ಡಿ ವ್ಯವಹಾರ, ಲಂಪಟತನಗಳಲ್ಲಿ ಮುಳುಗಿರುವ ಮಾಸ್ತರರಿಗೆ ಮೂಗುದಾರ ಹಾಕುವುದಕ್ಕೆ ಮಲ್ಲಿಕಾರ್ಜುನರಿಗೂ ಸಾಧ್ಯವಾಗುತ್ತಿಲ್ಲ.

ಧರ್ಮಸಿಂಗ್ ಸಿ.ಎಂ. ಆಗಿದ್ದಾಗ ರಾಜಕೀಯ ಕಾರ್ಯದರ್ಶಿಯಾಗಿ ಮೆರೆದಿದ್ದ ಭೋಜರಾಜನಿಗೆ ಮಾನ್ವಿಯ ಶಿಕ್ಷಣ ಕುರಿತು ವಿಚಾರಿಸಲು [illegible] ಬಿಡುವಿಲ್ಲ, ರೋಸಿ ಹೋದ ಜನ ಭೌತಶಾಸ್ತ್ರದ ಕಾಮಭೂತ ವಸಂತನಿಗೆ ಒದೆ ನೀಡಿ [illegible] [illegible]

ಜಿಲ್ಲಾ ಶಿಕ್ಷಣ ಇಲಾಖೆ ಎಚ್ಚೆತ್ತುಕೊಳ್ಳದಿದ್ದರೆ ಅದಕ್ಕೂ ವಸಂತನಿಗಾದ ಗತಿಯೇ ಕಾದಿರುವಂತಿದೆ.

-ವರದಿಗಾರ

ತೆಹೆಲ್ಕಾದಲ್ಲಿ 'ಲಂಕೇಶ್'

ಸಂಪಾದಕ, ಸಾಹಿತಿ, ಸಿನಿಮಾ ನಿರ್ದೇಶಕ, ನಾಟಕಕಾರ, ವಿಡಂಬನಕಾರ, ಕವಿ, ಅಧ್ಯಾಪಕ- ಇವೆಲ್ಲವೂ ಆಗಿದ್ದು ವ್ಯವಸ್ಥೆ ವಿರುದ್ಧ ಹೋರಾಡಿದ್ದ ಪತ್ರಕರ್ತ ಪಿ. ಲಂಕೇಶರ 71 ನೇ ಹುಟ್ಟುಹಬ್ಬವನ್ನು ಆಚರಿಸುವ ಮೂಲಕ ಅವರ ಪುತ್ರಿಯರು ಮತ್ತು ಪತ್ನಿ ಅವರನ್ನು ಕರ್ನಾಟಕದ ಜನ ಮಾನಸದಲ್ಲಿ ಜೀವಂತವಾಗಿರಿಸಿದ್ದಾರೆ.

ಇದೇ ಮಾರ್ಚ್ 8 ರಂದು ಈ ಮೂವರು ಮಹಿಳೆಯರು ಏರ್ಪಡಿಸಿದ್ದ 'ಲಂಕೇಶ್ 71' ಕಾರ್ಯಕ್ರಮಕ್ಕೆ ಲಂಕೇಶ್ ಅಭಿಮಾನಿಗಳ ಮಹಾಪೂರವೇ ಬಂದಿತ್ತು. ವೇದಿಕೆಯ ಮೇಲಿದ್ದ ಚಿತ್ರದಿಂದ ಲಂಕೇಶರು ಅರ್ಧ ನಗೆ ಬೀರುತ್ತಿದ್ದರು. ಆ ಅರ್ಧ ನಗೆಯೇ ಅವರ ಎದೆಗಾರಿಕೆಯ ಬರಹದಲ್ಲಿ ಮತ್ತು ವಿಡಂಬನೆಯ ಶೈಲಿಯಲ್ಲೂ ಅಡಗಿರುತ್ತಿತ್ತು.

ಇವತ್ತು ಲಂಕೇಶರು ಬದುಕಿದ್ದರೆ ಅವರು ತಮ್ಮ ಪೆನ್ನಿಗೆ ಇನ್ನಷ್ಟು ಗರಿಗಳನ್ನು ಸೇರಿಸಿಕೊಳ್ಳುತ್ತಿದ್ದರು; ಕಿರೀಟಕ್ಕಲ್ಲ, ಏಕೆಂದರೆ ಅವರು ಗರ್ವದ ಕಿರೀಟಗಳನ್ನು ದ್ವೇಷಿಸುತ್ತಿದ್ದರು. ಅದು ಪಿ. ಲಂಕೇಶ್-ಯಾರನ್ನೂ ಬಿಡದ ಅವರ ಲೇಖನಿಯ ಕಾರಣಕ್ಕೆ ಕನ್ನಡಿಗರಿಂದ ಪ್ರೀತಿಸಲ್ಪಡುತ್ತಿದ್ದವರು ಮತ್ತು ದ್ವೇಷಿಸಲ್ಪಡುತ್ತಿದ್ದವರು! 1980 ರಲ್ಲಿ ವಾರ ಪತ್ರಿಕೆ ಆರಂಭಿಸಿದಾಗಿನಿಂದ ಸತತ 20 ವರ್ಷಗಳ ಕಾಲ ಲಂಕೇಶರ ಬರಹಗಳು ಓದುಗರ ಪ್ರಜ್ಞೆ ಮತ್ತು ಹುಡುಕಾಟಗಳ ಹಸಿವನ್ನು ತಣಿಸಿದ್ದವು. ಅವರು ಅಪಾಯದಲ್ಲೇ ಬರೆದರು; ಮತ್ತು ಬದುಕಿದರು. ಜನರು ಬಯಸಿದಂತೆಯೇ ಭ್ರಷ್ಟತೆಯ ಮುಖಗಳನ್ನು ಬೆತ್ತಲು ಮಾಡಿದ ಲಂಕೇಶ್ ರಾಜಕಾರಣಿಗಳನ್ನು ಜಾಲಾಡುತ್ತಾ, ಗಣ್ಯರ ದೋಷಗಳನ್ನು ಖಂಡಿಸುತ್ತಾ, ಅಧಿಕಪ್ರಸಂಗಿ ಸಾಹಿತಿಗಳನ್ನೂ ಜರೆದರು. ತಮ್ಮದೇ ಬ್ರ್ಯಾಂಡ್‌ನೇಮ್ ರೂಪಿಸಿಕೊಂಡ ಲಂಕೇಶ್ 2000 ರಲ್ಲಿ ಕೊನೆ ಯುಸಿರೆಳೆಯುವವರೆಗೂ ನಿರಂತರವಾಗಿ ಬರೆಯುತ್ತಲೇ ಇದ್ದರು.


ತಮ್ಮ 'ಲಂಕೇಶ್ ಪತ್ರಿಕೆ' ಮೂಲಕ ಅಸಂಖ್ಯಾತ ಪ್ರಭುತ್ವವಾದಿ ವೈರಿಗಳನ್ನು ಜಾಲಾಡಿದ ಲಂಕೇಶ್, ಸಾವಿರಾರು ಕನ್ನಡಿಗರಿಗೆ ಪೂಜ್ಯಭಾವನೆಗಳಿಲ್ಲದ ವಿಮರ್ಶೆಯ ಸಂಕೇತದಂತೆ ಗೋಚರಿಸುತ್ತಾರೆ. ಲಂಕೇಶ್ ದಮನಿತರು ಮತ್ತು ಅಲ್ಪಸಂಖ್ಯಾತರ ಪರ ನಿಂತು ಹೋರಾಡಿದರು. ಅವರು ಭ್ರಷ್ಟಾಚಾರ ಮತ್ತು ಕೋಮುವಾದಿಗಳ ವಿರುದ್ಧದ ಸಮರಕ್ಕೆ ನುಗ್ಗಿದ ಮುಂದಾಳು ಆಗಿದ್ದರು.

ಸಾಕಷ್ಟು ಯುವ ಪ್ರತಿಭೆಗಳನ್ನು ಪರಿಚಯಿಸಿ, ಬೆಳೆಸಿದರು ಲಂಕೇಶ್. ಇವತ್ತು ಪತ್ರಿಕೋದ್ಯಮ ಮತ್ತು ಸಾಹಿತ್ಯದಲ್ಲಿ ಸಾಧನೆ ಮಾಡಿರುವ ಬಹುಪಾಲು ಬರಹಗಾರರು ತಮ್ಮ ಯಶಸ್ಸಿಗೆ ಲಂಕೇಶ್ ಕಾರಣಕರ್ತರು ಎನ್ನುತ್ತಾರೆ.

ಅಂದಿನ ಸಮಾರಂಭದಲ್ಲಿ ಲಂಕೇಶ್‌ರ ಆಪ್ತರಾಗಿದ್ದ ಕೆ. ರಾಮದಾಸ್ ಕೋಮುವಾದಿಗಳ ರಾಜಕಾರಣವನ್ನು ಚುಚ್ಚಿದರೆ, ಲಂಕೇಶ್‌ರ ಇನ್ನೊಬ್ಬ ಮಿತ್ರ ಎಚ್.ಎಲ್. ಕೇಶವಮೂರ್ತಿ ಲಂಕೇಶ್ ಎಂದಾಕ್ಷಣ ಬರಹದ ಮೂಲಕ ಸೇಡು, ರಾಜಕೀಯ, ವಿವಾದಿತ ದೃಷ್ಟಿಕೋನ ಗಳೆಲ್ಲ ಕಣ್ಮುಂದೆ ಬರುತ್ತವೆ ಎಂದರು. ತುಡಿತ ಮತ್ತು ಆಂತರಿಕ ಸಂಘರ್ಷಗಳಿಲ್ಲದ ಸಮಕಾಲೀನ ಬರಹಗಾರರ ಕುರಿತು ವಿಷಾದಿಸಿದ ಭಾಷಣಕಾರರೆಲ್ಲರ ತುರ್ತು ಬೇಡಿಕೆ 'ಲಂಕೇಶ್ ಜೀವಿಸುತ್ತಿರಲೇಬೇಕು' ಎಂಬುದೇ ಆಗಿತ್ತು.

ಈ ಸಮಾರಂಭ ಆಯೋಜಿಸಿದ್ದು ಅಂದು ಲಂಕೇಶ್ ಆರಂಭಿಸಿದ 'ಲಂಕೇಶ್ ಪತ್ರಿಕೆ'ಯ ಸಿಬ್ಬಂದಿ ಅಲ್ಲ; ಬದಲಾಗಿ ಮಕ್ಕಳಾದ 'ಲಂಕೇಶ್' ವಾರಪತ್ರಿಕೆ ಸಂಪಾದಕಿ ಗೌರಿ ಲಂಕೇಶ್, ಚಲನಚಿತ್ರ ನಿರ್ದೇಶಕಿ ಕವಿತಾ ಲಂಕೇಶ್ ಮತ್ತು ಲಂಕೇಶ್‌ರ ಪತ್ನಿ ಇಂದಿರಾ ಲಂಕೇಶ್‌ರವರು ಇಂತಹ ಸಮಾರಂಭ ನಡೆಸುವ ಮೂಲಕ ಹೋರಾಟ ವನ್ನು ಮುಂದುವರೆಸುವ ಛಲ ತೋರಿದರು. ಅಪ್ಪನ ಸಿನಿಮಾ ನಿರ್ಮಾಣದ 'ಜೀನ್' ಪಡೆದಿರುವ ಕವಿತಾ ಲಂಕೇಶ್ ಪ್ರಥಮ ಉತ್ತಮ ನಿರ್ದೇಶನಕ್ಕಾಗಿ ನೀಡುವ ಪ್ರಶಸ್ತಿಯನ್ನು ಈ ಬಾರಿ ಬಂಗಾಳಿ ಚಿತ್ರ 'ಹರ್ಬರ್ಟ್' ನಿರ್ದೇಶಕ ಸುಮನ್ ಮುಖರ್ಜಿಗೆ ನೀಡಿದರು.

ತನ್ನ ಇತ್ತೀಚಿನ ಸಂಚಿಕೆಯಲ್ಲಿ ಪ್ರಖ್ಯಾತ ಇಂಗ್ಲಿಷ್ ವಾರ ಪತ್ರಿಕೆ 'ತೆಹೆಲ್ಕಾ' ಪಿ. ಲಂಕೇಶ್ ಮತ್ತು 'ಲಂಕೇಶ್' ವಾರ ಪತ್ರಿಕೆ ಕುರಿತು ಒಂದು ಪುಟದ ಲೇಖನ ಪ್ರಕಟಿಸಿದೆ. ಎಂ. ರಾಧಿಕಾ ಬರೆದಿರುವ ಈ ಲೇಖನದಲ್ಲಿ ಇವತ್ತು ಲಂಕೇಶರ ಆಶಯಗಳ ಮತ್ತು ಕನಸುಗಳ ನಿಜವಾದ ವಾರಸುದಾರ ನಿಮ್ಮ ನೆಚ್ಚಿನ ಈ ಪತ್ರಿಕೆ ಎಂದು ದಾಖಲಿಸಿದ್ದಾರೆ. ನಾವು ನಮ್ಮ ಬೆನ್ನು ತಟ್ಟಿಕೊಳ್ಳುವುದಕ್ಕಿಂತ ಇತರರು ನಮ್ಮ ಬೆನ್ನು ತಟ್ಟುವುದು ನಿಜವಾದ ಪ್ರಶಂಸೆ. ಆದ್ದರಿಂದ 'ತೆಹೆಲ್ಕಾ'ದ ಈ ಲೇಖನದ ಅನುವಾದವನ್ನು ನಮ್ಮ ಓದುಗರಿಗಾಗಿ ಹೆಮ್ಮೆಯಿಂದ ಪ್ರಕಟಿಸುತ್ತಿದ್ದೇವೆ. ಏಕೆಂದರೆ ಈ ಯಶಸ್ಸಿನಲ್ಲಿ ನೀವೂ ಪಾಲುದಾರರು!



ಅಪ್ಪನ ಪತ್ರಿಕಾ ವೃತ್ತಿ ಆಯ್ದುಕೊಂಡ ಗೌರಿ ಲಂಕೇಶ್ ಕಳೆದ ವರ್ಷದವರೆಗೂ 'ಲಂಕೇಶ್ ಪತ್ರಿಕೆ'ಯ ಸಂಪಾದಕಿಯಾಗಿದ್ದರು. ಆದರೆ ಆಕೆಯನ್ನು ನಕ್ಸಲೈಟ್ ಹಿತೈಷಿ ಎಂದು 'ಬ್ರ್ಯಾಂಡ್' ಮಾಡಿ ಕ್ಷಿಪ್ರ ತಂತ್ರ ರೂಪಿಸಿದರೇ ಅವರ ಸಹೋದರ ಇಂದ್ರಜಿತ್ ಲಂಕೇಶ್ ಸಂಪಾದಕಿ ಹುದ್ದೆಯಿಂದ ಗೌರಿಯನ್ನು ವಜಾ ಗೊಳಿಸಿದರು.

ಕಳೆದ ವರ್ಷ ಪತ್ರಕರ್ತ, ಅಕಾಡೆಮಿಕ್ ಮತ್ತು ನಕ್ಸಲ್ ಲೀಡರ್ ಸಾಕೇತ್ ರಾಜನ್ ಮತ್ತು ಸಹಚರನನ್ನು ಪೋಲೀಸರು ಕೊಂದು ಹಾಕಿದಾಗ, ಗೌರಿ 'ಶಾಂತಿಗಾಗಿ ನಾಗರಿಕರ ವೇದಿಕೆ' ಮೂಲಕ ಸಾಕೇತ್ ಶವವನ್ನು ಆತನ ತಾಯಿಗೆ ತಲುಪಿಸುವ ಸಲುವಾಗಿ ಹೋರಾಡಿ ದ್ದರು. ಗೌರಿ ಅಂದು ಇಂತಹ ಹಲವಾರು ನಕಲಿ ಎನ್‌ಕೌಂಟರ್ ಗಳ ವಿಷಯವನ್ನು ಸಾರ್ವತ್ರಿಕ ಚರ್ಚೆಯ ವಸ್ತುವನ್ನಾಗಿ ಮಾಡುವಲ್ಲಿ ಸಫಲರಾಗಿದ್ದರು.

ಪ್ರಭುತ್ವದ ಕೆಂಗಣ್ಣಿಗೆ ಗುರಿಯಾಗುವುದು ಗೌರಿಗೆ

"ನ್ಯೂಸ್ ರಿಪೋರ್ಟಿಂಗ್ ಅಸಂಬದ್ಧವಾಗುತ್ತಿದೆ...."

ಅಮೀರ್‌ಖಾನ್ ಸರ್ಫರೋಷ್

ಜನಪ್ರಿಯತೆ, ಸ್ಟಾರ್‌ಗಿರಿಯ ನಡುವೆಯೂ ಸಂವೇದನಾಶೀಲತೆ ಉಳಿಸಿಕೊಂಡಿರುವ, ಈ ಸಮಾಜದ ಸ್ವಾಸ್ಥದ ಬಗ್ಗೆ ಕಾಳಜಿ ಹೊಂದಿರುವ ಅಮೀರ್ ಖಾನ್ ಭಾರತೀಯ ಮಾಧ್ಯಮಗಳ ಕಾರ್ಯಶೈಲಿ ಬಗ್ಗೆ ಕಿಡಿಕಾರಿದ್ದಾನೆ. ನಮ್ಮ ಓದುಗರಿಗಾಗಿ ಅಮೀರ್‌ನ ಈ ವಿಚಾರಗಳ ಒಟ್ಟಾಭಿಪ್ರಾಯವನ್ನು ಇಲ್ಲಿ ನೀಡುತ್ತಿದ್ದೇವೆ.



ಇತ್ತೀಚಿನ ವರ್ಷಗಳಲ್ಲಿ ಟಿವಿ ಮತ್ತು ಪತ್ರಿಕೆಗಳ ವರದಿಗಾರಿಕೆಯನ್ನು ನೋಡಿ ನನಗೆ ದಿಗ್ಭ್ರಮೆಯಾಗುತ್ತಿದೆ. ಇದು ಅತಿ ಕಿರಿಕಿರಿ ಉಂಟು ಮಾಡುತ್ತಿದೆ. ...ಅವರ ಮುಖವಿಲ್ಲದ ... ಹೆಡ್‌ಲೈನ್‌ಗಳಾಗುತ್ತಿವೆ.

ಮುಖ್ಯವೇ ಅಲ್ಲದ ಬರೀ ಭಾವೋದ್ರೇಕಕಾರಿ ಸಂಗತಿಗಳು ಪ್ರಮುಖ ಸುದ್ದಿಗಳಾಗಿ ಚಿತ್ರಗೊಳ್ಳುತ್ತಲೇ ಇವೆ. ಸಿನ್ನ ಹುಟ್ಟುವ ಚಾನೆಲ್‌ಗಳು ...ಕಾಸಗಿ ಸಂಪತ್ತಿ ವಿರಿಸಿಕೊಳ್ಳಲು ಅನಾರೋಗ್ಯಕರ ಸ್ಪರ್ಧೆಗೆ ಬಿದ್ದಿವೆ. ಹಾಗೆಯೇ ಪತ್ರಿಕೆಗಳಲ್ಲೂ ಈ ಸ್ಪರ್ಧೆ ಶುರುವಾಗಿದೆ. ಓದುಗ ಅಥವಾ ವೀಕ್ಷಕರನ್ನು ಹೆಚ್ಚಿಸಿಕೊಳ್ಳುವ ಭರದಲ್ಲಿ ಮಾಧ್ಯಮಗಳು ಅತಿ ಕೆಳಮಟ್ಟಕ್ಕೆ ಇಳಿಯುತ್ತಿವೆ. ಇದು ಹಣ ಮಾಡುವ ದಂಧೆಯಷ್ಟೇ. ಒಟ್ಟಿನಲ್ಲಿ ಅಧಿಕ ಜಾಹೀರಾತುಗಳನ್ನು ಹೆಕ್ಕಿಕೊಳ್ಳುವ ಧಾವಂತದಲ್ಲಿ ಅವು ಸಮಾಜದ ಬಹುಮುಖ್ಯ ಅಂಶವಾದ ನ್ಯೂಸ್ ರಿಪೋರ್ಟಿಂಗ್‌ನ್ನೇ ವಿನಾಶ ಮಾಡುತ್ತಿವೆ. ದೇಶದಲ್ಲಿ ಏನಾಗುತ್ತಿದೆ ಎನ್ನುವುದರ ಸರಿಯಾದ ಸುದ್ದಿ ಮತ್ತು ಸರಿಯಾದ ದೃಷ್ಟಿಕೋನಗಳನ್ನು ಅರಿಯುವ ಹಕ್ಕು ಈ ದೇಶ ಮತ್ತು ಸಮಾಜಕ್ಕಿದೆ.

ಹಿಂದೆಲ್ಲ ತುಣುಕು ಸುದ್ದಿಗಳಾಗುತ್ತಿದ್ದ ಅರ್ಧಪುಟದ ಮನರಂಜನೆಯ ವಿಷಯಗಳು ಇವತ್ತು ಹೆಡ್‌ಲೈನ್ ಗಳಾಗುತ್ತಿವೆ.

ರೈತರ ಆತ್ಮಹತ್ಯೆ ಅಥವಾ ನಮ್ಮ ಬದುಕು ಗಳನ್ನು ತಟ್ಟುವ ಯಾವುದೇ ಮಹತ್ವದ ವಿಷಯಗಳು ಇಂದು ಪತ್ರಿಕೆಗಳ ಯಾವುದೋ ಮೂಲೆಯಲ್ಲಿ ಸಣ್ಣದಾಗಿ ಪ್ರಾಮುಖ್ಯತೆಯಿಲ್ಲದ ವರದಿಗಳಾಗಿ ಪ್ರಕಟವಾಗುತ್ತಿವೆ. ನನಗೆ ಇದು ತೀರಾ ವಿನಾಶಕಾರಿ ಮತ್ತು ಎಚ್ಚರಿಕೆಯ ಗಂಟೆ ಯಾಗಿ ಕಾಣಿಸುತ್ತಿದೆ.

ಯಾವನೋ ಐಜಿ ಎಲ್ಲೋ ರಾಧಾ ಆದದ್ದು ಯಾವಳೋ ನಟಿ ತನ್ನ ನಾಯಿ ಕಳೆದುಕೊಂಡಿದ್ದು ಯಾರದೋ ಅಫೇರ್ ಮುರಿದುಬಿದ್ದಿದ್ದು ಇನ್ಯಾವನೋ ಹಾಸ್ಪಿಟಲ್ ಸೇರಿದ್ದು-ಈ ಎಲ್ಲ ವೈಯಕ್ತಿಕ ಸಂಗತಿಗಳು ರಾಷ್ಟ್ರೀಯ ಸುದ್ದಿಗಳಾಗುತ್ತಿವೆ. ಜನ ಸಿನಿಮಾ ಮತ್ತು ಮನರಂಜನೆ ವಿಷಯಗಳಲ್ಲಿ ಆಸಕ್ತರಾಗಿರುತ್ತಾರೆ ಅಂದ ಮಾತ್ರಕ್ಕೆ ಅವೇ ವಿಷಯಗಳಿಗೆ ಪ್ರಾಮುಖ್ಯತೆ ನೀಡುವುದು ದ್ರೋಹವಾಗುತ್ತದೆ ಎಂದು ನನಗನಿಸುತ್ತಿದೆ.

ಇತ್ತೀಚಿನ ನನ್ನ ವಿವಾಹದ ವಿಷಯದಲ್ಲಿ ಮಾಧ್ಯಮಗಳು ವರ್ತಿಸಿದ ರೀತಿ ಅಸಹ್ಯಕರವಾಗಿತ್ತು. ತಮ್ಮ ಹಣಕಾಸಿನ ಲಾಭಗಳಿಗಾಗಿ ನಾವು ಬಟ್ಟೆ ಧರಿಸುವುದನ್ನು, ನಾವು ಮದುವೆಯಾಗುವುದನ್ನು ರಾಷ್ಟ್ರೀಯ ಸುದ್ದಿ ಎಂಬಂತೆ ಬಿಂಬಿಸಲಾಗುತ್ತಿದೆ. ನಾನು ಮದುವೆಯಾಗುತ್ತಿರುವುದು ಒಂದು ಸಣ್ಣ ನ್ಯೂಸ್ ಐಟಂ ಅಷ್ಟೇ. 'ಮಂಗಲ್‌ಪಾಂಡೆ', 'ರಂಗ್ ದೇ ಬಸಂತಿ' ಚಿತ್ರಗಳ ಬಿಡುಗಡೆ ವೇಳೆಯೂ ಮಾಧ್ಯಮಗಳು ವರ್ತಿಸಿದ ರೀತಿ ನನಗೆ ಹಿಡಿಸಲಿಲ್ಲ, ಆಗ ಮೌನ ವಹಿಸಿದ ನಾನು ಈ ಕುರಿತು ತುಂಬಾ ಯೋಚನೆ ಮಾಡಿಯೇ ಈಗ ಮಾತಾಡುತ್ತಿದ್ದೇನೆ. ಸಮಾಜದಲ್ಲಿರುವ ವ್ಯಕ್ತಿಯಾಗಿ ಅದು ನನ್ನ ಕರ್ತವ್ಯ ಕೂಡ.

ಸುದ್ದಿ ವರದಿ ಮಾಡುವುದು ರಾಷ್ಟ್ರೀಯ ಹಿತಾಸಕ್ತಿಯ ವಿಷಯವಾಗಬೇಕು. ಈ ಕುರಿತು ಶಾಸನ ತಂದರೂ ಒಳ್ಳೆಯದೇ ಎಂದು ನಾನು ನಂಬಿದ್ದೇನೆ.

ಟೈಮ್ಸ್ ಆಫ್ ಇಂಡಿಯಾದಂತಹ ಪ್ರಮುಖ ಪತ್ರಿಕೆಯೂ ನನ್ನ ವಿವಾಹದ ವಿಚಾರದಲ್ಲಿ ಸುಳ್ಳು ಸುದ್ದಿಗಳನ್ನೇ ಬರೆಯಿತು. ಇವತ್ತಿನ ಪ್ರಮುಖ ಪತ್ರಿಕೆಗಳಿಗೆ ತಮ್ಮ ಒಂದು ಸಂಚಿಕೆಯ ಐದು ಪುಟಗಳಲ್ಲಾದರೂ ಬೆತ್ತಲೆ ಮಹಿಳೆಯ ಫೋಟೋ ಪ್ರಕಟಿಸುವ ಆಸೆ ಇದ್ದಂತಿದೆ (ನಗುತ್ತಾ....)

ಪ್ರೆಸ್ ಮೇಲೆ ಸೆನ್ಸಾರ್‌ನ್ನು ನಾನು ವಿರೋಧಿಸುತ್ತೇನೆ. ಈ ದೇಶದಲ್ಲಿರುವ ಪ್ರತಿಯೊಬ್ಬನಿಗೂ ಅವನ/ಳ ಖಾಸಗಿ ಬದುಕಿದೆ; ಅದನ್ನು ರಕ್ಷಿಸುವುದು ಇಂದಿನ ತುರ್ತಾಗಿದೆ. ನಾನೇನೂ ತಪ್ಪು ಮಾಡದೇ ಇದ್ದಾಗ ತಮ್ಮ ಮ್ಯಾಗಜೀನ್, ಚಾನೆಲ್‌ಗಳನ್ನು ಮಾರಿಕೊಳ್ಳಲು ನನ್ನ ಮನೆಗೆ ನುಗ್ಗುವುದು ಅಧಿಕ ಪ್ರಸಂಗವಾಗುತ್ತದೆ.

10-15 ವರ್ಷಗಳ ಹಿಂದೆ ಇದ್ದ ಸಿನಿಮಾ ಪತ್ರಿಕೋದ್ಯಮದ ಸ್ಥಿತಿಗೆ ಇಂದು ಮುಖ್ಯವಾಹಿನಿಗಳು ಬಂದು ನಿಂತಿವೆ. ಸಿನಿಮಾ ಪತ್ರಕರ್ತರು ತಮ್ಮ ಕಲ್ಪನೆಯ ಸುದ್ದಿ ಸೃಷ್ಟಿಸುತ್ತಾ ಬರೀ ಅಯೋಗ್ಯ ವರದಿಗಳನ್ನೇ ಬರೆಯುತ್ತಿದ್ದಾರೆ. ಕೆಲವೇ ಕೆಲವು ವಿಶ್ವಾಸಾರ್ಹ ಪತ್ರಕರ್ತರನ್ನು ಬಿಟ್ಟು ಇತರರ ಜೊತೆ ಸಂದರ್ಶನಕ್ಕೆ ಒಪ್ಪಬಾರದೆಂದು ನಾನು ಆರಂಭದಲ್ಲೇ ನಿರ್ಧರಿಸಿಬಿಟ್ಟಿದ್ದೆ.

ನನ್ನ ಪ್ರಕಾರ ಜರ್ನಲಿಸಂನ ಮುಖ್ಯ ಧೋರಣೆಗಳು ಹೇಗಿರಬೇಕೆಂದರೆ :

ಮೊದಲನೆಯದಾಗಿ, ಜರ್ನಲಿಸಂ ಎನ್ನುವುದು ತೊಡೆ ಮೇಲಿನ ನಾಯಿಮರಿಯಾಗದೇ, ಸಮಾಜದ ಕಾವಲುನಾಯಿ (watch dog) ಯಂತೆ ಕಾರ್ಯ ನಿರ್ವಹಿಸಬೇಕು. ಸುದ್ದಿಗಳನ್ನು ವರದಿ ಮಾಡುವ ವಿಷಯದಲ್ಲಿ ಮಾಧ್ಯಮಗಳ ಮೇಲೆ ಮಹತ್ವದ ಜವಾಬ್ದಾರಿಯಿದೆ. ಒಬ್ಬ ವ್ಯಕ್ತಿ ತನ್ನ ಬಾಯ್‌ಫ್ರೆಂಡ್, ಗರ್ಲ್‌ಫ್ರೆಂಡ್ ಜೊತೆ ಪರ್ಸನಲ್ಲಾಗಿ ಮಾತಾಡುವುದನ್ನು ಪ್ರಕಟಿಸುವುದು ಅಕ್ಷಮ್ಯ ಅಪರಾಧ.

* * * * * *

ಬುದ್ಧಿಯನ್ನು ಏಕಾಂತದಲ್ಲಿ ಹಾಗೂ ಚಾರಿತ್ರ್ಯವನ್ನು ಸಮಾಜದಲ್ಲಿ ಬೆಳೆಸಿಕೊಳ್ಳಲು ಸಾಧ್ಯ -ಗಯಟೆ

ಸವೇನಲ್ಲ. ಸಂಘ ಪರಿವಾರ ಬಾಬಾಬುಡನ್‌ಗಿರಿ ...ನ ಸೂಫಿ ದರ್ಗಾವನ್ನು ಕೋಮುವಾದದ ವಿಷಯ ...ಮುತ್ತಿರುವುದನ್ನು ವಿರೋಧಿಸಿದ್ದ ಗೌರಿಯನ್ನು ...ಎಂ. ಕೃಷ್ಣ ಸರ್ಕಾರ ಜೈಲಿಗೆ ಹಾಕಿತ್ತು. ಗುಜರಾತ್ ...ಚಾರದ ನಂತರ ವಿಷಕಾರಿ ವಿಎಚ್‌ಪಿಗಳ ವಿರುದ್ಧ ...ಶ್ ಕಾರ್ನಾಡ್, ಅನಂತಮೂರ್ತಿಯಂತಹ ...ಯರೊಂದಿಗೆ ಗೌರಿ ಆಂದೋಲನ ರೂಪಿಸಿದ್ದರು. ...ಆದರೆ ಪಾವಗಡದಲ್ಲಿ ನಕ್ಸಲರು ಪೋಲೀಸರನ್ನು ...ದ ನಂತರ ಸಹೋದರ ಇಂದ್ರಜಿತ್ ಲಂಕೇಶ್ ... ವಿರುದ್ಧ ಹಲವಾರು ಆಪಾದನೆಗಳನ್ನು ...ದ್ದಲ್ಲದೇ ಪೋಲೀಸರಿಗೆ ದೂರನ್ನೂ ನೀಡಿದ್ದರು. ...ಬದ್ಧತೆಯಿಲ್ಲದ, ಪ್ರಭುತ್ವದ ವಿರುದ್ಧವಲ್ಲದ ...ರ್ತನಾಗಿರುವ ಸಹೋದರನಿಂದ ದೂರವಾದ ...ತನದ ಗೌರಿ, ಲಂಕೇಶ್‌ರವರ ಒಡನಾಡಿಗಳು, ...ತರು ಹಾಗೂ ತನ್ನ ತಾಯಿ, ತಂಗಿಯ ಸಹಾಯದಿಂದ ...ಲ ನಾಲ್ಕು ವಾರಗಳ ಅವಧಿಯಲ್ಲಿ ಹೊಸ ...ಕೇಶ್' ವಾರಪತ್ರಿಕೆಯ ಮೊದಲ ಸಂಚಿಕೆ ...ರತಂದಿದ್ದರು. ಈಗ ಈ 'ಲಂಕೇಶ್' ವಾರಪತ್ರಿಕೆಯೇ ...ಲಂಕೇಶ್‌ರ ನಿಜವಾದ ವಾರಸುದಾರನಾಗಿದೆ. ಅಷ್ಟೇ ... 'ಲಂಕೇಶ್' ಮೂಲಕ ಲಂಕೇಶ್ ಕನಸುಗಳು ...ಂತವಾಗಿವೆ ಎನ್ನುವುದು ಬಹುತೇಕರ ಅಭಿಪ್ರಾಯ.

"ಸರ್ಕಾರದ ಮುಂದುವರಿದ ಉಪಟಳಗಳ ...ವೆಯೂ ನನಗೀಗ ಹೆಚ್ಚು ಸ್ವಾತಂತ್ರ್ಯವಿದೆ. ರಾಜ್ಯದಲ್ಲಿ ...ರೋಧ ಪಕ್ಷ ಎಂಬುದೇ ಇಲ್ಲ. ಕಾಂಗ್ರೆಸ್ ಸಹ ...ಕಾಮಕಾರಿ ವಿರೋಧ ಪಕ್ಷವಲ್ಲ. ನನ್ನ ಅಪ್ಪ ...ವಾಗಲೂ ವಿರೋಧ ಪಕ್ಷವಾಗೇ ಇದ್ದರು," ಎಂದು ... ಹೇಳುತ್ತಾರೆ. ಮತ್ತೆ ಇಂಗ್ಲಿಷ್ ಜರ್ನಲಿಸಂ ಸೇರಿ ...ಚ್ಯ ದೆಹಲಿ ಕಡೆ ಓಡುವುದಕ್ಕಿಂತ ಬೆಂಗಳೂರಲ್ಲೇ ...ದುಕೊಂಡಿರುವುದರ ಬಗ್ಗೆ ಗೌರಿಗೆ ಸಂತೋಷವಿದೆ. ... ತಂದೆಯ ಪ್ರಭುತ್ವ ವಿರೋಧಿ ನಿಲುವನ್ನು ...ದುವರೆಸಿಕೊಂಡು ಹೋಗುತ್ತಿರುವುದರ ಕುರಿತೂ ... ಹೆಮ್ಮೆಯಿದೆ. ಕವಿತಾ ಹೇಳುವಂತೆ "ಚರ್ಚೆಗಳು, ... ತಂಡಗಳು ಏರ್ಪಡಿಸುತ್ತಿರುವ ಲಂಕೇಶ್‌ರ ...ಕಗಳು, ಲಂಕೇಶ್ ಪುಸ್ತಕಗಳ ಮೂಲಕ ಲಂಕೇಶ್ ಜೀವಂತವಾಗಿರುತ್ತಾರೆ...."

...71 ರಲ್ಲೂ ಜೀವನ ಆರಂಭವಾಗಬಲ್ಲದು ...ಬುದಕ್ಕೆ ಇದು ನಿದರ್ಶನದಂತಿದೆ.

●

...ನಾನು 'ದಿ ಹಿಂದೂ', 'ತೆಹೆಲ್ಕಾ' ಮತ್ತು 'ದಿ ...ಯನ್ ಎಕ್ಸ್‌ಪ್ರೆಸ್'ಗಳನ್ನು ಬಿಟ್ಟು ಇತರ ವೃತ್ತಪತ್ರಿಕೆ, ...ಗಜೀನ್‌ಗಳನ್ನು ಓದುವುದನ್ನು ನಿಲ್ಲಿಸಿಬಿಟ್ಟಿದ್ದೇನೆ. ... ಗೊತ್ತಿರದ ಪ್ರಾದೇಶಿಕ ಭಾಷೆಗಳಲ್ಲಿ ಕೆಲವೇ ... ಒಳ್ಳೆಯ ಪತ್ರಿಕೆಗಳಿವೆ. ನಾನು ನೋಡುವ ...ರ್ ದೂರದರ್ಶನ. ಸಾಮಾಜಿಕವಾಗಿ ಮತ್ತು ...ಯ ಮಹತ್ವವಿರುವ ಸುದ್ದಿಗಳನ್ನು ಮೊದಲು ...ಡಬಯಸುತ್ತೇನೆ.

...ಯಾವಳದೋ ನಟಿಯ ನಾಯಿ ಕಳೆದಿದ್ದನ್ನೋ ... ಇನ್ನೊಬ್ಬಳ ಬೆಕ್ಕಿಗೆ ಮದುವೆ ಆಗುತ್ತಿರುವುದನ್ನು ...ಡುವ ಇಚ್ಛೆಯುಳ್ಳವರಿಗೆ ಬೇಕಾದರೆ ಪ್ರತ್ಯೇಕ ...ಲ್‌ಗಳಿರಲಿ; ನ್ಯೂಸ್ ಚಾನೆಲ್‌ನಲ್ಲಿ ಇವೆಲ್ಲವನ್ನು ...ಕಬೇಡಿ.

...ವತ್ತು ಭೂಕಂಪ ಅಥವಾ ಪ್ರವಾಹದ ಸುದ್ದಿ ...ಸುವಾಗ, ಹಿನ್ನೆಲೆ ಸಂಗೀತ ಬಳಸುವ, ಸ್ಪೇಷಲ್ ... ತೋರಿಸುವ ಅಧ್ವಾನದ ನ್ಯೂಸ್ ಚಾನಲ್‌ಗಳು ...ರುವುದು ಖೇದಕರ.

* * * * * * *

...ಗುಜರಾತ್ ಗಲಭೆ, ಜೆಸ್ಸಿಕಾ ಪ್ರಕರಣಗಳಂತಹ ...ರ ವಿಷಯಗಳಲ್ಲಿ ಮಾಧ್ಯಮಗಳು ವಹಿಸಿದ ...ವನ್ನು ನಾನು ಮೆಚ್ಚುತ್ತೇನೆ. ಗುಜರಾತ್ ...ಯಂತಹ ಮಾರಣ ಹೋಮಗಳನ್ನು ಬಿತ್ತರಿಸಲು ...ರನ್ನು ಅಡ್ಡಿ ಮಾಡುತ್ತಿದ್ದಾಗಲೂ ಮಾಧ್ಯಮಗಳು ...ನ್ನು ಬಿತ್ತರಿಸಿದ್ದು ಮಹತ್ವಪೂರ್ಣವಾಗಿತ್ತು.

* * *


...ಸ್ಲಾಮಿಕ್ ಭಯೋತ್ಪಾದನೆ ಬಗ್ಗೆ ನಾನು ...ವುದು ಇಷ್ಟೇ:

...ನ್ನು ಮುಸ್ಲಿಂ ಎಂದು ಗುರುತಿಸಿಕೊಳ್ಳುತ್ತಾ ...ಮುಕರನ್ನು ಕೊಲ್ಲುವವನು ಖಂಡಿತಾ ಮುಸ್ಲಿಂ ...ಅತ ವಿಶ್ವಾಸದ ವ್ಯಕ್ತಿಯೇ ಅಲ್ಲ. ಈ ಮಾತು ...ಗೂ, ಕ್ರಿಶ್ಚಿಯನ್ ಎಲ್ಲರಿಗೂ ಅನ್ವಯಿಸುತ್ತದೆ.

(ಕೃಪೆ: ತೆಹೆಲ್ಕಾ)

ಕನ್ನಡಕ್ಕೆ : ಮಲ್ಲಿ

ತಂದೆಗೆ ತಕ್ಕ ಮಗ - ಕಾಸಿಗೆ ತಕ್ಕ ಕಜ್ಜಾಯವಲ್ಲ



ಕವಿತಾ ಲಂಕೇಶ್

ನಮ್ಮ ಗಾಂಧಿ ಬಜಾರಿನಲ್ಲಿರುವ ವಿದ್ಯಾರ್ಥಿ ಭವನ್ ಹೋಟೇಲಿಗೆ ಹೋಗಿ ಗರಿಗರಿ ದೋಸೆ ತಿಂದರೆ ಅದರಷ್ಟು ರುಚಿ ಬೇರೆ ಇಲ್ಲ. ಆದರೆ ಒಂದು ವೇಳೆ ಐದು ನಿಮಿಷ ದೂರದಲ್ಲಿರುವ ನಮ್ಮ ಆಫೀಸಿಗೆ ಅದೇ ದೋಸೆಯನ್ನು ಪಾರ್ಸಲ್ ಮಾಡಿಸಿ ತರಿಸಿದರೆ ಗರಿಗರಿಯೆಲ್ಲಾ ಹೋಗಿ ಟುಸ್ಸಾಗಿಬಿಟ್ಟಿರುತ್ತೆ. ತಮಿಳು ಸಿನಿಮಾ ಒಂದನ್ನು ಹತ್ತು ವರ್ಷಗಳ ನಂತರ ಕನ್ನಡಕ್ಕೆ ರೀಮೇಕ್ ಮಾಡಿದರೆ ಗರಿಗರಿಯೆಲ್ಲಾ ಹೋಗಿ ಟುಸ್ ಆಗುತ್ತೆ ಅನ್ನುವುದಕ್ಕೆ 'ತಂದೆಗೆ ತಕ್ಕ ಮಗ' ಸಿನಿಮಾನೇ ಸಾಕ್ಷಿ.

ಇದು 'ತೇವರ್ ಮಗನ್' ಎಂಬ ತಮಿಳು ಸಿನಿಮಾದ ರೀಮೇಕ್. 'ತೇವರ್ ಮಗನ್' ಚಿತ್ರದಲ್ಲಿ ಶಿವಾಜಿ ಗಣೇಶನ್ ಮತ್ತು ಕಮಲ ಹಾಸನ್ ನಟಿಸಿದ್ದರು. 'ತಂದೆಗೆ ತಕ್ಕ ಮಗ' ಸಿನಿಮಾದಲ್ಲಿ ಮೊದಲ ಬಾರಿಗೆ ಅಂಬರೀಶ್ ಮತ್ತು ಉಪೇಂದ್ರ ಒಟ್ಟಾಗಿ ನಟಿಸುತ್ತಿದಾರೆ ಅಂತ ಸುದ್ದಿ ಮಾಡಿತ್ತು. ಆದರೆ ಇವರಿಬ್ಬರೂ ಆ ಅದ್ಭುತ ನಟರ ಪಾತ್ರಗಳಲ್ಲಿ ನಟಿಸಿದ್ದಾರೆಯೇ ಹೊರತು ಅವರಂತೆ ನಟಿಸಿಲ್ಲ. 'ತೇವರ ಮಗನ್' ಅಂದಕಾಲತ್ತಿಲೆ ನಮಗೆ ಸಖತ್ತಾಗಿದೆ ಅನ್ನಿಸಿತ್ತು. ಆ ಸಿನಿಮಾ ಸೂಪರ್ ಹಿಟ್ ಕೂಡ ಆಗಿತ್ತು. ಆದರೆ ಅದಾದ ನಂತರ ಹಲವಾರು ಸಿನಿಮಾಗಳಲ್ಲಿ ಇದೇ ತರಹದ ಕಥೆ ಬಂದು ಹೋಗಿರುವುದರಿಂದ ರಾತ್ರಿ ಮಿಕ್ಕಿದ ಅನ್ನದಲ್ಲಿ ಮರುದಿನ ಚಿತ್ರಾನ್ನ ಮಾಡಿದ ಹಾಗಿದೆ 'ತಂದೆಗೆ ತಕ್ಕ ಮಗ'.


ಉಮಾ ಥಿಯೇಟರಿನ ಮ್ಯಾನೇಜರ್ ನಮಗೆ ಮುಂಚಿತವಾಗೇ ಬನ್ನಿ, ಬಹಳ ರಶ್ ಇರುತ್ತೆ ಅಂತ ಹೇಳಿದ್ದರು. ಮತ್ತೆ ಅದೇ ಹಾಳಾದ ಪಟಾಕಿ, ಜನ, ನೂಕು ನುಗ್ಗಲು ಇರುತ್ತೆ ಅಂತ ಹೋದರೆ, ನಮಗೆ ಆಶ್ಚರ್ಯ ಕಾದಿತ್ತು. ಚಿತ್ರಮಂದಿರದ ಮುಂದೆ ಜನಾನೇ ಕಾಣಲಿಲ್ಲ. ಒಳಗೆ ಸುಮಾರು ನೂರೈವತ್ತು ಜನ ಇದ್ರೇನೋ ಅಷ್ಟೇ. ಉಪೇಂದ್ರ ಮತ್ತು ಅಂಬರೀಶ್ ಸಿನಿಮಾಗೆ ಹೀಗಿದೆಯಲ್ಲಾ ಓಪನಿಂಗ್ ಅಂದುಕೊಂಡೇ ಒಳಗೆ ಹೋದೆವು. ಸಿನಿಮಾದಲ್ಲಿ ಒಳ್ಳೆ ಹಿಟ್ ಆಗುವ ಎಲ್ಲಾ ಅಂಶಗಳು ಇದ್ದರೂ ಧಮ್ಮು ಇಲ್ಲದೆ ಸಪ್ಪೆಯಾಗಿದೆ.

ಕಥೆ: ಚೌಡಪ್ಪ (ಅಂಬರೀಶ್) ಒಳ್ಳೆ ನೀಯತ್ತಿನ ಗೌಡ. ಅವನ ತಮ್ಮ (ಶ್ರೀನಿವಾಸ ಮೂರ್ತಿ) ಲಕ್ವ ಹೊಡೆದು, ಎಂಜಲು ಸುರಿಸುವ ಕೆಟ್ಟ ಗೌಡ. ಚೌಡಪ್ಪನಿಗೆ ಸತ್ಯ (ಉಪೇಂದ್ರ) ಅಂತ ಮಗನಿದ್ದರೆ, ಮೂರ್ತಿಗೆ ಧರ್ಮ (ಆಶೀಶ್ ವಿದ್ಯಾರ್ಥಿ) ಅಂತ ಮಗನಿರುತ್ತಾನೆ. ಒಳ್ಳೆ ಅಪ್ಪನಿಗೆ ಒಳ್ಳೆ ಮಗ. ಕೆಟ್ಟ ಅಪ್ಪನಿಗೆ ಗೂಂಡಾ ಮಗ. ಸತ್ಯ ಲಂಡನ್ನಿನಿಂದ ಮೋಟು ಫ್ರಾಕು ತೊಟ್ಟಿರುವ ಹುಡುಗಿ ಬಾನು (ಸಾಕ್ಷಿ ಶಿವಾನಂದ್) ಜೊತೆ ಹಿಂದಿರುಗುತ್ತಾನೆ. ಇಬ್ಬರೂ ಲಂಡನ್ನಿನಿಂದ ಬಂದಿದ್ದರೂ ಎಸ್.ಎಸ್.ಎಲ್.ಸಿ ಫೇಲ್ ಆಗಿರುವ ಹುಡುಗರ ತರಹ ತಪ್ಪು ತಪ್ಪು ಇಂಗ್ಲಿಷ್ ಮಾತನಾಡುತ್ತಿರುತ್ತಾರೆ. ಇರಲಿ.

ಸತ್ಯನ ಆಸೆ ಚೈನ್ ಆಫ್. ಹೋಟೆಲ್‌ಗಳನ್ನು ತೆರೆಯುವುದು. ಆದರೆ ಅವನ ತಂದೆಗೆ ಆತ ಹಳ್ಳಿಯಲ್ಲೇ ಇದ್ದು ಜನರ ಸೇವೆ ಮಾಡಲಿ ಅಂತ ಆಸೆ. ಅಣ್ಣ ತಮ್ಮನ ಜಗಳದಲ್ಲಿ ಸಿಕ್ಕಿಕೊಂಡ ಹಳ್ಳಿಯ ದೇವಸ್ಥಾನಕ್ಕೆ ಹಲವಾರು ವರ್ಷಗಳಿಂದ ಬೀಗ ಹಾಕಿರುತ್ತಾರೆ. ಅದನ್ನು ಸತ್ಯ ತೆಗೆಸುತ್ತಾನೆ. ಬಾಗಿಲು ತೆಗೆದಿದ್ದಕ್ಕೆ ಮೂರ್ತಿಯ ಕಡೆಯವರು ಒಬ್ಬನ (ಕೋಮಲ್) ಎಡಗೈಅನ್ನು ಕಡಿದುಹಾಕುತ್ತಾರೆ. ಕೈ ಕಳೆದುಕೊಂಡು 'ತಿನ್ನುವ ಕೈಯಲ್ಲೇ ತೊಳ್ಕೊಬೇಕಲ್ಲಾ?' ಅಂತಾ ಅವನ ಚಿಂತೆ! ಇಲ್ಲಿಂದ ರಕ್ತಪಾತ ಶುರುವಾಗುತ್ತೆ. ಧರ್ಮನ ಕಡೆಯವರು ಡ್ಯಾಮ್ ಒಂದನ್ನು ಒಡೆದು ನೀರು ಹರಿಸಿ ಜನರ ಸಾವಿಗೆ ಕಾರಣರಾಗುತ್ತಾರೆ. ರಸ್ತೆ ಒಂದಕ್ಕೆ ಬೇಲಿ ಹಾಕಿ ಹಳ್ಳಿ ಜನರಿಗೆ ತೊಂದರೆ ಕೊಡುತ್ತಾರೆ. ಇದನ್ನೆಲ್ಲ ನೋಡಿ ಸತ್ಯ ಹಳ್ಳಿಯಲ್ಲೇ ಇದ್ದು ತಂದೆಗೆ ತಕ್ಕ ಮಗನಾಗಿ ಹಳ್ಳಿ ಜನರ ಸೇವೆ ಮಾಡಲು ನಿರ್ಧರಿಸಿ ಬಾನುಳನ್ನು ವಾಪಸ್ ಕಳುಹಿಸುತ್ತಾನೆ. ಬೇಲಿ ಹಾಕಿರುವ ರಸ್ತೆಯನ್ನು ತೆರೆವುಗೊಳಿಸಲು ಚೌಡಪ್ಪ ಪಂಚಾಯ್ತಿ ಕರೆಸುತ್ತಾನೆ. ಆದರೆ ನಮಗೆ ಬೇಕಾಗಿರೋದು ಹಳೇಕಾಲದ ಪಂಚಾಯ್ತಿಯಲ್ಲ, ಕೋರ್ಟಿನ ಮೆಟ್ಟಿಲು ಅಂತ ಹೇಳಿ ಚೌಡಪ್ಪನಿಗೆ ಅವಮಾನ ಮಾಡಿದಾಗ, ಚೌಡಪ್ಪ ಕೊನೆಯುಸಿರು ಬಿಡುತ್ತಾನೆ. ಅಲ್ಲಿಗೆ ಮಧ್ಯಂತರ.

ಇಲ್ಲಿಯವರೆಗೂ ಉದ್ದನೆ ಕೂದಲು ಬಿಟ್ಟು ಹಿಪ್ಪಿ ತರಹ ಕಾಣುತ್ತಿದ್ದ ಸತ್ಯ ತನ್ನ ಕೂದಲು ಕತ್ತರಿಸಿ, ಮೀಸೆಯನ್ನು ಮೇಲಕ್ಕೆ ತಿರುಗಿಸಿ ಗೌಡನಾಗುತ್ತಾನೆ. ಬೇಲಿ ಹಾಕಿರುವ ಗದ್ದೆಯನ್ನು ಅದರ ಮಾಲೀಕ (ರಮೇಶ್ ಭಟ್)ನಿಂದ ಕೊಂಡುಕೊಳ್ಳುವ ಸತ್ಯ ಬೇಲಿ ತೆಗೆಸುತ್ತಾನೆ. ಹಾಗೆಯೇ ಆ ಮಾಲೀಕನ ಮಗಳು ಪಂಚರಂಗಿ (ಲೈಲಾ)ಯನ್ನು ತನ್ನ ಕೆಲಸದವನೊಬ್ಬ ಮದುವೆ ಆಗುವಂತೆ ಒಪ್ಪಿಸುತ್ತಾನೆ. ಆದರೆ ಮದುವೆ ಆಗಬೇಕಿದ್ದ ಗಂಡು ಓಡಿ ಹೋಗುತ್ತಾನೆ. ತಾನು ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಸತ್ಯ ಪಂಚರಂಗಿಯನ್ನು ಮದುವೆಯಾಗುತ್ತಾನೆ.

ಮಧ್ಯಂತರದ ಮುನ್ನ ಹಳ್ಳಿಯ ರಾಜಕೀಯ ಇದ್ದರೆ, ಆನಂತರ ಹೆಂಗಸರ ಸೆಂಟಿಮೆಂಟ್ ಶುರುವಾಗುತ್ತೆ. ಬಾನುಗೆ ಸತ್ಯ ಮದುವೆಯಾಗಿರುವುದು ಗೊತ್ತಿರುವುದಿಲ್ಲ. ಹಳ್ಳಿಗೆ ಹಿಂದಿರುಗಿದ ಆಕೆಗೆ ಶಾಕ್ ಆಗುತ್ತೆ. 'ನಾನು ನನ್ನ ಕೊನೆಯ ಉಸಿರು ಇರುವವರೆಗೂ ನಿನ್ನನ್ನು ಲವ್ ಮಾಡುತ್ತಿರುತ್ತೀನಿ, ಅದೇ ನನ್ನ ಶಾಪ' ಅಂತ ಹೇಳಿ ಅವಳು ಹೊರಡುತ್ತಾಳೆ. ಅವಳಿಗೆ ಗೇಟ್ ಪಾಸ್ ಕೊಡುತ್ತಿದ್ದಂತೆ ಸತ್ಯ ತನ್ನ ಹೆಂಡತಿ ಪಂಚರಂಗಿಯನ್ನು ಬರಬರನೆ ಬಸುರಿ ಮಾಡುತ್ತಾನೆ.




ಇಬ್ಬರೂ ಸಂತೋಷದಿಂದ ಹಾಡು ಹೇಳುತ್ತಾ ಕಾಲ ಕಳೆಯುತ್ತಿರುವಾಗ ಧರ್ಮ ರಥೋತ್ಸವದಲ್ಲೊಂದು ಬಾಂಬ್ ಇಟ್ಟು ಪುನಃ ರಕ್ತಪಾತ ಶುರು ಮಾಡುತ್ತಾನೆ. ಶಾಂತಿವಾದಿ ಸತ್ಯ ಕೊನೆಗೂ ಮಚ್ಚು ಹಿಡಿದು ಧರ್ಮನನ್ನು ಕೊಲ್ಲುತ್ತಾನೆ.

ಸಿನಿಮಾದಲ್ಲಿ ಬೇಕಾದಷ್ಟು ಸೆಂಟಿಮೆಂಟ್ ಇದೆ. ಥ್ರಿಲ್ಲರ್ ಮಂಜುರವರ ಫೈಟ್‌ಗಳಿವೆ. ಸಂಸಾರ, ಸಂಪ್ರದಾಯ, ಹಳ್ಳಿಯ ಸಮಸ್ಯೆಗಳಿಗಿಂತ ರಾಜಕೀಯ ಇದೆ. ಗೌಡಿಕೆ ಇದೆ. ಆದರೂ ಸಿನಿಮಾ ಯಾಕೆ ಸೋಲುತ್ತೆ ಅಂದರೆ ಇದರಲ್ಲಿ ಹೊಸತನವಾಗಲಿ, ಫ್ರೆಶ್‌ನೆಸ್ ಆಗಲಿ ಎಲ್ಲೂ ಕಾಣಿಸುವುದಿಲ್ಲ. ಜಾಲಿಹೂವಿನ ಹಾಡೊಂದು ಚೆನ್ನಾಗಿದೆ. ಉಪೇಂದ್ರ, ಅಂಬರೀಶ್, ಸಾಕ್ಷಿ ಶಿವಾನಂದ್ ಇನ್ನಿತರ ತಾರೆಗಳ ಮುಂದೆ ಲೈಲಾ ಗೆಲ್ಲುತ್ತಾಳೆ.

ಇತ್ತೀಚೆಗೆ ಉಪೇಂದ್ರರವರ ಸಿನಿಮಾಗಳಾದ 'ನ್ಯೂಸ್', 'ಉಪ್ಪಿದಾದ' ಸೇರಿದಂತೆ ಹಲವಾರು ಫ್ಲಾಪ್ ಆಗಿವೆ. ಇನ್ನು ಮುಂದೆ ಅವರೇ ನಿರ್ದೇಶನ ಮಾಡಿಯಾದರೂ, ಅಥವಾ ರೀಮೇಕ್ ಬಿಟ್ಟು ಒರಿಜಿನಲ್ ಸಿನಿಮಾ ಮಾಡಿಯಾದರೂ ಗೆಲುತ್ತಾರೆಂದು ಊಹಿಸೋಣವೇ? ಸದ್ಯಕ್ಕೆ 'ತಂದೆಗೆ ತಕ್ಕ ಮಗ' ಮಾತ್ರ ಕಾಸಿಗೆ ಕಜ್ಜಾಯವಂತೂ ಅಲ್ಲ.

●



ಪ್ರಕಾಶ ಮೀಸೆ ಪುರಾಣವೂ ರಾಜಾಧಿರಾಜ ಪ್ರಸಂಗವೂ

ಮೀಸೆ ಪ್ರಕಾಶ್!


'ರಿಯಾಲ್ರೀ ಪ್ರಕಾಶ್' ಅಂತ ಕುಮಾರಣ್ಣ ಅವರು ಮುಖ ಸಿಂಡರಿಸಿಕೊಂಡು ಗದರಿಸಿದರೆ ಹೇಗೆ ಉತ್ತರಿಸಬೇಕು ಎಂಬುದು ಹಲವರಿಗೆ ತಲೆನೋವಿನ ಸಂಗತಿಯಾಗಿದೆಯಂತೆ. ಅಣ್ಣಾವರು ಮುಂದೆ ಒಂದು ಸಲ ರಾಜಕೀಯ ಒತ್ತಡದಿಂದಾಗಿ ತಾಳ್ಮೆ ಕಳೆದುಕೊಂಡು ಈ ರೀತಿ ವರ್ತಿಸಿದೆ ಎಂದು ಸಮಜಾಯಿಷಿ ನೀಡುವುದು ಖಾತರಿಯಾಗಿದ್ದರೂ ತಕ್ಷಣದ ಉತ್ತರ ಏನಿರಬೇಕು ಎಂಬುದು ಅವರ ಪ್ರಶ್ನೆಯಾಗಿದೆಯಂತೆ. 'ಜಾತ್ಯತೀತ ದಳದ ಅಧ್ಯಕ್ಷರು' ಅಂದರೆ ದೇವೇಗೌಡರು ಸಿಟ್ಟಿನಿದರೆ ಅದು ಸಿಡಿದು ಹೋಗುತ್ತದೆ. 'ಎಂ.ಪಿ. ಪ್ರಕಾಶು ಸಾರ್' ಅಂದರೆ 'ಯಾವ ಎಂಪೀರಿ ನಾನು ಕಾಣದ್ದು' ಅಂತ ಕುಮಾರಣ್ಣನವರು ಮೇಲೇರಿ ಬರಬಹುದು. ತಮ್ಮ ಅಭಿಮಾನಿಗಳ ಸಂಕಟ ಪ್ರಕಾಶ್‌ಗೆ ಅರ್ಥ ಆಗಿರಬೇಕು. 'ಅವಸ್ಥೆ' ಕಾದಂಬರಿ ಸಿನಿಮಾ ಆಯಿತಲ್ಲ... ಆ ದಿನಗಳು ನೆನಪಿಗೆ ಬಂದಿರಬೇಕು. ಆ ಚಿತ್ರದಲ್ಲಿನ ತಮ್ಮ ಪಾತ್ರದಲ್ಲಿ ತಮ್ಮನ್ನು ಗುರುತಿಸಿಕೊಳ್ಳಲು ಪ್ರಯತ್ನಿಸಿರಬೇಕು. ಅದಕ್ಕೇ ಏನೋ ನೋಡಿ, ಬೋಳು ಮುಖದ ಪ್ರಕಾಶ್ ಮೀಸೆ ಪ್ರಕಾಶ್ ಆಗಿದ್ದಾರೆ!

ಈ ಜನ ಹಲ್ಕಾಗಳು ಕಣ್ರೀ. ಇಂತಹ ಸದುದ್ದೇಶದಿಂದ ಮೀಸೆ ಬಿಟ್ಟಿದ್ದರೂ ಅದಕ್ಕೂ ತರಲೆ ಮಾತು ಆಡ್ತಾರೆ. ಅಲ್ಲ ಕಣ್ರಿ ಈ ಮಂಕು ಕಳೆಯ ಪ್ರಕಾಶ್ ಯೋಧನ ತರಹ ಕಾಣಲು ಸಾಧ್ಯ ಏನ್ರಿ? ಆದರೂ ವಿಧಾನ ಸಭೇಲಿ ಯಾರೋ ಒಬ್ಬ ಸದಸ್ಯರು 'ಏನು ಪ್ರಕಾಶ್ ಮೀಸೆ ಬಿಟ್ಟಿದ್ದೀರಲ್ಲ... ಯುದ್ಧ ಹೂಡ್ತೀರಾ' ಅಂತ ಕೇಳಬಹುದಾ? ಪಾಪ ನಮ್ಮ ಮುದ್ದಿನ ಪ್ರಕಾಶು ಜೀವಮಾನದಲ್ಲೇ ಯಾರ ವಿರೋಧವನ್ನು ಬಹಿರಂಗವಾಗಿ ಮಾಡಿದವರಲ್ಲ, ಉಗಿದರೂ ಉಗಿಸಿಕೊಂಡು, ತೆಗಳಿದರೂ ತೆಗಳಿಸಿಕೊಂಡು, 'ನಾವು ರಾಜಕಾರಣಿಗಳು. ಅಂದರೆ ಸೊಂಟದ ಮೇಲಿನ ಕೂಸು ಇದ್ದ ಹಾಗೆ, ಎತ್ತಿಕೊಂಡಿರುವವರು ಹೇಗೆ ಆಡಿಸುತ್ತಾರೋ ಹಾಗೆ ಆಡಬೇಕಾದವರು' ಅಂತ ದಾರ್ಶನಿಕರಂತೆ ಮಾತನಾಡುವವರು. ಅಂತಹವರನ್ನು ಯೋಧ ಅಂತಹೇಳಿ ಅವಮಾನ ಮಾಡುವುದು ಸರಿಯಲ್ಲ ಬಿಡಿ.

ಆದೇನೋ ಒಬ್ಬರು ಹೇಳಿದ್ದಾರಲ್ಲಾ... ಅದೇ ಮೀಸೆ ಜೊತೆ ಗಡ್ಡಾನೂ ಬಿಟ್ಟು ಬಿಡಿ ಯಾವುದಾದರೂ ಮಠದ ಪೀಠದಲ್ಲಿ ಕುಳಿಸುತ್ತೇವೆ ಅಂತ... ಇದನ್ನು ಬೇಕಾದರೂ ಒಪ್ಪಬಹುದು. ಯಾಕೆ ಅಂದರೆ ಇವರೊಬ್ಬರೇ ಅಲ್ಲ, ಎಲ್ಲ ರಾಜಕೀಯ ಪ್ರಮುಖರ ಮನೆಗಳೂ ಅವರವರ ಜಾತಿಯ ಗುರುಮಠಗಳೇ ಆಗಿಲ್ಲವೆ, ಗುರುಮಠ ಅನ್ನುವ ಬೋರ್ಡ್ ಇಲ್ಲದೆ! ಅದಕ್ಕೆ ಬೇಕಾದ ಸಾಧನ ಸಂಪತ್ತು ಇವರಲ್ಲಿದೆ ಬಿಡಿ. ಇನ್ನೊಬ್ಬರು ಹೇಳಿದರಲ್ಲ... ಅದೇ ಈ ಸಮ್ಮಿಶ್ರ ಸರ್ಕಾರ ವಾನಪ್ರಸ್ಥಾಶ್ರಮಕ್ಕೆ ನಿಮ್ಮನ್ನ ಕಳುಹಿಸಲು ಪ್ರಯತ್ನಿಸುತ್ತಿದೆ. ನೀವು ಗಡ್ಡಾನೂ ಬಿಟ್ಟರೆ ಅವರ ಹಾದಿ ಸುಗಮ ಆಗ್ತದೆ ಅಂತೆ... ಇದನ್ನೂ ಒಪ್ಪುವುದಕ್ಕೆ ಸಾಧ್ಯವೇ ಇಲ್ಲ ಬಿಡಿ. ಅಲ್ಲಾರೀ ಕಳುಹಿಸೋದಕ್ಕೆ ಕಾಡು ಎಲ್ಲಿದೆ? ಇದ್ದ ಬಿದ್ದ ಕಾಡನ್ನೆಲ್ಲ ಅರಣ್ಯ ಅಧಿಕಾರಿಗಳು, ರಾಜಕಾರಣಿಗಳು ನುಂಗಿ ನೊಣೆದಿದ್ದಾರಲ್ಲ!

ಮಾಜಿ ಸಮಾಜವಾದಿ ಪ್ರಕಾಶ್‌ರನ್ನ 'ಲಂಕೇಶ್'ನಲ್ಲಿ ಜೋಕುಮಾರಸ್ವಾಮಿ ಅಂತ ಹಳಿಯಬಾರದಿತ್ತು, ಪಾಪ ಅವರು ಅದನ್ನು ಬಹಳ ಮನಸ್ಸಿಗಚ್ಚಿಕೊಂಡರಂತೆ. ತನ್ನಲ್ಲಿ ಇನ್ನೂ ಪೌರುಷ ಕುಂದಿಲ್ಲ ಅನ್ನುವುದರ ಪ್ರತೀಕವಾಗಿ ಪ್ರಕಾಶು ಮೀಸೆ ಬಿಟ್ಟರು ಅಂತ ಕೆಲವರು ಆಡಿಕೊಳ್ತಿದಾರೆ. ಆಡಿಕೊಳ್ಳುವವರಿಗ್ರೇನ್ರೀ, ಹೇಗಿದ್ರೂ ಆಡಿಕೊಳ್ತಾರೆ. ಬದುಕಿದರೆ ಬಾಯಿಬಡ್ಕೊಳ್ತಾರೆ, ಕೆಟ್ಟರೆ ತಿಗಬಡಿದು ಕೊಳ್ತಾರೆ. ಅದಲ್ಲ, ಪ್ರಕಾಶ್ ಮುಖದ ಮೇಲಿನ ಮೀಸೆ, ಉತ್ತರ ಕುಮಾರನ ಮುಖದ ಮೇಲಿನ ಮೀಸೆಯಂತೆ ಕಾಣ್ತದೆ ಅಂತ ಕೆಲವರು ಅನ್ನೋದಕ್ಕೆ ನನ್ನ ಆಕ್ಷೇಪಣೆ ಇದೆ. ಅವರು ಸಮಾಜವಾದಿಯಾಗಿದ್ದವರು. ವಂಶಪಾರಂಪರ್ಯ ಆಳ್ವಿಕೇನೆ ವಿರೋಧಿಸೋರು. ಅಂತಹದ್ದರಲ್ಲಿ ರಾಜವಂಶದವರನ್ನು ಇವರಿಗೆ ಹೋಲಿಸಬಹುದೇನ್ರೀ? ಏನೋ ಪಾಪ ಅನಿವಾರ್ಯ ರಾಜಕೀಯ ತಿರುವಿನಿಂದಾಗಿ ದೇವೇಗೌಡರ ಮನೆತನದ ಆಳ್ವಿಕೆಗೆ ತಲೆಬಾಗಿದ್ದಾರೆ ಅಷ್ಟೆ!

ಏನು ಜನಾರಿ ಈ ಹಾಳಾದವರು. ಪ್ರಕಾಶ್ ಅವರೇ 'ನನ್ನ ತುಟಿ ಮೇಲೆ ಗಾಯ ಆಗಿದೆ ಅದಕ್ಕೇ ಮೀಸೆ ಬಿಟ್ಟಿದ್ದೀನಿ. ಸಧ್ಯದಲ್ಲೇ ಅದಕ್ಕೆ ಮೋಕ್ಷ ಕಾಣಿಸ್ತೀನಿ' ಅಂದರೆ... ಇದನ್ನ ನಂಬಬೇಡವೇನ್ರೀ ಈ ದರಿದ್ರದ ಜನ? ತುಟಿ ಮೇಲೆ ಗಾಯಾನಾ-ಯಾಕಾಯ್ತು? ಎಲ್ಲಾಯ್ತಂತೆ? ಅಂತ ಹೇಳಿ ಹಲ್ಕಾ ನಗು ಬೀರುತ್ತಾರಲ್ರೀ... ಥೂ ಹಲ್ಕಾ ಜನ!



ರಾಜಾಧಿರಾಜ.... ಕುಮಾರಣ್ಣ!

ಈ ಪ್ರಜಾಪ್ರಭುತ್ವದಲ್ಲಿ ರಾಜ ಎಲ್ಲಿಂದ ಬಂದ? ಅಂತ ಕೆರಳಿ ಕೆಂಡ ಆಗಬೇಡಿ. ಇದೆಲ್ಲ ಸುಳ್ಳೇ ಸುಳ್ಳೇ ಪ್ರಚಾರ ಅಂತಾನೂ ಬೇಸರಿಸಿ ಕೋಬೇಡಿ. ಸಾವಧಾನವಾಗಿ ಕೇಳಿ... ನೀವು ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರಧಾನ ಸಮಾರಂಭ ವೀಕ್ಷಿಸಿದಿರಾ.... ಅದೇ ರಾಮನಗರದಲ್ಲಿ ಈ ಸಲ ನಡೆದ ಸಮಾರಂಭ ವನ್ನ? ಮುಖ್ಯಮಂತ್ರಿ ಕುಮಾರಸ್ವಾಮಿ ಸಭಾಂಗಣ ಪ್ರವೇಶಿಸುತ್ತಿದ್ದಂತೆ ಧ್ವನಿವರ್ಧಕದಲ್ಲಿ ಕೇಳಿಬಂತು....

ರಾಜಾಧಿರಾಜ, ರಾಜಮಾರ್ತಾಂಡ
ಬಹುಭಾಷಾ ಪ್ರವೀಣ, ಸಕಲಕಲಾ ವಲ್ಲಭ.

....

....

ಇದು ಸಿನಿಮಾದಲ್ಲಿ ಮಹಾರಾಜರು ತಮ್ಮ ಪಾದಗಳಿಂದ ನೆಲವನ್ನು ಪವಿತ್ರಗೊಳಿಸುವಾಗ ಹೇಳಿದ ಮಂತ್ರ ಅಲ್ಲ! ಸಾಕ್ಷಾತ್ ನಿರೂಪಕರು ತಮ್ಮ ಬಾಯಿಂದ ಹೊರಡಿಸಿದ ಅಣಿಮುತ್ತುಗಳು! ಇದಕ್ಕೆ ಅವರ ವಿವರಣೆ 'ಹಿಂದೆ ರಾಜ ಇದ್ದ, ಈ ರೀತಿ ಅವರನ್ನ ಹೊಗಳುತ್ತಿದ್ದರು. ಈಗ ರಾಜ ಇಲ್ಲ, ಅದರ ಸ್ಥಾನದಲ್ಲಿ ಜನ ಪ್ರತಿನಿಧಿ ಇದ್ದಾರೆ. ಇವರು ಇಂತಹ ಹೊಗಳಿಕೆಗೆ ಅರ್ಹರು.' ಈ ಅರ್ಥದ ಮಾತುಗಳು.

ಸ್ವಾಮಿ ನಿರೂಪಕರೆ, ಹಿಂದೆ ರಾಜ ಇದ್ದ ಸರಿ. ಅವರನ್ನು ಹೊಗಳುತ್ತಿದ್ದರು ಎನ್ನುವುದೂ ಸರಿ. ಕಳ್ಳನನ್ನು ಬೆಳ್ಳ ಅನ್ನುತ್ತಿದ್ದರು. ಅಕ್ಷರ ಬಾರದವನನ್ನು ಸಕಲಕಲಾ ವಲ್ಲಭ ಅನ್ನುತ್ತಿದ್ದರು. ಅವರಲ್ಲಿಲ್ಲದ ಗುಣಗಳನ್ನು ಇವೆ ಎಂದು ಆರೋಪಿಸಿ ಹೊಗಳುತ್ತಿದ್ದರು. ಯಾಕೆ ಅಂದರೆ ಅವರು ಇದ್ದದ್ದೇ ಹೊಗಳಲು. ಬಹುಪರಾಕ್ ಹೇಳಲು. ಅದಕ್ಕಾಗಿ ಅವರಿಗೆ ಸಂಬಳ ನೀಡಲಾಗುತ್ತಿತ್ತು. ನೀವು ಈ ರೀತಿ ಕುಮಾರಣ್ಣನನ್ನು ಹಾಡಿ ಹೊಗಳಿ ಅಟ್ಟಕ್ಕೇರಿಸಿದರಲ್ಲ, ನೀವೂ ಆ 'ರಾಜಾಶ್ರಯ'ದಲ್ಲಿ ಇದ್ದೀರಾ?

ಅದೂ ಅಲ್ಲದೆ ಹಿಂದೆ ರಾಜಾ ಪ್ರತ್ಯಕ್ಷ ದೇವತಾ ಅನ್ನುವ ಮಾತನ್ನು ಜನರ ಹೃದಯದಲ್ಲಿ ಸಮಾಜ ಘಾತುಕ ವ್ಯಕ್ತಿಗಳು ನೆಟ್ಟಿದ್ದರು. ಜನರೂ ಅವರ ಗುಲಾಮರಂತೆ ನಡೆದುಕೊಳ್ಳುತ್ತಿದ್ದರು. ಇದು ಪ್ರಜಾ ಪ್ರಭುತ್ವ. ಇಲ್ಲಿ ಪ್ರಜೆಯೇ ಒಡೆಯ. ಮುಖ್ಯಮಂತ್ರಿಯಾದವನು ಜನರ ಸೇವಕ. ಸೇವಕ ಪದವನ್ನು ಜವಾನ ಅಥವಾ ನೌಕರ ಎಂಬ ಅರ್ಥದಲ್ಲಿ ನಾನು ಬಳಸುತ್ತಿಲ್ಲ, ಸೇವೆ ಮಾಡುವ ಮನಸ್ಸುಳ್ಳವನು ಎಂಬ ಅರ್ಥದಲ್ಲಿ ಬಳುಸುತ್ತಿದ್ದೇನೆ. ನಿರೂಪಕರೆ, ನೀವು ಕುಮಾರಣ್ಣ ಅವರ ವಂದಿಮಾಗದರಾಗಿ, ಅದು ನಿಮಗೆ ಸೇರಿದ್ದು, ಇಡೀ ಕರ್ನಾಟಕದ ಜನತೆಯನ್ನು ಕುಮಾರಣ್ಣನ ಗುಲಾಮರು ಎಂದು ಗುರುತಿಸುವುದಕ್ಕೆ ನಿಮಗೆ ಹಕ್ಕು ನೀಡಿದ[...]ರಾರು?

ಮುಖ್ಯಮಂತ್ರಿಗಳಿಗೊಂದು ಕಿವಿಮಾತು:

ಬೆಂಗಳೂರೇ ಕರ್ನಾಟಕ ಅಲ್ಲ, ಎಲ್ಲಾ ಕ್ಷೇತ್ರದ ಪ್ರತಿಭೆಗಳೂ ಅಲ್ಲಿಯೇ ಇವೆ ಎಂಬುದು ಭ್ರಮೆ. ರಾಜ್ಯದ ವಿವಿಧ ಭಾಗಗಳಲ್ಲೂ ಇವೆ. ರಾಜ್ಯ ಸರ್ಕಾರ ಆಯೋಜಿಸಿದ ಕಾರ್ಯಕ್ರಮಗಳಲ್ಲಿ ಅವರನ್ನು ಅವಗಣಿಸಲಾಗಿದೆ. ರಾಜ್ಯದ ಯಾವುದೇ ಮೂಲೆಯಲ್ಲಿ ಕಾರ್ಯಕ್ರಮ ನಡೆದರೂ ಬೆಂಗಳೂರಿನ ಕಾರ್ಯಕರ್ತರನ್ನೇ ಹೇರಲಾಗುತ್ತಿದೆ. ಇದು ಸ್ಥಳೀಯ ಪ್ರತಿಭೆಗಳಿಗೆ ಮಾಡಿದ ಅಪಮಾನ, ಸಾಂಸ್ಕೃತಿಕ ಗೂಂಡಾಗಿರಿ.

ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ ರಾಮನಗರದಲ್ಲಿ ನಡೆಯಿತು. ಬೆಂಗಳೂರಿನಲ್ಲೇ ಝಂಡಾ ಊರಿದ್ದ ಇಂತಹ ಸಮಾರಂಭವನ್ನು ಈ ಹಿಂದೆ ಜಿಲ್ಲಾ ಕೇಂದ್ರಗಳಿಗೂ ವಿಸ್ತರಿಸಲಾಗಿತ್ತು. ಆದರೆ ಇದೇ ಮೊದಲ ಬಾರಿಗೆ ರಾಮನಗರದಂತಹ ತಾಲ್ಲೂಕು ಕೇಂದ್ರಕ್ಕೆ ಅದನ್ನು ತಂದದ್ದು ಶ್ಲಾಘನೀಯ. ಗ್ರಾಮಾಂತರ ಪ್ರದೇಶದ ಪ್ರತಿಭೆಗಳನ್ನು ಗುರುತಿಸುವುದಕ್ಕೆ, ಬೆಳೆಸುವುದಕ್ಕೆ ಇದು ಒಂದು ಅವಕಾಶ ಎಂದು ನಿರೀಕ್ಷಿಸಿದ್ದೆವು. ಅದು ನಿರಾಶೆ ತಂದಿತು.

ರಾಮನಗರದ ಕಾರ್ಯಕ್ರಮದಲ್ಲಿ ಸ್ಥಳೀಯರು ಬಂದು ಕಾರ್ಯಕ್ರಮ ನೀಡಲು ಅವಕಾಶ ನೀಡಿದ್ದೀರಿ ನಿಜ. ಅದು ಎಂತಹ ಕಾರ್ಯಕ್ರಮ? ಐವತ್ತು ಅರವತ್ತು ಜನರಿದ್ದ ಸಮೂಹದ್ದು. ಕಾರ್ಯಕ್ರಮ ನೀಡಿದವರು ಅವರ ಆತ್ಮೀಯರನ್ನು ಬಿಟ್ಟು ಉಳಿದವರಿಗೆ ಅವರ ಮುಖವಾದರೂ ನೆನಪಿದೆಯಾ? ಅವೆಲ್ಲ ಗುಂಪಿನಲ್ಲಿ ಕಳೆದುಹೋದ ಮುಖಗಳು! ಸಿನಿಮಾದಲ್ಲಿ ಹಾಗೆ ಬಂದು ಹೀಗೆ ಹೋದವನು ತಾನು ಸಿನಿಮಾದಲ್ಲಿ ಪಾರ್ಟು ಮಾಡಿದ್ದೆ ಅನ್ನುವ ರೀತಿ ಇತ್ತು ಅದು.

ನಿರೂಪಣೆಗೂ ಬೆಂಗಳೂರಿನಿಂದಲೇ ಜನರನ್ನು ಕರೆತರಬೇಕಿತ್ತೇ? ರಾಮನಗರದಲ್ಲಿ ಅದಕ್ಕೆ ಸಮರ್ಪಕ ಜನರು ಸಿಗುವುದಿಲ್ಲ ಎಂದರೆ ನಿಮ್ಮ ಕ್ಷೇತ್ರದ ಜನತೆಗೆ ನೀವು ಮಾಡುತ್ತಿರುವ ಮೋಸ ಎಂದಾಗುತ್ತದೆ. ಅಥವಾ ಸ್ಥಳೀಯರು... ರಾಜಾಧಿರಾಜ... ಇತ್ಯಾದಿ ಪರಾಕು ಹೇಳಿ ಗುಲಾಮೀತನ ಪ್ರದರ್ಶಿಸುವುದಿಲ್ಲ ಎಂದಾದರೆ... ನಿಮ್ಮ ಆಯ್ಕೆ ಸರಿಯಾಗಿಯೇ ಇದೆ!

ಕೊನೆಯದಾಗಿ:

'ಜನ ಉಗೀತಾ ಬದ್ದಿವರಲ್ರೀ?'

'ಯಾಕಂತೆ?'

'ಎಲ್ಲಾ ಕಡೆ ನಿರೂಪಣೆಗೂ ಅವರೇ ಬೇಕಾ ಅಂತ?'

'ಹಂಗನ್ನೊ ನನ್ ಮಕ್ಳಿಗೆ ಕೇಳ್ರಿ.'

'ಏನಂತ?'

'ನನ್ ಮಕ್ಳು ತಿಗಬಾಯಿ ಮುಚ್ಚಿಕೊಂಡು ಹೇಳಿದಷ್ಟಕ್ಕೆ ರುಜುಗುದ್ದಿ ಕೊಟ್ಟಷ್ಟು ಈಸ್ಕೊಂಡು ಇವರಂತೆ ಹೋಯ್ತೀರ ಅಂತ!'


-ಎಚ್.ಎಲ್. ಕೇಶವಮೂರ್ತಿ

ಅವರು ನಿಮಗ್ಯಾಕೆ ಕುಮಾರಣ್ಣ-ಅನಿತಕ್ಕ ಆಗಬೇಕು?

ಇತ್ತೀಚೆಗೆ 'ಲಂಕೇಶ್' ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಕಳೆದ ಸಂಚಿಕೆಯಲ್ಲಿನ ರೇಶ್ಮೆಯವರ 'ಜೆಡಿಎಸ್‌ನ ಜೋಕುಮಾರಸ್ವಾಮಿ' ಲೇಖನ ನಿಜಕ್ಕೂ ಸಕಾಲಿಕವಾಗಿದೆ. 'ಲಂಕೇಶ್' ಎಂ.ಪಿ. ಪ್ರಕಾಶರ ಬಗ್ಗೆ ಸಾಫ್ಟ್ ಎನ್ನುವ ಅನುಮಾನವನ್ನು ದೂರವಾಗಿಸಿದೆ.


'ಲಂಕೇಶ್'ನಲ್ಲಿ ಕುಮಾರಸ್ವಾಮಿ-ಅನಿತಾರವರನ್ನು 'ಕುಮಾರಣ್ಣ-ಅನಿತಕ್ಕ' ಎಂದು ವರ್ಣಿಸುವುದನ್ನು ಓದಲು ಹಾಸ್ಯ ಎನಿಸುತ್ತದೆ. ಅವರ ಅಭಿಮಾನಿಗಳಿಗೆ ಅವರು ಕುಮಾರಣ್ಣ-ಅನಿತಕ್ಕನಾಗಲಿ ಆದರೆ 'ಲಂಕೇಶ್'ಗೆ ಮಾತ್ರ ಕುಮಾರಸ್ವಾಮಿ, ಅನಿತಾ ಆಗಿರಲಿ.

ಪತ್ರಿಕೆಯು ಒಂದು ರೂಪಾಯಿ ಹೆಚ್ಚಾಗಿರುವುದು ಓದುಗರಿಗೆ ಖಂಡಿತ ಹೊರೆಯಲ್ಲ, ಎಂದಿನಂತೆ ಅಭಿಮಾನಿಗಳ ಸಹಕಾರ ಇದ್ದೇ ಇರುತ್ತೆ, Go-ahead.



ಬಸವರಾಜ,
ಹರಪನಹಳ್ಳಿ





ಬಾಗಲಕೋಟೆಯನ್ನು ಮಾರಾಟಕ್ಕಿಟ್ಟಿರುವ ಡಿ.ಸಿ. ಪ್ರಭಾಕರ! ಎಂಬ ವಿ.ಪಿ. ಮೇಘರಾಜ್ ಅವರ ವರದಿ ಓದಿ ದಿಗ್ಭ್ರಾಂತನಾದೆ. ಬಾಗಲಕೋಟೆಯೆಂಬ ನತದೃಷ್ಟ ಜಿಲ್ಲೆಗೆ ಏನಾದರೂ ಅನಿಷ್ಟ ತಗುಲಿಯೇ ಇರುತ್ತೆ, ಮೊದಲೆ ಮುಳುಗಡೆ ಸಮಸ್ಯೆ, ನಿರುದ್ಯೋಗತನ. ಅಂತಹದರಲ್ಲಿ ಸತತ ಬರಗಾಲದ ಬವಣೆಯಿಂದ ಬಳಲಿ ಬೆಂಡಾಗಿರುವ ಜಿಲ್ಲೆಗೆ ಭ್ರಷ್ಟ ಸಂತತಿ ಎಡೆಬಿಡದೆ ಕಾಡುತ್ತಿರುವುದು ಹೇಳತೀರದ ಮಾತಾಗಿದೆ. ಅಧಿಕಾರಿ ವರ್ಗದ ನಾಲಾಯಕರು ಮತ್ತು ಜಿಲ್ಲಾಧಿಕಾರಿ ಕೆ.ಎಸ್. ಪ್ರಭಾಕರನೆಂಬ ಬಕಾಸುರನು ತಟ್ಟೆ ಹಿಡಿದು ಉಣ್ಣಲು ಕುಳಿತದ್ದು ದುಷ್ಟತನದ ಪರಮಾವಧಿ ಎನಿಸಿದೆ. ಇಡೀ ಜಿಲ್ಲೆಯನ್ನು ಭ್ರಷ್ಟಗೊಳಿಸಿ ಇನ್ನಿಲ್ಲದಂತೆ ಹುರಿದು ಮುಕ್ಕುತ್ತಿರುವ ಭ್ರಷ್ಟ ಜಿಲ್ಲಾಡಳಿತದ ಕತ್ತೆ ಕಿರುಬಗಳಿಗೆ ಕೊನೆ ಎಂದು? ಎಂಬ ಈ ಪ್ರಶ್ನೆಗೆ ಬಾಗಲಕೋಟೆಯ ಕೂಡಲ ಸಂಗಮದೇವನೆ ಉತ್ತರಿಸಬೇಕು.

ಆರ್.ಕೆ. ಕೊರ್ತಿ,
ಬದಾಮಿ

ಹೊಗಳಿಕೆ



ಮನಸೆಳೆದ ಮಾತಾಹರಿ

'ಲಂಕೇಶ್'ನಲ್ಲಿ ಮೂಡಿಬಂದ 'ಸ್ಪೈ ಸುಂದರಿ ಮಾತಾಹರಿ' ಕತೆ ಅದ್ಭುತವಾಗಿತ್ತು, ಜೀವನದಲ್ಲಿ ನೋವನ್ನುಂಡು, ಪ್ರೀತಿಗಾಗಿ ಹಂಬಲಿಸಿ ಈ ಸುಂದರಿ ಕೊನೆಗೆ ಗೂಢಚಾರಿಣಿಯ ಹಣೆಪಟ್ಟಿ ಹೊತ್ತು ಸಾವನ್ನಪ್ಪಿದ ರೋಚಕ ಕತೆಯನ್ನು ಜೆ. ಬಾಲಕೃಷ್ಣರವರು ತುಂಬಾ ಚೆನ್ನಾಗಿ ನಿರೂಪಿಸಿದರು. ನಗ್ನಳಾಗಿ ನೃತ್ಯ ಮಾಡಿ, ಅದೆಷ್ಟೋ ಹಣವಂತರ ಆಸೆಗಳನ್ನು ತಣಿಸಿದ ಈ ಮಹಿಳೆ ಕೊನೆಗೂ ಸೈನಿಕರ ಬಂದೂಕುಗಳಿಗೆ ಹೆದರದೆ ಎದೆ ಒಡ್ಡಿ ನಿಂತದ್ದು ಅವಳ ಧೈರ್ಯಕ್ಕೆ ಸಾಕ್ಷಿಯಂತಿತ್ತು, ಆಕೆಯದ್ದು ಎಂತಹ ಎದೆಗಾರಿಕೆ?

ತಾನು ಇನ್ನೇನು ಸಾಯಲಿದ್ದೇನೆ ಎಂದು ಗೊತ್ತಿದ್ದರೂ "ತನ್ನ ಕೊಲೆಗಡುಕರಿಗೆ ಗಾಳಿಯಲ್ಲೇ ಚುಂಬನವನ್ನು ಹಾರಿಸಿದಳು" ಎಂದು ಓದಿದಾಗ ಅವಳ ಜೀವನದ ಎಲ್ಲಾ ದುರಂತಗಳು ನಮ್ಮ ಕಣ್ಣ ಮುಂದೆ ಕಟ್ಟಿ ನಿಂತಂತಾಯಿತು. ಫ್ರಾನ್ಸ್‌ನ ಸೇನಾಧಿಕಾರಿಗಳು ಆರೋಪಿಸಿದಂತೆ ಮಾತಾಹರಿ ಗೂಢಚಾರಿಣಿ ಆಗಿರಲಿಲ್ಲ ಅನ್ನಿಸುತ್ತದೆ. ಬದಲಾಗಿ ಆಕೆ ತನಗೆ ಗೊತ್ತಿಲ್ಲದಂತೆ ಸಂದರ್ಭದಲ್ಲಿ ಸಿಲುಕಿಕೊಂಡು ಬಲಿಯಾದ ಮಹಿಳೆ ಅನ್ನಿಸುತ್ತದೆ.

ಸುಂದರಿಯೂ, ಅಮಾಯಕಿಯೂ ಆಗಿದ್ದ ಮಾತಾಹರಿಯ ಕತೆಯನ್ನು ಹೇಳುವ ಮೂಲಕ ಅಂದಿನ ಸಮಾಜದ ಬಗೆಗಿನ ಮತ್ತು ಎರಡನೇ ಮಹಾಯುದ್ಧದ ಸಂದರ್ಭದ ಬಗೆಗಿನ ಮಾಹಿತಿಗಳನ್ನೂ ಈ ಧಾರಾವಾಹಿ ಬಿಂಬಿಸಿತು.

ಇಂತಹ ಸ್ವಾರಸ್ಯಕರ ಕತೆಯನ್ನು ನೀಡಿದ್ದಕ್ಕೆ ಧನ್ಯವಾದಗಳು

ಮುತ್ತಣ್ಣ ಪೂಜಾರ್, ಕದಲಬಾಳು.

ರಕ್ಷಿತಾ ಮದುವೆಯಾಗಲು ಹೊರಟಿದ್ದಾಳೆ. ರಾಧಿಕಾ ತಂಗಿ ಪಾತ್ರಕ್ಕೆ ...ಕೊಂಡಿದ್ದಾಳೆ. ಹೀಗಾಗಿ ರಮ್ಯ ಯಾವುದೇ ಪ್ರತಿಸ್ಪರ್ಧಿ ಇಲ್ಲದೆ ...ವಾಗಿ ನಂಬರ್ ಒನ್ ಪಟ್ಟವನ್ನು ಅಲಂಕರಿಸಿದ್ದಾಳೆ. ಗಾಂಧಿನಗರದ ...ಗೆ 'ಊರಿಗೊಬ್ಬಳೇ ಪದ್ಮಾವತಿ' ಎಂಬಂತಾಗಿದ್ದಾಳೆ ರಮ್ಯ...!

...ಹಾಗೆ ನೋಡಿದರೆ ಪ್ರತಿಸ್ಪರ್ಧಿಗಳು ವೀಕ್ ಆಗಿರುವುದರಿಂದ ರಮ್ಯ ...ಗ್ ಎಂಬ ಮಾತನ್ನು ಸಂಪೂರ್ಣವಾಗಿ ಒಪ್ಪಲು ಆಗುವುದಿಲ್ಲ. ...ಗಾಗಲೇ ಈಕೆ ನಟಿಸಿದ 'ಆಕಾಶ್', 'ಗೌರಮ್ಮ' ಮತ್ತು 'ಅಮೃತಧಾರೆ' ...ಗಳು ಶತದಿನೋತ್ಸವ ಬಾರಿಸಿ ಈಕೆ 'ಹ್ಯಾಟ್ರಿಕ್ ಹೀರೋಯಿನ್' ...ದೆನಿಸಿಕೊಂಡಿದ್ದಾಳೆ. ಈ ಚಿತ್ರಗಳಲ್ಲಿ ತಾನು ಎಷ್ಟು ಪ್ರತಿಭಾವಂತೆ ...ಬುದನ್ನೂ ತೋರಿಸಿದ್ದಾಳೆ.

ರಮ್ಯ ಮಾಟ ಪ್ರದರ್ಶಿಸಿ 'ಗ್ಲಾಮರ್ ತಾರೆ' ಎಂದು ಕರೆಸಿಕೊಳ್ಳಲು ಪ್ರಯತ್ನಿಸಿದ್ದಳು. ಆದರೆ ಇವೆರಡೂ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಅಷ್ಟೊಂದು ಯಶಸ್ಸು ಕಾಣದಿದ್ದಾಗ ಕನ್ನಡಕ್ಕೆ ಬಂದು ಇಲ್ಲೇ ಠಿಕಾಣಿ ಹೂಡಿದ್ದಳು. ಇದೀಗ 'ಲಾಂಗ್ ಬ್ರೇಕ್' ನಂತರ, ಬಿಡುವಿಲ್ಲದ ಟೈಂ ಟೇಬಲ್‌ನ ನಡುವೆಯೂ ಮತ್ತೊಮ್ಮೆ ತನ್ನ ಅದೃಷ್ಟ ಪರೀಕ್ಷಿಸುಲು ತೆಲುಗಿಗೆ ಹೊರಟು ನಿಂತಿದ್ದಾಳೆ.

'ಅಮೃತಧಾರೆಯ' ತೆಲುಗು ಅವತರಣಿಕೆ ಸೂಪರ್ ಹಿಟ್ ಆಗಿ ರಮ್ಯಾಳಿಗೆ ಅಪಾರ ಜನಪ್ರಿಯತೆ ಸಿಕ್ಕಿದರೆ, ಕನ್ನಡ ಸಿನಿಮಾ ನಿರ್ಮಾಪಕರಿಗೆ ಅಪಾಯ ಕಟ್ಟಿಟ್ಟ ಬುತ್ತಿ. ಏಕೆಂದರೆ ಈಕೆ ಆಂಧ್ರದಲ್ಲೇ ಸೆಟಲ್ ಆಗಿ ನಮ್ಮವರ ಪಾಲಿಗೆ 'ಗಗನ ಕುಸುಮ'ವಾಗಬಹುದು. ಅಥವಾ ತನ್ನ ಸಂಭಾವನೆಯನ್ನು ಇನ್ನಷ್ಟು ಹೆಚ್ಚಿಸಬಹುದು. ಹೀಗಾಗಿ ಈಕೆಯ ತೆಲುಗು ಚಿತ್ರ ಮುಗ್ಗರಿಸಲಿ ಎಂದು ಗಾಂಧಿನಗರಿಗಳು ಹಿಡಿ ಶಾಪ ಹಾಕಲು ಶುರು ಮಾಡಿದ್ದಾರೆ!

ರಮ್ಯ ಎಂಬ ರಂಗುರಂಗಿನ ನಾಯಕಿ!



...ಪ್ರತಿಭೆಗೆ ಈ ಮಂಡ್ಯದ ಹುಡುಗಿ ...ಷ್ಟು ಫೇಮಸೋ ನಖರಾ ಮಾಡುವುದರಲ್ಲೂ ...ಷ್ಟೇ ಫೇಮಸ್! ಆದರೆ ಈಕೆಯ ಚಿತ್ರಗಳು ...ಕ್ಸ್ ಆಫೀಸ್‌ನಲ್ಲಿ ಗೆಲ್ಲುತ್ತಿರುವುದರಿಂದ, ...ಯ ಕಿರಿಕ್‌ಗಳನ್ನು ಸಹಿಸಿಕೊಂಡು ಈಕೆಯನ್ನೇ ...ಯಕಿಯನ್ನಾಗಿಸುವ ಅನಿವಾರ್ಯ ಪರಿಸ್ಥಿತಿ ...ಧಿನಗರದ ನಿರ್ಮಾಪಕರಿಗೆ ಎದುರಾಗಿದೆ.

ರಾಜ್ ಸಂಸ್ಥೆಯಲ್ಲೂ ಹ್ಯಾಟ್ರಿಕ್

ಸಾಧಾರಣವಾಗಿ ರಾಜ್ ಸಂಸ್ಥೆಯವರು ನಾಯಕಿ ...ರನ್ನು ತಮ್ಮ ಸಂಸ್ಥೆಯ ಮೂಲಕ ಪರಿಚಯಿಸುತ್ತಾರೆಯೇ ...ರತು ಅವರಿಗೆ ಮತ್ತೆ ತಮ್ಮ ಸಂಸ್ಥೆಯ ಚಿತ್ರಗಳಲ್ಲಿ ...ಕಾಶ ನೀಡುವುದು ಅಪರೂಪ. ಮಾಲಾಶ್ರಿ ಮತ್ತು ...ಮಾಳಿಂದ ಹಿಡಿದು ರಕ್ಷಿತಾ ತನಕ ಇದು ನಿಜವಾಗಿದೆ. ...ರೆ ರಮ್ಯ ಮಾತ್ರ ರಾಜ್ ಸಂಸ್ಥೆಯಲ್ಲೂ ಜಯಭೇರಿ ...ರಿಸಿದ್ದಾಳೆ. ಈಗಾಗಲೇ 'ಅಭಿ' ಮತ್ತು 'ಆಕಾಶ್' ಚಿತ್ರಗಳಲ್ಲಿ ...ೀತ್ ರಾಜ್‌ಕುಮಾರ್ ಜೊತೆ ನಟಿಸಿದ್ದ ರಮ್ಯ ರಾಜ್ ಬ್ಯಾನರಿನ ...ಂದಿನ ಚಿತ್ರವಾದ 'ಅರಸು' ಚಿತ್ರಕ್ಕೂ ಆಯ್ಕೆಯಾಗಿ ಅಲ್ಲೂ ...ಟ್ರಿಕ್ ಬಾರಿಸಿದ್ದಾಳೆ. ಬಹುಶಃ ಸುಧಾರಾಣಿ ಕೂಡಾ ತನ್ನ ವೃತ್ತಿ ...ವನದ ಆರಂಭದಲ್ಲಿ ರಾಜ್ ಸಂಸ್ಥೆಯಲ್ಲಿ ಇಷ್ಟೊಂದು ಅವಕಾಶ ...ಸಿರಲಿಲ್ಲ.

ನಾಯಕಿಯನ್ನು ಆಯ್ಕೆ ಮಾಡುವಲ್ಲಿ ರಾಜ್ ಸಂಸ್ಥೆ ಸಿಕ್ಕಾಪಟ್ಟೆ ...ಷ್ಟರ ವಹಿಸುತ್ತದೆ. ಅಂಥ ಸಂಸ್ಥೆಯೇ ರಮ್ಯಳನ್ನು ಆಯ್ಕೆ ಮಾಡಿದೆ ...ದರೆ ಇವಳ ಡಿಮ್ಯಾಂಡ್ ಎಷ್ಟಿದೆ ಎಂದು ಅರ್ಥಮಾಡಿಕೊಳ್ಳಬಹುದು.

ನಿರ್ದೇಶಕಿಯರ ಡಾರ್ಲಿಂಗ್

ನಿರ್ದೇಶಕಿಯರಾದ ಕವಿತಾ ಲಂಕೇಶ್ ಮತ್ತು ಪೂರ್ಣಿಮಾ ಮೋಹನ್ ...ಡ ತಮ್ಮ ಚಿತ್ರಗಳಿಗೆ ರಮ್ಯಳನ್ನೇ ಹಾಕಿಕೊಂಡಿದ್ದಾರೆ. ಕವಿತಾರ ...ನಂ ತನನಂ' ಚಿತ್ರದಲ್ಲಿ ರಮ್ಯ ಹಳ್ಳಿಯ ಹುಡುಗಿಯ ಪಾತ್ರದಲ್ಲಿ ...ಸಿಕೊಂಡರೆ, ಪೂರ್ಣಿಮಾರ 'ಜ್ಯೂಲಿ' ಚಿತ್ರದಲ್ಲಿ ನಗರದ ತರುಣಿಯಾಗಿ ...ಸಿಕೊಂಡಿದ್ದಾಳೆ. ಇವೆರಡೂ ಚಿತ್ರಗಳು ರಮ್ಯಳ ವರ್ಚಸ್ಸನ್ನು ...ಸುವುದರಲ್ಲಿ ಡೌಟೇ ಇಲ್ಲ.

ಮತ್ತೆ ತೆಲುಗಿಗೆ ಪ್ರಯಾಣ

ಪರಭಾಷಾ ಚಿತ್ರಗಳಲ್ಲಿ ನಟಿಸುವ ವ್ಯಾಮೋಹ ಎಲ್ಲಾ ನಾಯಕಿಯರಂತೆ ...ಳಿಗೂ ಇದೆ. ಕನ್ನಡದಲ್ಲಿ ಕೈ ತುಂಬಾ ಅವಕಾಶ, ಬೇಡಿಕೆ ಇದ್ದರೂ ...ನ್ನೆ ಮೊನ್ನೆಯಷ್ಟೇ ತೆಲುಗು ಚಿತ್ರವೊಂದರಲ್ಲಿ ನಟಿಸಲು ಈಕೆ ಸಹಿ ...ದ್ದಾಳೆ. ಕನ್ನಡದಲ್ಲಿ ಯಶಸ್ವಿಯಾದ 'ಅಮೃತಧಾರೆ'ಯನ್ನು ತೆಲುಗಿನವರು ...ಮೇಕ್ ಮಾಡುತ್ತಿದ್ದು ಅಲ್ಲೂ ಈಕೆ ಮತ್ತು ಧ್ಯಾನ್ ನಾಯಕ-...ಯಕಿಯಾಗಿ ನಟಿಸುತ್ತಿದ್ದಾರೆ.

ಈ ಹಿಂದೆ ಕನ್ನಡದ 'ಅಭಿ' ಚಿತ್ರದ ತೆಲುಗು ಅವತರಣಿಕೆಯಲ್ಲಿ ...ಮ್ಯ ನಟಿಸಿದ್ದಳು. ಆದಾದ ನಂತರ 'ಕುತ್ತು' ಎಂಬ ಚಿತ್ರದಲ್ಲಿ ಮ್ಯಾಕ್ಸಿಮಮ್ ...

ವರ್ಣರಂಜಿತ ರಮ್ಯ ಚೈತ್ರಕಾಲ

ಆಗರ್ಭ ಶ್ರೀಮಂತೆಯಾದ ರಮ್ಯ ಚಿತ್ರರಂಗಕ್ಕೆ ಕಾಲಿಡುವಾಗಲೇ ಸುದ್ದಿ ಮಾಡಿದವಳು. ಆಕೆಯ ವ್ಯಕ್ತಿತ್ವವೇ ವರ್ಣರಂಜಿತವಾಗಿದೆ. ಆರಂಭದ ದಿನಗಳಲ್ಲಿ ರಕ್ಷಿತಾ ಜೊತೆ ಕೋಳಿ ಜಗಳ, ನಾಯಕ ನಟ ಸುದೀಪ್ ಜೊತೆ ಮುನಿಸು, 'ಕಂಠಿ' ಚಿತ್ರದ ನಿರ್ದೇಶಕ ಭರತ್‌ಗೆ ರೋಫ್ ಹೊಡೆದದ್ದು, 'ಎಕ್ಸ್‌ಕ್ಯೂಸ್ ಮಿ' ಚಿತ್ರದ ಪ್ರೇಮ್ ಜೊತೆ ಜಗಳವಾಡಿದ್ದು, ತನ್ನ ತಂದೆ-ತಾಯಿ ಬಗ್ಗೆ ಬೋಲ್ಡ್ ಆಗಿ ಹೇಳಿಕೆ ನೀಡಿದ್ದು.... ಇವೆಲ್ಲವೂ ಈಕೆಯನ್ನು 'ಸುದ್ದಿ ಸುಬ್ಬಕ್ಕ'ಳನ್ನಾಗಿ ಮಾಡಿತ್ತು. ಆದರೆ ಈಗ ರಮ್ಯ ಸ್ವಲ್ಪ ಬದಲಾಗಿದ್ದಾಳೆ.

ಹಿಂದೊಮ್ಮೆ ಮಾಲಾಶ್ರೀ ಕನ್ನಡ ಚಿತ್ರರಂಗವನ್ನು ರೂಲ್ ಮಾಡಿದಂತೆ ಮುಂಬರುವ ದಿನಗಳಲ್ಲಿ ರಮ್ಯ ಕನ್ನಡ ಚಿತ್ರರಂಗದ 'ಏಕ ಚಕ್ರಾಧಿಪತ್ಯೆ' ಆಗುತ್ತಾಳೆಯೇ? ಎಂದು ಚರ್ಚೆಯಾಗುತ್ತಿದೆ. ಆದರೆ ಇಂತಹ ಮಾತನ್ನು ಯಾವುದೇ ಮುಲಾಜಿಲ್ಲದೆ ಗಾಂಧಿನಗರದ ಪಂಡಿತರು ತಳ್ಳಿ ಹಾಕುತ್ತಾರೆ.

ಏಕೆಂದರೆ ಮಾಲಾಶ್ರೀಗೆ ರತಿ ವರ್ಚಸ್ಸಿತ್ತು, ಪಡ್ಡೆ ಹುಡುಗರ ದೊಡ್ಡ ಅಭಿಮಾನಿ ವೃಂದವೇ ಆಕೆಗಿತ್ತು. ಆಕೆಯ ಹೆಸರಲ್ಲೇ ಚಿತ್ರ ಮಾರಾಟವೂ ಆಗುತ್ತಿತ್ತು. ಆಕೆಯ ಚಿತ್ರಗಳಿಗೆ ಬಂಡವಾಳ ಹೂಡಲು ಫೈನಾನ್ಷಿಯರ್ ಮುಂದೆಬರುತ್ತಿದ್ದರು. ಆದರೆ ರಮ್ಯ ಆ ಎತ್ತರಕ್ಕೆ ಬೆಳೆದಿಲ್ಲ. ಇಲ್ಲಿಯವರೆಗೆ ಆಕೆಯ ಹೆಸರಿನ ಬಲದಿಂದ ಯಾವ ಚಿತ್ರವೂ ಗೆದ್ದಿಲ್ಲ. ಆಕೆ ನಟಿಸಿದ ಚಿತ್ರಗಳಲ್ಲಿ ಯಶಸ್ವಿ ನಟರಾದ ಉಪೇಂದ್ರ, ಪುನೀತ್, ಧ್ಯಾನ್ ಮೊದಲಾದವರು ಇದ್ದುದರಿಂದ ಚಿತ್ರದ ಯಶಸ್ಸಿನ ಬಹುಪಾಲು ಹೀರೋಗಳಿಗೆ ಸಂದಿದೆ.

ಹೊಸಬರಿಗೂ 'ಸೈ'

ಬಹುಶಃ ತನ್ನ ನಾಮಬಲದಲ್ಲೇ ಚಿತ್ರ ಗೆಲ್ಲಬೇಕೆಂಬ ಉದ್ದೇಶದಿಂದ ರಮ್ಯ ಜನಪ್ರಿಯವಲ್ಲದ ಹೊಸ ನಾಯಕ ನಟರೊಂದಿಗೂ ನಟಿಸಲು ಹೊರಟಿದ್ದಾಳೆ. 'ಜೊತೆ ಜೊತೆಯಲಿ' ಚಿತ್ರದಲ್ಲಿ ಪ್ರೇಮ್, 'ತನನಂ, ತನನಂ' ಚಿತ್ರದಲ್ಲಿ ಶ್ಯಾಮ್, 'ಜ್ಯೂಲಿ'ಯಲ್ಲಿ ದಿನೋ ಮೊರಿಯೊ ಮತ್ತು 'ಸೇವಂತಿ ಸೇವಂತಿ'ಯಲ್ಲಿ ವಿಜಯ ರಾಘವೇಂದ್ರ ಜೊತೆ ನಟಿಸಿ ತನಗೆ ತಾನೇ 'ಅಗ್ನಿಪರೀಕ್ಷೆ' ಒಡ್ಡಿಕೊಂಡಿದ್ದಾಳೆ. ಅದೇನೆ ಇರಲಿ, ಇಷ್ಟೊಂದು ಅಲ್ಪ ಸಮಯದಲ್ಲಿ ಸೂಪರ್‌ಸ್ಟಾರ್ ಮತ್ತು ಹೊಸಬರೊಂದಿಗೆ ನಟಿಸಿ, ಚಿತ್ರದಿಂದ ಚಿತ್ರಕ್ಕೆ ತನ್ನ ಸಂಭಾವನೆ ಏರಿಸಿ ಅತ್ಯಂತ ದುಬಾರಿ ನಾಯಕಿ ಎನಿಸಿರುವ ರಮ್ಯ ಸದ್ಯಕ್ಕೆ ಗಾಂಧಿನಗರದವರ ಪಾಲಿಗೆ ಅದೃಷ್ಟ ದೇವತೆ; ಅಭಿಮಾನಿಗಳ ಪಾಲಿಗೆ ನೆಚ್ಚಿನ ನಾಯಕಿ!

-ಸದಾಶಿವ ಶೆಣೈ



ಅರ್ಧಾಂಗಿಯರ ಆಲಿಂಗನ!

ರಾಮನಗರದಲ್ಲಿ ಅದ್ಧೂರಿಯಾಗಿ ನಡೆದ ಸಿನಿಮಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕನ್ನಡದ ಸಿನಿದಂಪತಿಗಳು ಸಿನಿಕರನ್ನು ನಾಚಿಸುವಂತೆ ವೇದಿಕೆಯ ಮೇಲೆ ಪ್ರೇಮ ತರಂಗಗಳನ್ನೆಬ್ಬಿಸಿಬಿಟ್ಟರು.



ಶೃತಿ ಪ್ರಶಸ್ತಿ ಪಡೆಯುತ್ತಿದ್ದಂತೆ ಪತಿದೇವ ನಿರ್ದೇಶಕ ಮಹೇಂದರ್ ವೇದಿಕೆ ಮೇಲೆ ಶೃತಿಯನ್ನು ತಬ್ಬಿ 'ಪಪ್ಪಿ' ಕೊಟ್ಟು ರಾಮನಗರದ ಜನರನ್ನು ತಬ್ಬಿಬ್ಬುಗೊಳಿಸಿಬಿಟ್ಟರು. 'ಗೌಡ್ರು' ಚಿತ್ರಕ್ಕೆ ಮಹೇಂದರ್ ನಿರ್ದೇಶಕರಾಗಿರುವುದರಿಂದ ಅವರು ವೇದಿಕೆ ಏರಿದ್ದಕ್ಕೆ ಸಮರ್ಥನೆಯಿತ್ತು ಬಿಡಿ.



ಸಿ.ಎಂ. ಬೇಗ ಹೊರಡಲಿದ್ದಾರೆ ಎಂಬ SMS ನೋಡಿದ ನಟ ತಾರ ತರಾತುರಿಯಲ್ಲಿ ಗಂಡ ಫೋಟೋಗ್ರಾಫರ್ ವೇಣುವನ್ನು ಕರೆದುಕೊಂಡು ವೇದಿಕೆ ಏರಿಬಿಟ್ಟರು. ವೇಣು ಪ್ರಶಸ್ತಿ ಪಡೆದು, ರಾಮನಗರದ ರೇಶ್ಮೆ ಹಾರವನ್ನು ಹಾಕಿಸಿಕೊಳ್ಳುವಾಗ ಹಾರದಲ್ಲಿ ತನ್ನ ತಲೆಯನ್ನು ತೂರಿ, ಹಾರದೊಳಗೇ ಗಂಡನೊಂದಿಗೆ ಬಂಧಿಯಾಗಿ ಜನರಲ್ಲಿ ನಗೆ ಉಕ್ಕಿಸಿಬಿಡೊದೆ? ವಯಸ್ಸಲ್ಲದ ವಯಸ್ಸಲ್ಲಿ ಮದುವೆಯಾದ್ರೆ ಹಿಂಗೇ ಆಡ್ತಾರೇನೋ?

ಟಿವಿಯಲ್ಲಿ ಲೈವ್ ಕಾರ್ಯಕ್ರಮ ನೋಡುತ್ತಿದ್ದ ಚಿತ್ರರಸಿಕರಿಗೆ ಒಂದಿಷ್ಟು ಮನರಂಜನೆ ನೀಡಿದರು ಈ ಎರಡು ತಾರಾದಂಪತಿಗಳು....

ಅಂದಂತೆ ಅಂದು ಬಹುತೇಕರ ಮನ ಸೆಳೆದದ್ದು ಕ್ಯಾಮೆರಾ ಮೂಲಕ ಮೂರ್ನಾಲ್ಕು ಸಲ ಕಂಡ ಎರಡು ಮುದ್ದು ಮುಖಗಳು-ಸಮರ್ & ಸಮಯ್!

ಅಳಿಯನೆಲ್ಲೋ ಮಾವನಲ್ಲೇ



ಧಾರಾವಾಡದ ಅಳಿಮಯ್ಯ ಅನಿರುದ್ಧನನ್ನು push ಮಾಡಲು ವಿಷ್ಣು ತಿಣುಕಾಡುತ್ತಲೇ ಇದ್ದಾರೆ. ದಿನೇಶ್ ಬಾಬು ಕೈಲಿ 'ಚಟ್ಟೆ' ಮಾಡಿಸಿದರೂ, ಅನಿರುದ್ಧ 'ಮೊಟ್ಟೆ'ಯಿಂದ ಹೊರ ಬರಲಿಲ್ಲ. ಮತ್ತೊಂದೆರಡು ವಿಷ್ಣು ಪ್ರಯತ್ನಗಳೂ ಫ್ಲಾಪ್ ಆದವು. ಈಗ ಅಳಿಯನನ್ನು ಮೇಲೆ ತರಲು ದಿನೇಶ್‌ಬಾಬು ಜೊತೆ ಮತ್ತೊಮ್ಮೆ 'ನೀನೆಲ್ಲೋ ನಾನಲ್ಲೇ' ಎನ್ನುತ್ತಿದ್ದಾರೆ ವಿಷ್ಣು

ಯಾರು 'ಜೂಲಿ?'

'ಜೂಲಿ' ಚಿತ್ರದ ಜಾಹೀರಾತಿನಲ್ಲಿ ರಮ್ಯಾ ಅವ್ಳೆ... ಇರ್ಲೇಬೇಕಲ್ಲ... ಆದರೆ ರಮ್ಯಾಗೆ ಚಾಲೆಂಜ್ ಎನ್ನುವಂತೆ ಪೂರ್ಣಿಮಾ ಸಹ ಅವ್ಳೆ... ಯಾರು ಈ ಹೊಸ ನಟಿಮಣಿ ಅಂತಾ ಚಿಂತಿಸ ಬೇಡಿ... ಈಯಮ್ಮ 'ಜೂಲಿ'ಯ ನಿರ್ದೇಶಕಿ, ನಿರ್ಮಾಪಕಿ!



"ಜಾಹೀರಾತಿನಲ್ಲಿ ನೀವು ರಮ್ಯಾಳ ಆಂಟಿ ಕಾಣಿಸ್ತಿರಿ" ಅಂದ್ರೆ ಬೇಸರ ಪಡುವ ಪೂರ್ಣಿಮಾ ಮೇಡಂ "No, ನಾನವಳ ಅಕ್ಕನ ತರಹ ಕಾಣ್ತೇನಿ" ಎಂದುಬಿಡುತ್ತಾರಂತೆ. 'ಭಲೇಜೋಡಿ' ಚಿತ್ರಕ್ಕೆ ರಕ್ಷಿತಾ ನಾಯಕಿ ಎಂದು ಪೂರ್ಣಿಮಾ ಘೋಷಿಸಿರುವುದರಿಂದ ರಮ್ಯಾ ಇನ್ನು ಮುಂದೆ ಚಿತ್ರದ ಪ್ರಚಾರದಲ್ಲಿ ಪಾಲ್ಗೊಳ್ಳುವುದಿಲ್ಲವಂತೆ!

"ಮೇರಾ ನಾಮ್ ಚಿನ್ ಚಿನ್ ಚು"sss



ಓ.ಪಿ. ನಯ್ಯರನ 'ಬ್ರಿಡ್ಜ್' ಚಿತ್ರದ ಈ ಚುಂಬಕ ಗೀತೆ ...ಹಾಡಿದ್ದು ಗೀತಾದತ್ ಅಂತಾ ಗೊತ್ತಿರದಿದ್ದರೂ ಈ ಹಾಡಿಗೆ ...ಹೆಜ್ಜೆ ನೀಡಿದಾಕೆ ಸ್ವೀಟ್ honey ಹೆಲೆನ್ ಎಂಬುದು ...ಬಹುತೇಕರಿಗೆ ಗೊತ್ತು. ಮೊನ್ನೆ ಹೆಲೆನ್ ಜೀವನಚರಿತ್ರೆ ...ಬಿಡುಗಡೆಯಾದಾಗ ಈ 'ಮೆಹಬೂಬಾ' ಚೆಲುವೆಯ ಕ್ಯಾಬರೆ ...ದಿನಹಾಯ್ತು.

ಹೆಲೆನ್‌ಳದು ಮಾದಕ-ಮೋಹಕ ಮಾಯೆ! ನಾವು ಎರಡು ...ವಾರದ ಹಿಂದೆ ಸೋಫಿಯಾ ಲಾರೆನ್ ಎರಡನೇ ಮಹಾಯುದ್ಧದ ...ಭೀಕರತೆಗಳನ್ನು ನೋಡುತ್ತಾ ಬೆಳೆದಿದ್ದರ ಕುರಿತು ಬರೆದಿದ್ದನ್ನು ನೀವು ...ಮರೆತಿರಲಾರಿರಿ. ಈ ಹೆಲೆನ್ ಸಹ ಎರಡನೇ ...ಮಹಾಯುದ್ಧದ ನೋವು ಉಂಡವಳು. ಮೂಲತಃ ...ಬರ್ಮಾದವಳಾದ ಹೆಲೆನ್ ಯುದ್ಧ ನಿರಾಶ್ರಿತಳಾಗಿ ...ತಾಯಿಯೊಂದಿಗೆ ಭಾರತ ಪ್ರವೇಶಿಸಿದ ಆಂಗ್ಲೋ-...ಇಂಡಿಯನ್ ಹೆಣ್ಣು ಮಕ್ಕಳ ಪೈಕಿ, ಸೋಫಿಯಾ ...ಲಾರೆನ್‌ರಂತೆ ಬಾಲ್ಯದಲ್ಲಿ 'ಬಿಂದಿಗೆ ಬದುಕು' ಸಾಗಿಸಿದ ...ಈ ಹೆಲೆನ್ ಕಥಕ್ ನೃತ್ಯ ಕಲಿತು ಸಂಬಂಧಿಕ ಕಕ್ಕೂ ...ನೃತ್ಯಗಾತಿಯ ಸಹಾಯದಿಂದ 1951 ರಲ್ಲಿ 'ಶಬಿಸ್ತಾನ್' ...ಚಿತ್ರದಲ್ಲಿ ಸಹನೃತ್ಯ ಕಲಾವಿದೆಯಾಗಿ ಬಾಲಿವುಡ್ ...ಪ್ರವೇಶಿಸಿದಳು.



ದೇವಾನಂದ್, ಶೂಕಲ್ ತಾರಾಗಣದ 'ಬಾರಿಶ್'ನಲ್ಲಿ 'ಮಿಸ್ಟರ್ ...

[illegible]

ಮೂಲಕ ಈ ವೈಯ್ಯಾರಿ ಖ್ಯಾತ ಕ್ಯಾಬರೆ ಡ್ಯಾನ್ಸರ್ ಆಗುವ ಹಾದಿಯಲ್ಲಿ ಮೊದಲ ಹೆಜ್ಜೆ ಇಟ್ಟಳು. ಸಂಪದ್ಭರಿತ ಹಿಂಭಾಗಗಳ ಮಾಯಗಾತಿ ಡ್ಯಾನ್ಸರ್‌ಗಳ ಆ ಕಾಲದಲ್ಲಿ ಹೆಲೆನ್ ತನ್ನ trim figure ನಿಂದ ಯುವಕರನ್ನೆಲ್ಲಾ ಆಕರ್ಷಿಸತೊಡಗಿದಳು. ಕಟ್ಟಾ ಸಂಪ್ರದಾಯಸ್ಥರೂ ಕುಟುಂಬ ಸಮೇತ ಹೆಲೆನ್ ಕ್ಯಾಬರೆ ಸವಿಯ ಬಹುದಾಗಿದ್ದರೆ ಅದಕ್ಕೆ ಹೆಲೆನ್‌ಳ ಅಂತರ್ಗತ ಸಹಜ ಮೋಹಕತೆಯೇ ಕಾರಣ... ಹಾಗೆಯೇ ಆವಳ ಬೆಂಕಿಯಂತಹ ಪಚ್ಚೆ ಹಸಿರಿನ ನಯನಗಳೂ ಸಹ!

ಈಗ 67 ವರ್ಷಗಳ ಮುಸ್ಸಂಜೆಯಲ್ಲಿರುವ ಹೆಲೆನ್ ಇತ್ತೀಚಿನ ವರ್ಷಗಳಲ್ಲಿ ಖಾಮೋಶಿ, ಹಮ್ ದಿಲ್ ದೆ ಚುಕೆ ಸನಮ್, ಮೊಹಬ್ಬತೆ ಮುಂತಾದ ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದಾಳೆ.

ಆ ಕಾಲದಲ್ಲಿ ಕ್ಯಾಬರೆ ಹಾಡು ಎಂದರೆ ಅದು ಆಶಾ ಭೋಸ್ಲೆ ಹೆಲೆನ್‌ರ ಸಂಗಮವೆಂದೇ ಅರ್ಥ. 'ತಿಸ್ರಿ ಮಂಜಿಲ್' ಚಿತ್ರದ 'ಓ ಹಸೀನಾ ಜುಲ್ಫೋವಾಲಿ,' 'ಕರಾವಾನ್' ಚಿತ್ರದ 'ಪಿಯಾ ತು ಅಬ್ ತೊ ಆ ಜಾ', 'ಡಾನ್'ನಲ್ಲಿನ 'ಯೆ ಮೇರಾ ದಿಲ್, ಪ್ಯಾರ್ ಕಾ ದಿವಾನಾ...' ಈ ಆಶಾ-ಹೆಲೆನ್ ಕಾಂಬಿನೇಷನ್ ಹಾಡುಗಳು ಇಂದಿಗೂ ಜನಪ್ರಿಯ.

'ಗಂಗಾ ಜಮುನಾ'ದಲ್ಲಿನ 'ತೋರಾ ಮನ್ ಬಡಾ ಪಾಪಿ'ಯಂತಹ ಗಂಭೀರ ಹಾಡುಗಳಲ್ಲೂ ಹೆಲೆನ್ ಕ್ಲಾಸಿಕ್ ಡ್ಯಾನ್ಸ್ ಮಾಡಿದ್ದಾಳೆ.

ಈಗ ಪೆಂಗ್ವಿನ್ ಹೌಸ್ ಜೆರ್ರಿ ಪಿಂಟೋ ಬರೆದ "Helen: The Life and Times of an H-bomb" ಎಂಬ ಜೀವನ ಚರಿತ್ರೆಯನ್ನು ಬಿಡುಗಡೆ ಮಾಡಿ ಮೋಹಕ ಮಾಯಾವಿ ಡ್ಯಾನ್ಸರ್‌ಳನ್ನು ಮತ್ತೆ ನೆನಪಿಗೆ ತಂದಿದೆ.

ಈಗಲೂ ಹೆಲೆನ್ ನಮ್ಮ ಎದುರಿಗೆ "ಲೈಲಾ ಹೂ ಮೈ ಲೈಲಾ... ಐಸಿ ಹೂ ಮೈ ಲೈಲಾ..." ಎಂದು ಕುಣಿಯುತ್ತಲೇ ಇದ್ದಾಳೆ ಎನಿಸುತ್ತಿದೆಯಲ್ಲವೇ?



R.B.P. LANKESH, Kannada Weekly Price Rs. 10/- 12-4-2006 RNI No. KARKAN2005/14648 Regd.No.KA/BG(S)/2036/2005-0

ಸುದೀಪ್ ಮೇಲುಗೈ!




ಈ ಸುದ್ದಿಯನ್ನು ಗಾಂಧಿನಗರದವರಾಗಲಿ, ಪ್ರೇಕ್ಷಕರಾಗಲಿ ಖಂಡಿತಾ ನಂಬಲಾರರು. ಆದರೆ ನಂಬದರೆ ನಂಬಿ, ಬಿಟ್ಟರೆ ಬಿಡಿ. ಅದೇನೆಂದರೆ ಸುದೀಪ್ ನಿರ್ದೇಶನದ ಚಿತ್ರವೊಂದರಲ್ಲಿ ನಟಿಸಲು ವಿಷ್ಣುವರ್ಧನ್ ಒಪ್ಪಿಕೊಂಡಿದ್ದಾರೆ. ಆ ಚಿತ್ರದಲ್ಲಿ ಯುವ ನಾಯಕ ನಟ ಸುದೀಪ್ ಕೂಡಾ ನಟಿಸಲಿದ್ದಾರೆ. ಅಂದಹಾಗೆ ಈ ಚಿತ್ರವನ್ನು ಸ್ವತಃ ಸುದೀಪ್ ನಿರ್ಮಿಸಲಿದ್ದಾರೆ.

ಹಾಗೆ ನೋಡಿದರೆ, ವಿಷ್ಣು ಕಾಲ್‌ಶೀಟ್‌ಗಾಗಿ ಕಳೆದ ಮೂರ್‍ನಾಲ್ಕು ವರ್ಷಗಳಿಂದ ಭಗೀರಥ ಪ್ರಯತ್ನ ನಡೆಸುತ್ತಿದ್ದವರು ನಾಯಕ ನಟ ರಮೇಶ್. ಈಗ ರಮೇಶ್‌ಗಿಂತ ಮೊದಲು ವಿಷ್ಣು ಕಾಲ್‌ಶೀಟನ್ನು ಸುದೀಪ್ ಪಡೆದಿದ್ದಾರೆ.

ವಿಷ್ಣು ಕಾಲ್‌ಶೀಟ್ ಪಡೆಯುವ ಮೂಲಕ ಸುದೀಪ್ ವೈಯಕ್ತಿಕವಾಗಿ ಮತ್ತೊಂದು ಲಾಭ ಪಡೆದಿದ್ದಾರೆ. ಅದೇನೆಂದರೆ ತನ್ನ ಪ್ರತಿಸ್ಪರ್ಧಿ ದರ್ಶನ್ ವಿಷ್ಣು ನಾಯಕತ್ವದ 'ಸ್ನೇಹಲೋಕ' ತಂಡದ ಸಕ್ರಿಯ ಸದಸ್ಯ. ಅಷ್ಟೇ ಅಲ್ಲ, ಅಂಬರೀಶ್ ಮತ್ತು ವಿಷ್ಣು ಒಂದು ರೀತಿಯಲ್ಲಿ ದರ್ಶನ್ ಸಿಂಪಥೈಸರ್ಸ್ ಕೂಡಾ. ಆದರೆ ಈಗ ವಿಷ್ಣು ಕಾಲ್‌ಶೀಟ್ ಸಿಕ್ಕಿರುವುದರಿಂದ ಒಂದು ರೀತಿಯಲ್ಲಿ ಸುದೀಪ್ ಮೇಲುಗೈ ಸಾಧಿಸಿದಂತಾಗಿದೆ.

ಯುಗಾದಿ ಪಿಚ್ಚರು!

ಎಂದಿನಂತೆ ಈ ಯುಗಾದಿಗೂ 111 ಚಿತ್ರಗಳ ಘೋಷಣೆಯಾಗಿದೆ. ಸುನಾಮಿ ಅಪ್ಪಳಿಸಿದ ದಿನದಿಂದಲೂ ಜಾಹೀರಾತಲ್ಲಿ ಬರುತ್ತಲೇ ಇರುವ 'ಸುನಾಮಿ' ಎಂಬ ಚಿತ್ರ ರಿಲೀಸ್‌ಗೆ ರೆಡಿ ಎಂದು ರೀಲ್ ಬಿಡಲಾಗಿದೆ. 'ಇವಳಾ ಜಂಭದ ಹುಡುಗಿ' ಎಂಬ ಹೆಸರಿನ 'ಭಾ-ರತಿ' ಲೆವೆಲ್ಲಿನ ಚಿತ್ರದ ಘೋಷಣೆ ಆಗಿದೆ- ಜಾಹೀರಾತಲ್ಲಿ ಮಾತ್ರ. 'ಎಂದೂ ಸೋಲದ' ಜ್ಯೂ.ಪ್ರಭಾಕರ್‌ನ 'ಮಹಾನಗರ' ಮೂವತ್ತೂರನೇ ಸಲ 'ಚಿತ್ರೀಕರಣ ಆರಂಭ' ಎಂದು ಅರವತ್ತಾರನೇ ಸಲ ಜಾಹೀರಾತಿನಲ್ಲಿ ಬಂದಿದೆ!




ಇಬ್ಬರು ನಾಯಕಿಯರು 'ಅಪ್ಪು'ಗೆ

ಪುನೀತ್ ರಾಜ್‌ಕುಮಾರ್‌ಗೆ ಪ್ರಮೋಷನ್ ಸಿಕ್ಕಿದೆ.ಈತನಕ ಪುನೀತ್ ಚಿತ್ರಗಳಲ್ಲಿ ಒಬ್ಬಳೇ ನಾಯಕಿ ಇರುತ್ತಿದ್ದಳು. ಆದರೆ ಇದೇ ಮೊದಲ ಬಾರಿಗೆ 'ಅರಸು' ಚಿತ್ರದಲ್ಲಿ ಪುನೀತ್ ಇಬ್ಬರು ನಾಯಕಿಯರ ಜೊತೆ ನಟಿಸುತ್ತಿದ್ದಾನೆ.

ಚಿತ್ರದ ಮುಹೂರ್ತದ ದಿನದಂದು "ಇನ್ನೂ ನಾಯಕಿಯರ 'ತಲಾಶ್' ನಡೆಸುತ್ತಿದ್ದೇನೆ" ಎಂದು ರಾಘವೇಂದ್ರ ರಾಜ್‌ಕುಮಾರ್ ಹೇಳಿದ್ದರು. ಆದರೆ ಇದೀಗ ಬಂದ ಸುದ್ದಿ ಪ್ರಕಾರ ಪುನೀತ್ ಜೊತೆ ಈಗಾಗಲೇ ನಟಿಸಿರುವ ರಮ್ಯ ಮತ್ತು ಮಲೆಯಾಳಿ ಕುಟ್ಟಿ ಮೀರಾ ಜಾಸ್ಮಿನ್ ನಾಯಕಿಯರಾಗಿ ಆಯ್ಕೆಯಾಗಿದ್ದಾರೆ.

ರವಿ ಕೈಲಿ ಮತ್ತೆ ಬಾಲು!

ರಾಜಕೀಯದಲ್ಲಿ ಯಾರೂ ಪರ್ಮನೆಂಟ್ ಶತ್ರುಗಳಲ್ಲ ಎಂಬುದು ಹಳಸಲು ಗಾದೆ. ಹೊಸ ಗಾದೆ ಏನೆಂದರೆ, ಸಿನಿಮಾ ರಂಗದಲ್ಲೂ ಯಾರೂ ಪರ್ಮನೆಂಟ್ ಶತ್ರುಗಳಲ್ಲ ಎಂಬುದು.

ಇದಕ್ಕೆ ಲೇಟೆಸ್ಟ್ ಉದಾಹರಣೆ ಎಂಬಂತೆ ಎರಡು ವರ್ಷಗಳಿಂದ ಪರಸ್ಪರ ಮುನಿಸಿಕೊಂಡಿದ್ದ ರವಿಚಂದ್ರನ್ ಮತ್ತು ಬಾಲಮುತ್ತಯ್ಯ ರಾಜಿಯಾಗಿದ್ದಾರೆ. ಬರೀ ಅಷ್ಟೇ ಅಲ್ಲ, ಮೊನ್ನೆ ತುಂಬಾ ಗುಟ್ಟಾಗಿ ಇವರ ಕಾಂಬಿನೇಷನ್‌ನ ಹೊಸ ಚಿತ್ರ ಕೂಡಾ ಸೆಟ್ಟೇರಿದೆ. ಚಿತ್ರದ ಹೆಸರು 'ನೀಲಕಂಠ'.

ಬಾಲಮುತ್ತಯ್ಯ ಮತ್ತು ಕ್ರೇಜಿ ಸ್ಟಾರ್ ನಡುವಿನ ಗೆಳೆತನ ಎರಡು ದಶಕಗಳಿಗೂ ಹಳೆಯದು. ವಾಲ್‌ಪೋಸ್ಟರ್ ಪ್ರಿಂಟ್ ಮಾಡುತ್ತಿದ್ದ ಬಾಲಮುತ್ತಯ್ಯ ರವಿಯ ಕುಟುಂಬದ ಸದಸ್ಯ ಎಂಬಷ್ಟು 'ಆಪ್ತ'ರಾಗಿದ್ದರು. ಇದರ ಫಲವೇ ಬಾಲಮುತ್ತಯ್ಯನಿಗೆ ರವಿಚಂದ್ರನ್ ಕಾಲ್‌ಶೀಟ್ ನೀಡಿದ್ದರು. ಆದರೆ ಚಿತ್ರ ಮುಗಿಯುವಷ್ಟರಲ್ಲಿ ಇವರಿಬ್ಬರ ಎರಡು ದಶಕದ ಸ್ನೇಹ ಕೊಳೆತು ಹೋಯಿತು. ಇಬ್ಬರೂ ಮಾಧ್ಯಮದ ಮುಖಾಂತರ ಕೆಸರಾಟದಲ್ಲಿ ತೊಡಗಿಕೊಂಡರು.

ಇದಾದ ನಂತರ ಬಾಲಮುತ್ತಯ್ಯ ಸುದೀಪ್‌ನನ್ನು ಹಾಕಿಕೊಂಡು 'ನಮ್ಮಣ್ಣ' ಎಂಬ ಅದ್ದೂರಿ ಚಿತ್ರ ತೆಗೆದರು. ಚಿತ್ರ ಫ್ಲಾಪ್ ಆಯ್ತು. ಬಾಲುಗೆ ಕನಿಷ್ಠವೆಂದರೂ ಎರಡು ಕೋಟಿ ನಷ್ಟವಾಯಿತು. ಕೊನೆಗೆ ಹಳೆ ಗಂಡನ ಪಾದವೇ ಗತಿ ಎಂಬಂತೆ ಮತ್ತೆ ರವಿಚಂದ್ರನ್ ಹತ್ತಿರ ಬಾಲು ಬಂದರು. ಈಗ ಇವರಿಬ್ಬರ 'ನೀಲಕಂಠ' ಎಂಬ ಹೊಸ ಚಿತ್ರ ಶುರುವಾಗಿದೆ. ಇದು ಮುಗಿಯುವ ಹೊತ್ತಿಗೆ ಇವರಿಬ್ಬರು ಮತ್ತೆ ಏನು ಮಾಡುತ್ತಾರೋ ಗೊತ್ತಿಲ್ಲ.

'ಹುಚ್ಚಿ'ಗೆ ಬಿದ್ದು ಹುಚ್ಚು!



ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ ಮೊನ್ನೆ ರಕ್ಷಿತಾಳ ಬರ್ತ್‌ಡೇ ದಿನದಂದು ಓಂಪ್ರಕಾಶ್ ನಿರ್ದೇಶನದ 'ಹುಚ್ಚಿ' ಚಿತ್ರ ಸೆಟ್ಟೇರಬೇಕಾಗಿತ್ತು.


ಆದರೆ ರಕ್ಷಿತಾ ತನ್ನ ಬರ್ತ್‌ಡೇ ದಿನದಂದು ದೇವಸ್ಥಾನ, ಆಶ್ರಮಗಳಿಗೆ ಹೋಗಿ ಬಂದಳೇ ವಿನಃ ಯಾವುದೇ ಹೊಸ ಚಿತ್ರ ಸೆಟ್ಟೇರಲೇ ಇಲ್ಲ.

ಗಾಂಧಿನಗರದ ಪ್ರಕಾರ ಓಂಪ್ರಕಾಶ್-ರಕ್ಷಿತಾ ಜೋಡಿಯ ಹೊಸ ಚಿತ್ರ ಇನ್ಮುಂದೆ ಸೆಟ್ಟೇರುವ ಸಾಧ್ಯತೆ ಇಲ್ಲವೇ ಇಲ್ಲ. ಹೀಗಾಗಿ ರಕ್ಷಿತಾ ಮತ್ತು ಪ್ರೇಕ್ಷಕರು ಹುಚ್ಚಿಯ ಕಾಟದಿಂದ ಸ್ವಲ್ಪದರಲ್ಲಿಯೇ ಪಾರಾಗಿದ್ದಾರೆ ಎನ್ನಬಹುದು!



'ಹನಿಮೂನ್ ಎಕ್ಸ್‌ಪ್ರೆಸ್'ನಲ್ಲಿ ಸಂತೋಷಿ

ಕಲ್ಲನ್ನು ಹೂವಾಗಿಸಿದ ಮಧು ಬಂಗಾರಪ್ಪ



ಮಧು ಬಂಗಾರಪ್ಪ ಮಾತಾಡಿದಾಗಲೆಲ್ಲಾ 'ತೋಳ ಬಂತು ತೋಳ' ಎಂಬ ಗಾದೆ ನೆನಪಾಗುತ್ತಿತ್ತು. ಏಕೆಂದರೆ "ನಾನೊಂದು ಅದ್ದೂರಿ ಚಿತ್ರವನ್ನು ನಿರ್ಮಿಸಲು ಯೋಚಿಸುತ್ತಿದ್ದೇನೆ" ಎಂದು ಕಳೆದ ಏಳೆಂಟು ವರ್ಷಗಳಿಂದ ಬಹುತೇಕ ಎಲ್ಲಾ ಸಂತೋಷ ಕೂಟಗಳಲ್ಲಿ ಮಧು ಹೇಳುತ್ತಲೇ ಬಂದಿದ್ದರು. ಆದರೆ ಅವರ ಚೊಚ್ಚಲ ಚಿತ್ರ ಸೆಟ್ಟೇರಲೇ ಇಲ್ಲ.

ಅವರ ಭಾವ ಶಿವರಾಜ್‌ಕುಮಾರ್ ಯಶಸ್ವಿ ನಾಯಕ ನಟ. ಅವರದ್ದೇ ಕ್ಯಾಸೆಟ್ ಕಂಪನಿ ಇದೆ. ರೇಕಾರ್ಡಿಂಗ್ ಥಿಯೇಟರ್ ಕೂಡಾ ಇದೆ. ಸಿನಿಮಾ ಥಿಯೇಟರ್ ಇದೆ. ಚಿತ್ರವನ್ನು ಹಂಚಿಕೆ ಮಾಡಿದ ಅನುಭವವೂ ಅವರಿಗಿದೆ. ಇವೆಂಟ್ ಮ್ಯಾನೇಜರ್ ಆಗಿ ಚಿತ್ರರಂಗದ ಅನೇಕ ದೊಡ್ಡದೊಡ್ಡ ಸಮಾರಂಭವನ್ನು ಅವರೇ ಮಾಡಿದ್ದಾರೆ.

ಇಷ್ಟೆಲ್ಲಾ ಅನುಭವವಿದ್ದರೂ ಮೊನ್ನೆ ಯಾರಿಗೂ ಹೇಳದೆ, ಸದ್ದುಗದ್ದಲವಿಲ್ಲದೆ ಮಧು ಚಿತ್ರದುರ್ಗದಲ್ಲಿ ತಮ್ಮ ಮೊದಲನೆ ಚಿತ್ರ ಶುರು ಮಾಡಿದ್ದಾರೆ. ಚಿತ್ರದ ಹೆಸರು 'ಕಲ್ಲರಳಿ ಹೂವಾಗಿ'. ಇದರ ನಿರ್ದೇಶಕರು ನಾಗಾಭರಣ. ವಿಜಯ ರಾಘವೇಂದ್ರ ನಾಯಕ ನಟ.

ಚಿತ್ರರಂಗದಲ್ಲಿ ಬೇರೆ ನಿರ್ಮಾಪಕರಿಗೆಲ್ಲಾ ಅದ್ದೂರಿ ಕಾರ್ಯಕ್ರಮಗಳನ್ನು ಏರ್ಪಡಿಸಿ ಪಬ್ಲಿಸಿಟಿ ಕೊಡಿಸುತ್ತಿದ್ದ ಮಧು, ತನ್ನ ಚೊಚ್ಚಲ ನಿರ್ಮಾಣದ ಚಿತ್ರವನ್ನು ಮಾತ್ರ ಯಾಕೆ ಸಿಂಪಲ್ ಮತ್ತು ಗುಟ್ಟಾಗಿ ಮಾಡಿದರೆಂಬುದು ಅರ್ಥವಾಗುತ್ತಿಲ್ಲ.

ಅದೇನೆ ಇರಲಿ, ಮಧು ರಿಮೇಕ್‌ಗೆ ಕೈಹಾಕದೆ, ಒಂದು ಐತಿಹಾಸಿಕ ಚಿತ್ರದೊಂದಿಗೆ ತಮ್ಮ ನಿರ್ಮಾಣ ಸಂಸ್ಥೆ ಆರಂಭಿಸುತ್ತಿರುವುದಕ್ಕೆ 'ಬೇಷ್' ಎನ್ನಲೇಬೇಕು.

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676427 Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44